ರಾಜ್ಯದಲ್ಲಿ ಇದೀಗ ಎರಡು (ಬೆಂಗಳೂರು ಬೆಮೆಲ್ ಮತ್ತು ಕೆಜಿಎಫ್) ಸಾಮಾನ್ಯ ಮಾದರಿಯ ಕೋಚ್ ಫ್ಯಾಕ್ಟರಿಗಳಿದ್ದರೂ ಕೂಡ ಇಲ್ಲಿ ನಿರ್ಮಾಣವಾಗುವ ಕೋಚ್‌ಗಳನ್ನು ದೆಹಲಿ, ಪಂಜಾಬ್, ಚಂಡೀಗಢ ಮೊದಲಾದ ರಾಜ್ಯಗಳಿಗೆ ನೀಡಲಾಗುತ್ತಿದೆ. ರಾಜ್ಯದಲ್ಲಿ ಹೊಸ ರೈಲುಗಳ ಆರಂಭಕ್ಕೆ ಒತ್ತಾಯ ಬಂದಾಗಲೆಲ್ಲ ಕೋಚ್‌ಗಳ ಕೊರತೆ ಸಮಸ್ಯೆಯನ್ನು ಮುಂದೊಡ್ಡಲಾಗುತ್ತಿದೆ. ಇದೀಗ ಯಾದಗಿರಿಯಲ್ಲಿ ರೈಲ್ವೆ ಕೋಚ್‌ಗಳ ನಿರ್ಮಾಣ ಆರಂಭಗೊಳ್ಳಲಿದ್ದು, ವೇಗದ ಸಂಚಾರಕ್ಕೆ ಅನುವು ಮಾಡಿಕೊಡುವ ಕೋಚ್‌ಗಳ (ಎಲ್‌ಎಚ್‌ಬಿ) ನಿರ್ಮಾಣ ಆಗಲಿದೆ. ಈ ಕೋಚ್‌ಗಳನ್ನು ರಾಜ್ಯದಲ್ಲಿ ಶತಾಬ್ದಿ, ಇಂಟರ್‌ಸಿಟಿ ರೈಲುಗಳನ್ನು ಆರಂಭಿಸಲು ಬಳಸಿಕೊಳ್ಳಬೇಕಿದೆ. ಈ ಮೂಲಕ ಕಲಬುರಗಿಯಂತಹ ನಗರಗಳಿಂದ ಬೆಂಗಳೂರನ್ನು ಬಹುಬೇಗ ತಲುಪಲು ಸಾಧ್ಯವಾಗಲಿದೆ ಎಂದು ಪ್ರಜಾ ರಾಗ್ ಸಂಘಟನೆಯ ಸಂಸ್ಥಾಪಕ ಸಂಜೀವ ದ್ಯಾಮಣ್ಣನವರ್ ಹೇಳಿದ್ದಾರೆ.

ಕೋಚ್ ಫ್ಯಾಕ್ಟರಿಗೆ ರಾಜ್ಯ ಸರ್ಕಾರ 150 ಎಕರೆ ಭೂಮಿಯನ್ನೂ ಉಚಿತವಾಗಿ ನೀಡಿದ್ದು, ಇಲ್ಲಿನ ಉತ್ಪಾದನೆಯಲ್ಲಿ ರಾಜ್ಯಕ್ಕೇ ಆದ್ಯತೆ ನೀಡಬೇಕಿದೆ ಎಂದು ಅವರು ಹೇಳಿದ್ದಾರೆ.

(37)

HOSADIGANT / BNG
19 AUG 2017

## ಗದಗ-ಕೂಡಗಿ-ಹೂಟಗಿ ರೈಲ್ವೆ ಜೋಡಿ ಮಾರ್ಗ ನಿರ್ಮಾಣಕ್ಕೆ ಚಾಲನೆ

# ರಾಜ್ಯ ರೈಲ್ವೆಗೆ ₹60 ಸಾವಿರ ಕೋಟಿ

▶ಗದಗ/ ಕೊಪ್ಪಳ . ಆ.18 :

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸರಕಾರ ಕರ್ನಾಟಕದ ವಿವಿಧ ರೈಲ್ವೆ ಯೋಜನೆಗಳಿಗಾಗಿ 60 ಸಾವಿರ ಕೋಟಿ ರೂ. ಅನುದಾನ ಒದಗಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ ಎಂದು ರೈಲ್ವೆ ಸಚಿವ ಸುರೇಶ ಪ್ರಭು ಹೇಳಿದರು.



ನವದೆಹಲಿಯ ರೈಲ್ವೆ ಭವನದಲ್ಲಿ ಶುಕ್ರವಾರ ಗದಗ-ಕೂಡಗಿ-ಹೂಟಗಿ ರೈಲ್ವೆ ಜೋಡಿ ಮಾರ್ಗ ನಿರ್ಮಾಣ ಕಾಮಗಾರಿಗೆ ವಿಡಿಯೋ ಲಿಂಕ್ ಮೂಲಕ ಚಾಲನೆ ನೀಡಿ ಹಾಗೂ ಗದಗ ರೈಲ್ವೆ ನಿಲ್ದಾಣದ ಪ್ಲಾಟ್ ಫಾರ್ಂ 2ರ ವಿಸ್ತರಿಸಿದ ಛಾವಣಿ ಉದ್ಘಾಟಿಸಿದ ಬಳಿಕ ವಿಡಿಯೋ ಲಿಂಕ್ ಮೂಲಕವೇ ಮಾತನಾಡಿ, ಪ್ರಸಕ್ತ ವರ್ಷದಲ್ಲಿಯೇ ಕರ್ನಾಟಕ ರಾಜ್ಯದ ವಿವಿಧ 10 ಮಾರ್ಗಗಳ ಡಬ್ಲಿಂಗ್ ಕಾಮಗಾರಿಗೆ 59,779 ಕೋಟಿ ರೂ. ಖರ್ಚು ಮಾಡಲಾಗುತ್ತಿದೆ. ರಾಜ್ಯದಲ್ಲಿ ರೈಲ್ವೆ ಸೌಲಭ್ಯ ವೃದ್ಧಿಯಾಗುತ್ತಿದ್ದು, ಜನತೆಗೆ ಅದರ ಪ್ರಯೋಜನ ದೊರೆಯಲಿದೆ ಎಂದು ಹೇಳಿದರು.

ಹಿಂದಿನ ಸರಕಾರದ ಅವಧಿಯಲ್ಲಿ ರೈಲ್ವೆ ಹಳಿ ಡಬ್ಲಿಂಗ್, ಟ್ರಿಬ್ಲಿಂಗ್ ಯೋಜನೆ, ನಿಲ್ದಾಣಗಳ ನಿರ್ಮಾಣ-ನವೀಕರಣ, ಹೊಸ ಮಾರ್ಗಗಳ ಸರ್ವೆ, ನಿರ್ಮಾಣಕ್ಕಾಗಿ ಕರ್ನಾಟಕಕ್ಕೆ ಬಜೆಟ್‌ನಲ್ಲಿ ಸರಾಸರಿ 835 ಕೋಟಿ ರೂ. ಅನುದಾನ ಒದಗಿಸಲಾಗಿತ್ತು. ಮೋದಿ ಸರಕಾರ ಅದನ್ನು ಹೆಚ್ಚಿಸಿದೆ ಎಂದರು.

**ಐದು ವರ್ಷದೊಳಗೆ ಪೂರ್ಣ:** ಕೊಪ್ಪಳ ಜಿಲ್ಲೆಯ ಭಾಣಾಪುರ ರೈಲ್ವೆ ನಿಲ್ದಾಣದಲ್ಲಿ ಆಯೋಜಿಸಲಾದ ಸಮಾರಂಭ ಉದ್ಘಾಟಿಸಿ ಮಾತನಾಡಿ, ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕು ತಳಕಲ್ ನಿಂದ ಪ್ರಾರಂಭವಾಗುವ ಗದಗ-ವಾಡಿ ರೈಲ್ವೆ ನೂತನ ಮಾರ್ಗದ ಕಾಮಗಾರಿ ಐದು ವರ್ಷದೊಳಗೆ ಪೂರ್ಣಗೊಂಡು, ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ ಎಂದು ಉನ್ನತ ಶಿಕ್ಷಣ ಮಂತ್ರಿಗಳಾದ ಬಸವರಾಜ ರಾಯರಡ್ಡಿ ಹೇಳಿದರು.

ಗದಗ-ವಾಡಿ ನೂತನ ರೈಲ್ವೆ ಮಾರ್ಗ 257 ಕಿ.ಮೀ. ಮಾರ್ಗವನ್ನು ಹೊಂದಿದ್ದು, 1923 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲು 2013-14 ರಲ್ಲಿ ಮಂಜೂರಾತಿ ದೊರೆತಿದ್ದು, ಇದೀಗ ಯೋಜನೆ ವೆಚ್ಚ 2841 ಕೋಟಿ ರೂ. ಗಳಿಗೆ ಪರಿಷ್ಕರಣೆಗೊಂಡಿದೆ. ಮೊದಲ ಬಾರಿಗೆ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮ ವತಿಯಿಂದ ಭೂಮಿಯನ್ನು ರೈತರಿಂದ ಖರೀದಿಸಿ, ಯೋಜನೆಗೆ ವಶಪಡಿಸಿಕೊಳ್ಳುವಂತಹ ಕ್ರಮವನ್ನು ಕೈಗೊಳ್ಳಲಾಗಿದೆ ಎಂದರು.

> ಮೊದಲ ವರ್ಷ 2,200 ಕೋಟಿ ಅನುದಾನ
>
> **ಮೊದಲ ವರ್ಷ 2,200 ಕೋಟಿ ರೂ. ಅನುದಾನ ಹೆಚ್ಚಿಸಲಾಗಿತ್ತು. 2016 ರಲ್ಲಿ 2,779 ಕೋಟಿ, 2017 ರಲ್ಲಿ 3,779 ಕೋಟಿ ರೂ.ಗಳನ್ನು ರಾಜ್ಯದ ರೈಲ್ವೆ ಯೋಜನೆಗಳ ಹೂಡಿಕೆ ಮಾಡಲಾಗಿದೆ. ಗದಗ-ಹುಟಗಿ ಮಾರ್ಗದಿಂದ ಈ ಭಾಗಕ್ಕೆ ಅನುಕೂಲವಾಗಲಿದೆ .**
>
> ■ ಸುರೇಶ ಪ್ರಭು, ರೈಲ್ವೆ ಸಚಿವ

उदय वाणी / मणिपाल
UDAY VANI/MANIPAL
19 AUG 2017

# ರೈಲ್ವೆ ಬೋಗಿ ತಯಾರಿಕಾ ಕಾರ್ಖಾನೆ ಲೋಕಾರ್ಪಣೆ

**ಯಾದಗಿರಿ:** ತಾಲೂಕಿನ ಗುರುಮಠಕಲ್ ಬಳಿಯ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿರುವ ರೈಲ್ವೆ ಬೋಗಿ ತಯಾರಿಕಾ ಕಾರ್ಖಾನೆಗೆ ಹಾಗೂ ವಾಡಿ ಬೈಪಾಸ್ ರೈಲ್ವೆ ಮಾರ್ಗ ನಿರ್ಮಾಣಕ್ಕೆ ನವದೆಹಲಿಯ ರೈಲ್ವೆ ಮಂಡಳಿಯಲ್ಲಿ ರಿಮೋಟ್ ಲಿಂಕ್ ಮೂಲಕ ಕೇಂದ್ರ ರೈಲ್ವೆ ಸಚಿವ ಸುರೇಶ್ ಪ್ರಭು ಶುಕ್ರವಾರ ಚಾಲನೆ ನೀಡಿದರು. ನಂತರ ಮಾತನಾಡಿ, ರಾಜ್ಯದ ರೈಲ್ವೆ ಯೋಜನೆ, ಹಾಗೂ ಅಭಿವೃದ್ಧಿ ಕಾರ್ಯಗಳಿಗಾಗಿ 3,177 ಕೋಟಿ ರೂ. ಅನುದಾನ ನೀಡಲಾಗಿದೆ.

ಯಾದಗಿರಿ ಜಿಲ್ಲೆಯಲ್ಲಿ ವಾರ್ಷಿಕ 600 ಬೋಗಿ ಫ್ರೇಮ್ ಉತ್ಪಾದನಾ ಸಾಮರ್ಥ್ಯದ ರೈಲ್ವೆ ಬೋಗಿ ಕಾರ್ಖಾನೆ ಆರಂಭವಾಗಲಿದ್ದು, ಜಿಲ್ಲೆಯ ಜನತೆಗೆ ಇದು ಯಾದಗಾರ್ ದಿನವಾಗಲಿದೆ ಎಂದರು. ಯಾದಗಿರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಸದ ಬಿ.ವಿ.ನಾಯಕ್ ಮಾತನಾಡಿ, ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಹಿಂದಿನ ಯುಪಿಎ ಸರ್ಕಾರದಲ್ಲಿ ರೈಲ್ವೆ ಸಚಿವರಾಗಿದ್ದಾಗ ಈ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಈಗ ರೈಲ್ವೆ ಬೋಗಿ ಕಾರ್ಖಾನೆ ಉದ್ಘಾಟನೆಗೊಳ್ಳುತ್ತಿರುವುದು ಸಂತಸ ತಂದಿದೆ ಎಂದರು. ವಿಧಾನ ಪರಿಷತ್ ಸದಸ್ಯ ಅಮರನಾಥ ಪಾಟೀಲ ಮಾತನಾಡಿ, ಕಾರ್ಖಾನೆಗಾಗಿ ಜಮೀನು ಕಳೆದುಕೊಂಡ ರೈತರ ಮಕ್ಕಳು ಹಾಗೂ ಸ್ಥಳೀಯರಿಗೆ ಉದ್ಯೋ[illegible] ನೀಡಬೇಕೆಂದು ಒತ್ತಾಯಿಸಿದರ

दि हिन्दु/मंगलूर
THE HINDU/MANGALORE
18 AUG 2017

# Ministers to boycott inaugural function of Rail Bogie Karkhana

## They are upset over Railway Ministry neglecting elected representatives

STAFF REPORTER
YADGIR

Expressing unhappiness about the Railway Ministry, Ministers Priyank Kharge and Sharanprakash Patil will boycott the inaugural programme of the Rail Bogie Karkhana at Kadechur-Badiyal Industrial area in Yadgir district on Friday.

Talking to *The Hindu* over phone from Bengaluru, the Ministers expressed anguish over the Railway Ministry neglecting the region and also elected representatives. "Being the Minister of the district where the Karkhana came up, I was not invited as per protocol," Mr. Priyank Kharge said.




The Rail Bogie Karkhana at Kadechur-Badiyal Industrial area in Yadgir district is set to be inaugurated on Friday.

Mr. Kharge said Railway Minister Suresh Prabhu should understand the project came up because of M. Mallikarjun Kharge, MP and Leader of the Congress in the Lok Sabha, who dreamed to develop the backward area with this project. Mr. Prabhu, however, did not invite Mr. Mallikarjun Kharge as per protocol.

The foundation stone to establish FIAT Rail Bogie Karkhana was laid in 2014 on 150 acres of land in Kadechur and Badiyal Industrial Area. The land was handed over by the State government for free and Tata Projects Ltd. completed the project at a cost of ₹80.92 crore for Rail Vikas Nigam Ltd.

According to the South Central Railways, Secunderabad, Mr. Prabhu will inaugurate the Rail Bogie Karkhana through video-conferencing on Friday.

विजय वाणी/ हुब्बल्लि
Vijaya Vani/ Hubballi
18 AUG 2017

# ರೈಲ್ವೆ ಕೋಚ್ ಫ್ಯಾಕ್ಟರಿ ಇಂದು ಲೋಕಾರ್ಪಣೆ

## ಸಚಿವ ಸುರೇಶ ಪ್ರಭು ಚಾಲನೆ | ಯಾದಗಿರಿಯ 150 ಎಕರೆ ಪ್ರದೇಶದಲ್ಲಿ ಕಾರ್ಖಾನೆ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಯಾದಗಿರಿ ಜಿಲ್ಲೆ ಬಾಡಿಯಾಳ, ಕಡೇಚೂರ ಮಧ್ಯೆ ರೈಲ್ವೆ ಬೋಗಿ ತಯಾರಿಕಾ ಕಾರ್ಖಾನೆ ಕಾಮಗಾರಿ ಪೂರ್ಣಗೊಂಡಿದ್ದು, ಶುಕ್ರವಾರ ಲೋಕಾರ್ಪಣೆಗೊಳ್ಳಲಿದೆ.

ದಕ್ಷಿಣ ಮಧ್ಯ ರೈಲ್ವೆ ವ್ಯಾಪ್ತಿಯ ಮೊದಲ ಬೋಗಿ ತಯಾರಿಕಾ ಘಟಕ ಎಂಬುದು ಈ ಫ್ಯಾಕ್ಟರಿ ಹೆಗ್ಗಳಿಕೆ. ವಾರ್ಷಿಕ ಸುಮಾರು 600 ಬೋಗಿ ಫ್ರೇಮ್‌ಗಳನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಫೆಬ್ರವರಿ 2014ರಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ರಾಜ್ಯ ಸರ್ಕಾರ ಒದಗಿಸಿರುವ 150 ಎಕರೆ ಪ್ರದೇಶದಲ್ಲಿ ಸುಮಾರು 80.92 ಕೋಟಿ ರೂ. ವೆಚ್ಚದಲ್ಲಿ ಪ್ರಿ ಇಂಜಿನಿಯರ್ಡ್ ತಂತ್ರಜ್ಞಾನದಲ್ಲಿ ಕಾರ್ಖಾನೆ ರೂಪುಗೊಂಡಿದೆ.

ರೈಲ್ವೆ ಇಲಾಖೆ ಸಿಬ್ಬಂದಿ ಸೇರಿ ಸುಮಾರು 470 ಜನ ಮಾನವ ಬಲ, ಸುರಕ್ಷಿತ ಪ್ರಯಾಣದ ಜತೆ ಗಂಟೆಗೆ 160 ಕಿ.ಮೀ. ವೇಗದಲ್ಲಿ ಕಾರ್ಯನಿರ್ವಹಿಸುತ್ತದೆ. ವರ್ಕ್‌ಶಾಪ್ ಮೇಲ್ಭಾಗದಲ್ಲಿ ಸೋಲಾರ್ ಪೆನಲ್ಸ್ ಅಳವಡಿಸಲಾಗಿದೆ. 11 ಕೆವಿ ವಿದ್ಯುತ್ ಉಪ ಕೇಂದ್ರ ಹೊಂದಿದ್ದು, ಪರ್ಯಾಯ ವಿದ್ಯುತ್



ವಿಜಯವಾಣಿ ಚಿತ್ರ

ಉತ್ಪಾದನೆ ವ್ಯವಸ್ಥೆ ಒಳಗೊಂಡಿದೆ. 232 ಕಿಲೋವಾಟ್ ಗ್ರಿಡ್ ಸಂಪರ್ಕವಿರುವ ಸೌರ ಸ್ಥಾವರವನ್ನೂ ಸ್ಥಾಪಿಸಲಾಗಿದೆ. ಯೋಜನಾ ಪ್ರದೇಶದಲ್ಲಿ 25 ಸಾವಿರಕ್ಕೂ ಹೆಚ್ಚು ಸಸಿ ನೆಡಲಾಗಿದೆ. ನೀರು ಕೊಯ್ಲು ವ್ಯವಸ್ಥೆ ಮಾಡಲಾಗಿದೆ.

**ಯಂತ್ರೋಪಕರಣ:** ಎಟಿಸಿಯೊಂದಿಗೆ ಆ್ಯಕ್ಸಿಸ್ ಸಿಎನ್‌ಸಿ ಮಶಿನಿಂಗ್ ಸೆಂಟರ್, ರೋಬೋಟಿಕ್ ವೆಲ್ಡಿಂಗ್ ಮಶಿನ್, ಬೋಗಿ ಫ್ರೇಮ್ ಶಾಟ್ ಬ್ಲಾಸ್ಟಿಂಗ್ ಮಶಿನ್, ಬೋಗಿ ಫ್ರೇಮ್ ಪೇಂಟಿಂಗ್ ಬೂತ್ ಸೇರಿ ಘಟಕದಲ್ಲಿ ಮಹತ್ವದ ಯಂತ್ರೋಪಕರಣಗಳಿವೆ. ಈ ಮೂಲಕ ಪ್ರತಿ ಶಿಫ್ಟ್‌ಗೆ 1-3 ಬೋಗಿ ಸಿದ್ಧಪಡಿಸುವ ಸಾಮರ್ಥ್ಯ ಹೊಂದಿದೆ. ಈ ಉತ್ಪಾದನಾ ಯಂತ್ರಗಳು ಸುಮಾರು 37 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಸ್ಥಾಪನೆಗೊಂಡಿವೆ.



ಹೈದರಾಬಾದ್ ಕರ್ನಾಟಕದಲ್ಲಿ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಲು ಯಾದಗಿರಿ ರೈಲ್ವೆ ಕೋಚ್ ಫ್ಯಾಕ್ಟರಿ ಲೋಕಾರ್ಪಣೆಗೊಳ್ಳುತ್ತಿದೆ. ಯುಪಿಎ ಸರ್ಕಾರದ ಅವಧಿಯಲ್ಲಿ ಮಂಜೂರಾಗಿ ಪೂರ್ಣ ಪ್ರಮಾಣದಲ್ಲಿ ಸಿದ್ಧಗೊಂಡಿದೆ.

| ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಸಂಸದೀಯ ನಾಯಕ

ದಿ ಹಿಂದು/ ಬೆಂಗಳೂರು
THE HINDU/ BNG
19 AUG 2017



# Railway officials deny Priyank Kharge's allegation

STAFF REPORTER
KADECHUR-BADIYAL (YADGIR DISTRICT)

Officials from the Railway Department denied the allegations by the district in-charge and Information Technology and Bio Technology Minister Priyank Kharge that they had not been invited properly to the inaugural programme of Rail Bogie Karkhana at Kadechur-Badiyal Industrial Hub and said that they had invited the Minister as per protocol.

They also said that top senior officers from Secunderabad personally called the Minister over phone and requested him to be present at the programme to make it a grand success.

Talking to *The Hindu*, a senior officer, who did not wish to be named, said that "we expected that he, along with others, including Sharanprakash Patil, Minister for Medical Education, Baburao Chinchansur, Chairman of Karnataka State Border Development Authority, would be present. But, they did not turn up," he added.

A few participants were surprised over the absent of veteran leader and MP M. Mallikarjun Kharge, who was instrumental in bringing in this dream project here. "I think something went wrong. Otherwise, he (Mr. Mallikarjun Kharge) would have come," a resident of Kadechur said.

The project, which has come up at a cost of ₹ 80.92 crore, will produce at least 50 FIAT bogies per month. It is expected to produce around 600 such bogies in a year.

राजस्थान पत्रिका/बेंगलूर
RAJASTHAN PATRIKA/BANGALORE
19 AUG 2017

केंद्रीय रेल मंत्री सुरेश प्रभु ने किया वीडियो कॉन्फ्रेंसिंग से उद्घाटन

# गदग - कुड़गी - हॉतगी रेललाइन दोहरीकरण परियोजना का उद्घाटन



**हुब्बल्ली-गदग.** दक्षिण पश्चिम रेलवे के अंतर्गत गदग-कुडगी-होतगी रेलवे लाइन की दोहरीकरण परियोजना का उद्घाटन शुक्रवार को केंद्रीय रेल मंत्री सुरेश प्रभु ने दिल्ली रेल भवन से वीडियो कॉन्फ्रेंसिंग के जरिए और गदग स्टेशन पर कर्नाटक के ग्रामीण विकास पंचायत राजमंत्री एच.के. पाटिल व हावेरी सांसद शिवकुमार उदासी ने गदग प्लेटफार्म संख्या दो का उद्घाटन किया।

इस दौरान आयोजित समारोह को सम्बोधित करते हुए पाटिल ने रेलमंत्री से अनुरोध किया की गदग-लक्ष्मेश्वर रेल लाइन का कार्य प्रारम्भ करे यह लाइन होने से गदग सहित समीप के सभी क्षेत्र के बाशिंदों को बेंगलूरु जाने के बहुत उपयोगी सिद्ध होगी। अगर रेलवे को इस कार्य को करने में किसी प्रकार की परेशानी हो तो वह राज्य सरकार के साथ मिलकर इस कार्य को पूर्ण करने में पूरा सहयोग करेंगे। उन्होंने रेलवे अधिकारियो से कहा कि गदग रेलवे स्टेशन पर बुजुर्गों व दिव्यांगों को अनेक प्रकार के परेशानियों का सामना करना पड़ता है, अगर स्टेशन पर एस्केलेटर की सुविधा हो जाये तो उनको बहुत फायदा होगा। इसमें किसी भी प्रकार की राशि सहायता की जरुरत हो तो वे उनके विधायक कोटे से देकर उस कार्य को पूर्ण करने में पूरा सहयोग करेंगे साथ ही गदग रेलवे स्टेशन पर अन्य विकास कार्यों के लिए भी उन्होंने अधिकारियों से निवेदन किया। सांसद उदासी ने प्रधानमंत्री नरेंद्र मोदी व रेलवे मंत्री सुरेश प्रभु का आभार जताते हुए कहा कि पिछले कई वर्षो से लंबित रेललाइन दोहरीकरण की मांग पूर्ण होने से गदग क्षेत्र का समुचित विकास होगा। इस समरोह के दौरान मंच पर पूर्व मंत्री जिला बीजेपी अध्यक्ष सी.सी. पाटिल, जिला पंचायत अध्यक्ष बसना कुरंगी, रेल महाप्रबंधक ए.के. गुप्ता, हुबली मंडल प्रबंधक ए.के. जैन, डीजीएम के विजया, जिलाधिकारी मनोज जैन, जोनल रेलवे सलाहकार समिति सदस्य महेंद्र सिंघी, जी.के. आडपगौड़रा आदि उपस्थित थे।

दि हिन्दु / बेंगळूरु
THE HINDU/BANGALURU
19 AUG 2017

# Work on Gadag-Kudgi-Hotgi double line initiated

## Shelter on Platform No. 2 inaugurated at Gadag station

SPECIAL CORRESPONDENT
HUBBALLI

Work on the Gadag-Kudgi-Hotgi double line was initiated on Friday along with the inauguration of a shelter for the second platform at the Gadag Railway Station.

In the presence of Minister for Rural Development and Panchayat Raj and district-in-charge of Gadag H.K. Patil and others at Gadag Railway Station on Friday, Minister for Railways Suresh Prabhu initiated the work through video link from Rail Bhavan in New Delhi. Mr. Prabhu also initiated the work on Gadag-Wadi section in Koppal on the occasion.



Gadag district in-charge Minister H.K. Patil addressing a gathering after the initiation of work on Gadag-Kudgi-Hotgi double line (through video link by Railway Minister Suresh Prabhu) at the Gadag Railway Station on Friday. ▪ SPECIAL ARRANGEMENT

Addressing the gathering through the video link, Mr. Prabhu said that as Karnataka was important for Indian Railways, the highest ever funds had been allocated to the State in the budget. "Indian Railways is in transformation mode and is focussing on improving rail infrastructure and passenger amenities like never before. Cleanliness and Make in India programmes have been successfully implemented in Indian Railways. High-speed railway network is being worked upon and soon, we will operate trains at 200 kmph on trunk routes," he said.

After the formal inauguration from the Railways Minister, a simple programme was held at the Gadag Railway Station in which, Mr. Patil unveiled a plaque to mark the foundation laying ceremony for the double lining project. Mr. Patil also inaugurated the new platform shelter for platform No 2 at the station.

The Minister told the railway officials that if they sent a proposal for land acquisition required for Gadag-Laxmeshwar-Yelavigi railway line, he would take up the issue with the State government and get the required sanction.

A host of elected representatives, including MP Shivakumar Udasi, president of Gadag Zilla Panchayat Vasanna Kuradagi, MLC Basanagouda Patil Yatnal, Deputy Commissioner of Gadag Manoj Jain and senior officials of South Western Railway were present.

42

KANNADA PRABHA / GADAG 19/8/2017

# ರೈಲು ಮಾರ್ಗಕ್ಕೆ ಅಗತ್ಯ ನೆರವು

## ಜೋಡಿ ರೈಲು ಮಾರ್ಗ ಕಾಮಗಾರಿ, ಪ್ಲಾಟ್‌ಫಾರಂ ಚಾವಣಿ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಗದಗ

ಗದಗ, ಲಕ್ಷ್ಮೇಶ್ವರ, ಯಲವಗಿ ನೂತನ ರೈಲು ಮಾರ್ಗ ಪ್ರಾರಂಭಕ್ಕೆ ಅಗತ್ಯ ಭೂಸ್ವಾಧೀನ, ಇತರ ನೆರವು ನೀಡಲು ರಾಜ್ಯ ಸರ್ಕಾರ ಸಿದ್ಧವಿದ್ದು, ಈ ಕುರಿತು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಸರ್ಕಾರ ಸ್ಪಂದಿಸಲಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಅವರು ಶುಕ್ರವಾರ ಗದಗ ರೈಲು ನಿಲ್ದಾಣದ ಆವರಣದಲ್ಲಿ ರೈಲ್ವೆ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಗದಗ - ಕೂಡಗಿ - ಕೋಟಗಿ ಜೋಡಿ ಮಾರ್ಗದ ಕಾಮಗಾರಿಗೆ ಚಾಲನೆ ಹಾಗೂ ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್‌ನ ಮೇಲ್ಛಾವಣಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ರಾಜ್ಯದಲ್ಲಿ ನಡೆಯುತ್ತಿರುವ ರೈಲ್ವೆ ಕಾಮಗಾರಿಗಳಿಗೆ ರಾಜ್ಯ ಸರ್ಕಾರ ತನ್ನ ಪಾಲಿನ ಆರ್ಥಿಕ ಅನುದಾನ ಹಾಗೂ ಬೇಕಾದ ಭೂಮಿ ಒದಗಿಸಲು ಆದ್ಯತೆ ಮೇರೆ ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲೆಯ ಎಲ್ಲ ತಾಲೂಕು ಕೇಂದ್ರಗಳಿಗೆ ರೈಲು ಸಂಪರ್ಕ ಕಲ್ಪಿಸಲು ವಿಪುಲ ಅವಕಾಶಗಳಿವೆ. ಈ ಕುರಿತು ಸಂಸದರು ಕೇಂದ್ರ ಸರ್ಕಾರದ ಗಮನ ಸೆಳೆಯಬೇಕಿದೆ ಹಾಗೂ ಎಲ್ಲ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ರೈಲ್ವೆ ಟಿಕೆಟ್ ದೊರಕಿಸುವ ವ್ಯವಸ್ಥೆ ಕಲ್ಪಿಸುವತ್ತ ಗಮನ ನೀಡಬೇಕಿದೆ ಎಂದು ಹೇಳಿದರು.

ಗದಗ ರೇಲ್ವೆ ನಿಲ್ದಾಣದಲ್ಲಿ ವೃದ್ಧರಿಗೆ ಪ್ಲಾಟ್ ಫಾರ್ಮ್‌ಗಳಿಗೆ ತೆರಳಲು ಸಾಕಷ್ಟು ತೊಂದರೆ ಅನುಭವಿಸುವ ಸ್ಥಿತಿ ಇದ್ದು, ರೈಲ್ವೆ ಇಲಾಖೆ ಗದಗ ರೈಲು ನಿಲ್ದಾಣದಲ್ಲಿ ಎಸ್ಕಲೇಟರ್ ಅಳವಡಿಕೆಗೆ ಮುಂದಾದಲ್ಲಿ ಸ್ಥಳೀಯ ಆಡಳಿತ ಅಥವಾ ಶಾಸಕ ನಿಧಿಯಿಂದ ಶೇ. 50ರಷ್ಟು ಪಾಲು ಒದಗಿಸುತ್ತೇವೆ. ಇಲಾಖೆ ತನ್ನ ಪಾಲಿನ ಶೇ. 50ರಷ್ಟು ಹಣ ವಿನಿಯೋಗಿಸಿ ಎಸ್ಕಲೇಟರ್ ಅಳವಡಿಸಿದಲ್ಲಿ ಅಶಕ್ತರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಹಾಗೂ ಗದಗ ಬೆಟಗೇರಿ ಅವಳಿ ನಗರದಿಂದ ಸುಮಾರು 3000 ಯುವಕರು ಪ್ರತಿದಿನ ಉದ್ಯೋಗಕ್ಕಾಗಿ ನೆರೆಯ ಹುಬ್ಬಳ್ಳಿ, ಧಾರವಾಡ, ಕೊಪ್ಪಳವನ್ನವಲಂಬಿಸಿದ್ದಾರೆ. ಅದನ್ನು ತಪ್ಪಿಸಿ ಗದಗ ನಗರದಲ್ಲಿಯೇ ರೈಲ್ವೆ ಇಲಾಖೆ ಉದ್ಯೋಗಾಧಾರಿತ ಯೋಜನೆ ಪ್ರಾರಂಭಕ್ಕೆ ಚಿಂತನೆ ನಡೆಸಿದಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ ಎಂದರು.



ಗದಗ - ಕೂಡಗಿ - ಕೋಟಗಿ ಜೋಡಿ ಮಾರ್ಗದ ಕಾಮಗಾರಿಗೆ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ. ಪಾಟೀಲ್ ಅವರು ಗುಂಡಿ ಒತ್ತುವ ಮೂಲಕ ಕಾಮಗಾರಿಯ ಶಿಲಾನ್ಯಾಸ ನೆರವೇರಿಸಿದರು.

### ಸಾಕಷ್ಟು ಅನುದಾನ

ದೇಶದಲ್ಲಿ ಮೋದಿ ಸರ್ಕಾರದ ಕಳೆದ 4 ವರ್ಷದ ಅಧಿಕಾರಾವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅನುದಾನ ಬಿಡುಗಡೆಗೊಳಿಸಿದೆ. 2009ರಿಂದ 2014ರ ವರೆಗೆ ರೈಲ್ವೆ ಇಲಾಖೆ ರಾಜ್ಯದ ಯೋಜನೆಗಳಲ್ಲಿ ಆಯ-ವ್ಯಯಗಳಲ್ಲಿ ₹ 835 ಕೋಟಿ ಕಾಯ್ದಿರಿಸುತ್ತಿತ್ತು. ಆನಂತರ 2014ರಿಂದ 17ರ ಅವಧಿಯಲ್ಲಿ ಈ ಮೊತ್ತ ₹ 2200 ಕೋಟಿಗಳಿಗೆ ಹೆಚ್ಚಳವಾಗಿತ್ತು. ಆದರೆ 2017-18ನೇ ಸಾಲಿಗಾಗಿ ₹ 3,174 ಕೋಟಿ ಅನುದಾನ ಕಾಯ್ದಿರಿಸಿ, ರಾಜ್ಯದ ಅಪೂರ್ಣಗೊಂಡ ಹಾಗೂ ಹೊಸ ಕಾಮಗಾರಿಗಳ ಚಾಲನೆಗೆ ಮೋದಿ ಸರ್ಕಾರ ಹೆಚ್ಚಿನ ಒತ್ತು ನೀಡಿದೆ ಎಂದರು.

ಹಾವೇರಿ - ಗದಗ ಸಂಸದ ಶಿವಕುಮಾರ ಉದಾಸಿ ಮಾತನಾಡಿ, ಪ್ರಪಂಚದಲ್ಲೇ ದೊಡ್ಡ ಸಾರಿಗೆ ವ್ಯವಸ್ಥೆ ಎನಿಸಿಕೊಂಡ ಭಾರತಿಯ ರೈಲ್ವೆ ಇಲಾಖೆ ನಗರೀಕರಣ ಸಂದರ್ಭದಲ್ಲಿ ಹೆಚ್ಚಿನ ಸೇವೆ ಒದಗಿಸಲು ಸನ್ನದ್ಧವಾಗಿದೆ. ಸದ್ಯ ಗದಗ - ವಾಡಿ ರೈಲು ಮಾರ್ಗ ಸ್ಥಾಪನೆ ವಿಷಯದಲ್ಲಿ ಬದಲಾವಣೆಯಾದ ಕುರಿತು ಗದಗ, ನರೇಗಲ್ಲ, ಗಜೇಂದ್ರಗಡ ಭಾಗದ ಜನ ಆತಂಕದಲ್ಲಿದ್ದು, ಈ ಕುರಿತು ಹೋರಾಟ ನಡೆಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಗದಗ - ಕೊಟುಮಚಗಿ - ನರೇಗಲ್ಲ - ಗಜೇಂದ್ರಗಡ - ಹನುಮಸಾಗರ ಮಾರ್ಗವಾಗಿ ಇಳಕಲ್ಲ ವರೆಗೆ ಹಾಗೂ ಈಗಾಗಲೇ ಸಮೀಕ್ಷೆಯ ಕಾರ್ಯ ಪ್ರಾರಂಭವಾಗುತ್ತಿರುವ ಗದಗ - ಮುಂಡರಗಿ - ಹರಪ್ಪನಹಳ್ಳಿ ಈ ಎರಡು ರೈಲ್ವೆ ಮಾರ್ಗದ ಸಮೀಕ್ಷೆಯನ್ನು ಏಕಕಾಲದಲ್ಲಿ ನಡೆಸಿದಲ್ಲಿ ಸಾಕಷ್ಟು ಅನುಕೂಲವಾಗಲಿದೆ. ಸದ್ಯದಲ್ಲೇ ಈ ಕುರಿತು ರೈಲ್ವೆ ಸಚಿವರ ಗಮನ ಸೆಳೆಯಲಿದ್ದೇನೆ. ಮುಂದಿನ 10 ದಿನಗಳಲ್ಲಿ ಈ ಹೊಸ ಲೈನ್ ಕುರಿತು ಈ ಭಾಗದ ಗ್ರಾಮಸ್ಥರು, ಆಸಕ್ತ ಕರೈಲ್ವೆ ಹೋರಾಟ ಸಮಿತಿಯ ಪದಾಧಿಕಾರಿಗಳು ಹಾಗೂ ವಲಯ ರೇಲ್ವೆ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆತಿ ಅಂತಿಮಗೊಳಿಸಲಾಗುವುದು.

ರೈಲ್ವೆ ಖಾತೆ ಮಾಜಿ ಸಹಾಯಕ ಸಚಿವ, ಹಾಲಿ ವಿಪ ಸದಸ್ಯ ಬಸವನಗೌಡ ಪಾಟೀಲ ಯತ್ನಾಳ ಹಾಗೂ ಜಿಪಂ ಅಧ್ಯಕ್ಷ ವಾಸಪ್ಪ ಕುರಡಗಿ ಪ್ರಾಸ್ತಾವಿಕ ಮಾತನಾಡಿದರು. ಮಾಜಿ ಸಚಿವ, ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಸಿ. ಪಾಟೀಲ, ಜಿಲ್ಲಾಧಿಕಾರಿ ಮನೋಜ್ ಜೈನ, ಸಿಇಒ ಮಂಜುನಾಥ ಚವ್ಹಾಣ, ಮಹೇಂದ್ರಸಿಂಗ್ವಿ, ಜಿ.ಕೆ. ಹಾಳಪ್ಪಗೌಡ್ರ, ರಾಮಣ್ಣ ಲಮಾಣಿ, ಶ್ರೀಶೈಲಪ್ಪ ಬಿದರೂರ, ನಗರಸಭೆ ಉಪಾಧ್ಯಕ್ಷ ಶ್ರೀನಿವಾಸ ಹುಯಿಲಗೋಳ, ಡಿಆರ್‌ಎಂ ಎ.ಕೆ. ಜೈನ್, ಡಿಜಿಎಂ ವಿಜಯಾ ಉಪಸ್ಥಿತರಿದ್ದರು. ರೈಲ್ವೆ ವಲಯ ವ್ಯವಸ್ಥಾಪಕ ಎ.ಕೆ. ಗುಪ್ತಾ ಸ್ವಾಗತಿಸಿದರು.

NAVOYADA GADAG 19/8

## ಗದಗ ನಿಲ್ದಾಣ 2ನೇ ಪ್ಲಾಟಫಾರ್ಮ ಮೇಲ್ಸಾವಣಿ ಉದ್ಘಾಟನೆ

# ಗದಗ- ಕೂಡಗಿ-ಹೂಟಗಿ ಜೋಡಿ ರೈಲು ಮಾರ್ಗ ಕಾಮಗಾರಿಗೆ ಚಾಲನೆ



ಗದಗ, ಆ.18. ಜಿಲ್ಲೆಯ ಎಲ್ಲ ತಾಲೂಕು ಕೇಂದ್ರಗಳನ್ನು ಜೋಡಿಸುವ ನೂತನ ರೈಲು ಮಾರ್ಗ ನಿರ್ಮಿಸುವ ಕೆಲಸವಾಗಬೇಕು. ಈ ಯೋಜನೆಗಳಿಗೆ ಅಗತ್ಯವಾಗಿರುವ ಮೊತ್ತದಲ್ಲಿ ಶೇ.50ರಷ್ಟು ಹಣವನ್ನು ರಾಜ್ಯ ಸರಕಾರ ನೀಡಲಿದೆ ಎಂದು ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಗದಗ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಜರುಗಿದ ಗದಗ-ಕೂಡಗಿ-ಹೂಟಗಿ ದ್ವಿಪಥ ಯೋಜನೆಯ ಚಾಲನೆ ಹಾಗೂ ಗದಗ ನಿಲ್ದಾಣದ 2ನೇ ಪ್ಲಾಟಫಾರ್ಮನ ಮೇಲ್ಸಾವಣಿ ಉದ್ಘಾಟಿಸಿ ಅವರು ಮಾತನಾಡಿದರು.

ಸದ್ಯ ಹುಬ್ಬಳ್ಳಿ-ಬೆಂಗಳೂರು ಹಂಪಿ ಎಕ್ಸಪ್ರೆಸ್ ರೈಲು ಪ್ರಯಾಣ 120 ಕಿಮೀ ಹೆಚ್ಚಾಗುತ್ತಿದೆ. ಗದಗ-ಲಕ್ಷ್ಮೇಶ್ವರ-ಯಲವಗಿ, ಗದಗ-ಮುಂಡರಗಿ-ಹರಪನಹಳ್ಳಿ ರೈಲು ಮಾರ್ಗಗಳು ನಿರ್ಮಾಣವಾದರೆ ರಾಜಧಾನಿ ಬೆಂಗಳೂರು ಅಂದಾಜು 75 ಕಿಮೀ ದೂರ ಕಡಿಮೆಯಾಗಲಿದೆ. ಈ ಕುರಿತು ರೈಲ್ವೆ ಇಲಾಖೆ ಅಧಿಕಾರಿಗಳು ಕ್ರಮ

ಮಾರ್ಗವಾಗಿ ವಾಡಿಗೆ ರೈಲು ಮಾರ್ಗ ನಿರ್ಮಿಸುವುದರಿಂದ ಅಂದಾಜು 70 ಕಿಮೀ ದೂರ ಕಡಿಮೆಯಾಗಲಿದೆ. ಇದರಿಂದ, ನಿರ್ಮಾಣ ವೆಚ್ಚ, ಇಂಧನ, ಹಾಗೂ ಸಮಯ ಉಳಿಸಬಹುದು ಎಂದರು.

ವಿಧಾನ ಪರಿಷತ್ ಸದಸ್ಯ ಬಸನಗೌಡ ಯತ್ನಾಳ ಮಾತನಾಡಿ, 1615 ಕೋಟಿ ರು. ವೆಚ್ಚದಲ್ಲಿ 284 ಕಿಮೀ ಉದ್ದದ ಗದಗ-ಕೂಡಗಿ-ಹೂಟಗಿ ಜೋಡಿ ರೈಲು ಮಾರ್ಗ ನಿರ್ಮಾಣದಿಂದ ದಕ್ಷಿಣ ಭಾರತವನ್ನು ಉತ್ತರ ಭಾರತಕ್ಕೆ ಜೋಡಿಸುವ ಪ್ರಮುಖ ಮಾರ್ಗವಾಗಲಿದೆ ಎಂದು ಹೇಳಿದರು.

ಮಾಜಿ ಪ್ರಧಾನಮಂತ್ರಿ ಅಟಲ್‌ಬಿಹಾರಿ ವಾಜಪೇಯಿ ಅವರ ಸರಕಾರದಲ್ಲಿ ತಾವೂ ಕೂಡ ರೈಲ್ವೆ ಇಲಾಖೆ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದನ್ನು ಸ್ಮರಿಸಿದ ಅವರು, ರೈಲ್ವೆ ಸಚಿವರು ಆಗಾಗ ರೈಲ್ವೆ ನಿಲ್ದಾಣಗಳಿಗೆ ಭೇಟಿ ನೀಡುವುದರಿಂದ ಆ ಊರಿನ ರೈಲು ನಿಲ್ದಾಣಗಳೆಲ್ಲ ಅಭಿವೃದ್ಧಿ ಕಾಣುತ್ತವೆ ಎಂದರು.

ಸೋಲಾಪೂರ-ಮುಂಬೈ ಸಿದ್ದೇಶ್ವರ ಎಕ್ಸಪ್ರೆಸ್ ರೈಲನ್ನು ಗದಗವರೆಗೆ ಓಡಿಸಬೇಕು ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸಂಸದ ಶಿವಕುಮಾರ ಉದಾಸಿ ಮಾತನಾಡಿ, ರೈಲ್ವೆ ಇಲಾಖೆ ಮೂಲಭೂತ ಸೌಲಭ್ಯಗಳನ್ನು ಪ್ರಯಾಣಿಕರಿಗೆ ಕಲ್ಪಿಸುವ ಜೊತೆಗೆ ರೈಲ್ವೆ ವೇಗ ಹೆಚ್ಚಳದೊಂದಿಗೆ ಸುರಕ್ಷಿತ ಪ್ರಯಾಣ ಒದಗಿಸುತ್ತಿದೆ. ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರಕಾರ ಅತಿ ಹೆಚ್ಚು ಹಣವನ್ನು ರೈಲ್ವೆ ಅಭಿವೃದ್ಧಿಗಾಗಿ ನೀಡಿದ್ದು, ಬರುವ ದಿನಗಳಲ್ಲೂ ರೈಲ್ವೆ ಮಾರ್ಗ ನಿರ್ಮಾಣ, ಜೋಡಿಮಾರ್ಗ ನಿರ್ಮಾಣ, ರೈಲು ನಿಲ್ದಾಣಗಳಲ್ಲಿ ಸೌಲಭ್ಯ ಕಲ್ಪಿಸಲಿದೆ ಎಂದರು.

PRAJAVANI / GADAG 19|8|2017

### ಬದಲಿ ಮಾರ್ಗಕ್ಕೆ ಬೆಟಗೇರಿ ರೈಲ್ವೆ ಹೋರಾಟ ಸಮಿತಿ ಪದಾಧಿಕಾರಿಗಳಿಂದ ವಿರೋಧ; ಕಪ್ಪು ಬಾವುಟ ಪ್ರದರ್ಶನ

# ಪ್ರತಿಭಟನೆಯ ನಡುವೆಯೇ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಗದಗ: ತಳಕಲ್-ಕುಷ್ಟಗಿ ಮಾರ್ಗವಾಗಿ ವಾಡಿಗೆ ಸಂಪರ್ಕವನ್ನು ಕಲ್ಪಿಸುವ ರೈಲು ಮಾರ್ಗ ಕಾಮಗಾರಿಗೆ ರೈಲ್ವೆ ಸಚಿವ ಸುರೇಶ್ ಪ್ರಭು ಅವರು ಚಾಲನೆ ನೀಡುವುದನ್ನು ವಿರೋಧಿಸಿ, ಬೆಟಗೇರಿ ರೈಲ್ವೆ ಹೋರಾಟ ಸಮಿತಿ ಸದಸ್ಯರು ಶುಕ್ರವಾರ ಗದಗ ರೈಲು ನಿಲ್ದಾಣ ರಸ್ತೆಯ ಝೇಂಡಾ ವೃತ್ತದಲ್ಲಿ ಸಂಸದ ಶಿವಕುಮಾರ ಉದಾಸಿ, ರೈಲ್ವೆ ಅಧಿಕಾರಿಗಳ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

'ಗದಗ, ಕೋಟುಮಚಗಿ, ನರೇಗಲ್, ಗಜೇಂದ್ರಗಡ ಮಾರ್ಗವಾಗಿ ವಾಡಿಗೆ ಸಂಪರ್ಕ ಕಲ್ಪಿಸಬೇಕಾದ ರೈಲು ಮಾರ್ಗವನ್ನು ತಳಕಲ್- ಕುಷ್ಟಗಿ ಮಾರ್ಗವಾಗಿ ವಾಡಿಗೆ ಬದಲಾಯಿಸಲಾಗಿದೆ. ಮೂಲ ಯೋಜನೆಯನ್ನೇ ಉಳಿಸಿಕೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ರೈಲು ನಿಲ್ದಾಣದವರೆಗೆ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲು ಮುಂದಾದ ಹೋರಾಟಗಾರರನ್ನು ಪೊಲೀಸರು ಝೇಂಡಾ ವೃತ್ತದಲ್ಲಿ ತಡೆಹಿಡಿದರು. ಕಪ್ಪು ಬಾವುಟ ಪ್ರದರ್ಶಿಸದಂತೆ ಎಚ್ಚರಿಕೆ ನೀಡಿದರು. ಈ ಸಂದರ್ಭ ಹೋರಾಟಗಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಬಳಿಕ ನೈರುತ್ಯ ರೈಲ್ವೆ ವಲಯದ ವ್ಯವಸ್ಥಾಪಕ ಎ.ಕೆ. ಗುಪ್ತಾ ಅವರು ಹೋರಾಟಗಾರರನ್ನು ಭೇಟಿ ಮನವಿ ಸ್ವೀಕರಿಸಿದರು.

ಪ್ರತಿಭಟನೆಯ ನಡುವೆಯೇ ಕೊಪ್ಪಳದಲ್ಲಿ ಗದಗ-ವಾಡಿ ನಡುವಿನ ಹೊಸ ಮಾರ್ಗಕ್ಕೂ ಚಾಲನೆ ದೊರೆಯಿತು.

**ಹೊಟಗಿ-ಕೂಡಗಿ ಕಾಮಗಾರಿಗೆ ಚಾಲನೆ:** ಗದಗ-ಕೂಡಗಿ-ಹೊಟಗಿ ಜೋಡಿ ರೈಲು ಮಾರ್ಗ ಕಾಮಗಾರಿಗೆ ರೈಲ್ವೆ ಸಚಿವ ಸುರೇಶ್ ಪ್ರಭು ಅವರು ಗೋವಾದಿಂದ ವಿಡಿಯೊ ಲಿಂಕ್ ಮೂಲಕ ಚಾಲನೆ ನೀಡಿದರು. ಇದರ ಭಾಗವಾಗಿ ಗದಗ ರೈಲ್ವೆ ನಿಲ್ದಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅವರು ಸ್ಥಳೀಯವಾಗಿ ಜೋಡಿ ರೈಲ್ವೆ ಮಾರ್ಗದ ಕಾಮಗಾರಿ ಫಲಕ ಅನಾವರಣಗೊಳಿಸಿದರು. ರೈಲ್ವೆ ನಿಲ್ದಾಣದ 2ನೇ ಪ್ಲಾಟ್‌ಫಾರ್ಮ್‌ನಲ್ಲಿ ವಿಸ್ತರಿಸಲಾಗಿರುವ ಚಾವಣಿ ಉದ್ಘಾಟಿಸಿದರು. ರೈಲ್ವೆ ಇಲಾಖೆ ಗದಗ-ಲಕ್ಷ್ಮೇಶ್ವರ-ಯಲವಗಿ ರೈಲು ಮಾರ್ಗ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನದ ಪ್ರಸ್ತಾವವನ್ನು ರಾಜ್ಯ ಸರ್ಕಾರ ಕಳುಹಿಸಿದರೆ ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

ಜಿಲ್ಲಾ ಪಂಚಾಯಿತಿ ಅಧ್ಯಕ್ಷ ವಾಸಣ್ಣ ಕುರಡಗಿ, ಸಂಸದ ಶಿವಕುಮಾರ ಉದಾಸಿ, ವಿಧಾನ ಪರಿಷತ್ ಸದಸ್ಯ ಬಸವಗೌಡ ಪಾಟೀಲ ಯತ್ನಾಳ, ಗದಗ-ಬೆಟಗೇರಿ ನಗರಸಭೆಯ ಉಪಾಧ್ಯಕ್ಷ ಶ್ರೀನಿವಾಸ ಹುಯಿಲಗೋಳ, ಡಿಸಿ ಮನೋಜ್ ಜೈನ್, ಸಿಇಒ ಮಂಜುನಾಥ ಚವ್ಹಾಣ, ಮಾಜಿ ಶಾಸಕ ಸಿ.ಸಿ. ಪಾಟೀಲ ಇದ್ದರು.





ಗದಗ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು ಸ್ಥಳೀಯವಾಗಿ ಗದಗ–ಕೂಡಗಿ–ಹೊಟಗಿ ಜೋಡಿ ರೈಲು ಮಾರ್ಗ ಉದ್ಘಾಟಿಸಿದರು. ಜಿಲ್ಲಾ ಪಂಚಾಯಿತಿ ಅಧ್ಯಕ್ಷ ವಾಸಣ್ಣ ಕುರಡಗಿ, ಸಂಸದ ಶಿವಕುಮಾರ ಉದಾಸಿ, ವಿಧಾನ ಪರಿಷತ್ ಸದಸ್ಯ ಬಸವಗೌಡ ಪಾಟೀಲ ಯತ್ನಾಳ, ಗದಗ–ಬೆಟಗೇರಿ ನಗರಸಭೆ ಉಪಾಧ್ಯಕ್ಷ ಶ್ರೀನಿವಾಸ ಹುಯಿಲಗೋಳ, ಜಿಲ್ಲಾಧಿಕಾರಿ ಮನೋಜ್ ಜೈನ್ ಇದ್ದಾರೆ (ಎಡಚಿತ್ರ). ಸಂಸದ ಶಿವಕುಮಾರ ಉದಾಸಿ ಅವರು ಬೆಟಗೇರಿ ರೈಲ್ವೆ ಹೋರಾಟ ಸಮಿತಿ ಸದಸ್ಯರಿಂದ ಮನವಿ ಸ್ವೀಕರಿಸಿದರು

## 'ಹೊಸ ಮಾರ್ಗ ನಿರ್ಮಾಣಕ್ಕೆ ರೈಲ್ವೆ ಇಲಾಖೆಗೆ ಪ್ರಸ್ತಾವ'

ಗದಗ ರೈಲು ನಿಲ್ದಾಣದ ಕಾರ್ಯಕ್ರಮ ಮುಗಿಸಿಕೊಂಡು ಮರಳುವಾಗ, ಸಂಸದ ಶಿವಕುಮಾರ ಉದಾಸಿ ಅವರು, ಝೇಂಡಾ ವೃತ್ತದಲ್ಲಿ ಬೆಟಗೇರಿ ರೈಲ್ವೆ ಹೋರಾಟ ಸಮಿತಿ ಸದಸ್ಯರನ್ನು ಭೇಟಿಯಾದರು. 'ಗದಗ-ವಾಡಿ ಮೂಲ ಮಾರ್ಗವನ್ನೇ ಉಳಿಸಿಕೊಳ್ಳಬೇಕು ಎಂಬ ಮನವಿಗೆ ಸ್ಪಂದಿಸಿದ ಅವರು, 'ಈ ಮಾರ್ಗದ ಕಾಮಗಾರಿಗೆ ಈಗಾಗಲೇ ಚಾಲನೆ ನೀಡಲಾಗಿದೆ. ಇದರ ಬದಲು ಹರಪನಹಳ್ಳಿ-ಕೊರ್ಲಹಳ್ಳಿ-ಮುಂಡರಗಿ-ಗದಗ ಮಾರ್ಗವಾಗಿ ಕೊಟುಮಚಗಿ-ನರೇಗಲ್-ಗಜೇಂದ್ರಗಡ-ಇಳಕಲ್- ವಾಡಿಗೆ ಸಂಪರ್ಕ ಕಲ್ಪಿಸುವ ಹೊಸ ಮಾರ್ಗ ನಿರ್ಮಾಣಕ್ಕೆ ರೈಲ್ವೆ ಇಲಾಖೆಗೆ ಪ್ರಸ್ತಾವ ಕಳುಹಿಸೋಣ' ಎಂದರು.

> ಗದುಗಿನಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಿಸಲು ₹ 23 ಲಕ್ಷ ಮಂಜೂರಾಗಿದೆ. ಗದಗ- ಯಲವಗಿ ರೇಲ್ವೆ ಮಾರ್ಗಕ್ಕೆ ರಾಜ್ಯ ಸರ್ಕಾರ ಭೂಮಿ ಒದಗಿಸಿದರೆ ಕಾರ್ಯ ಆರಂಭವಾಗಲಿದೆ
>
> **ಶಿವಕುಮಾರ ಉದಾಸಿ**
> ಸಂಸದ

VIJAY KARNATAKA / GADAG 19/8

VI

ಭೂಸ್ವಾಧೀನಕ್ಕೆ ಕ್ರಮ: ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಭರವಸೆ

# ಗದಗ-ಯಲವಿಗಿ ಮಾರ್ಗಕ್ಕೆ ಸಹಕಾರ

■ **ವಿಕ ಸುದ್ದಿಲೋಕ**, ಗದಗ

ಜಿಲ್ಲೆಯ ಬಹುತೇಕ ತಾಲೂಕು ಕೇಂದ್ರಗಳನ್ನು ರೈಲ್ವೆ ಸಂಪರ್ಕಕ್ಕೆ ಒಳಪಡಿಸಲು ಉತ್ತಮ ಅವಕಾಶವಿದೆ. ರೈಲ್ವೆ ಯೋಜನೆಗಳಿಗೆ ರಾಜ್ಯ ಸರಕಾರ ತನ್ನ ಪಾಲಿನ ಅನುದಾನ, ಭೂಸ್ವಾಧೀನ ಸೇರಿದಂತೆ ಅಗತ್ಯ ಸಹಕಾರ ನೀಡಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಗದಗ ರೈಲ್ವೆ ನಿಲ್ದಾಣ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸ್ಥಳೀಯವಾಗಿ ಜೋಡಿ ರೈಲ್ವೆ ಮಾರ್ಗ ನಿರ್ಮಾಣದ ಕಾಮಗಾರಿ ಫಲಕ ಅನಾವರಣಗೊಳಿಸಿ, ನಿಲ್ದಾಣದ 2 ನೇ ಪ್ಲಾಟ್‌ಫಾರ್ಂನ ಚಾವಣಿಯನ್ನು ಸಾಂಕೇತಿಕವಾಗಿ ಉದ್ಘಾಟಿಸಿ ಅವರು ಮಾತನಾಡಿದರು.

**ಗದಗ-ಕೂಡಗಿ-ಹೂಟಗಿ ರೈಲ್ವೆ ಜೋಡಿ ಮಾರ್ಗ ನಿರ್ಮಾಣಕ್ಕೆ ಚಾಲನೆ**

ಗದಗ-ಯಲವಿಗಿ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಭೂಸ್ವಾಧೀನಕ್ಕೆ ಕ್ರಮ ಮುಂದುವರಿಸಲಾಗುತ್ತಿದೆ. ಇತರೆ ಯೋಜನೆಗಳಿಗೆ ಸಂಬಂಧಿಸಿದಂತೆಯೂ ರೈಲ್ವೆ ಇಲಾಖೆ ಪ್ರಸ್ತಾವನೆ ಸಲ್ಲಿಸಲಿ. ಅಥವಾ ಈಗಾಗಲೇ ಸಲ್ಲಿಸಿದ ಪ್ರಸ್ತಾವನೆಗಳಿದ್ದರೆ ಅವುಗಳಿಗೆ ಮಂಜೂರಾತಿ ಕೊಡಿಸಲು ಪ್ರಯತ್ನಿಸಲಾಗುತ್ತದೆ ಎಂದರು. ರೈಲ್ವೆ ಯೋಜನೆಗಳಿಗೆ ರಾಜ್ಯ ಸರಕಾರ ಭೂಮಿ, ಅನುದಾನ ಒದಗಿಸುತ್ತಿದೆ ಎಂದ ಅವರು, ಹುಬ್ಬಳ್ಳಿ-ಬೆಂಗಳೂರು ರೈಲ್ವೆ ಬ್ರಾಡ್‌ಗೇಜ್, ಯಾದಗಿರಿ ರೈಲ್ವೆ ಕೋಚ್ ಫ್ಯಾಕ್ಟರಿ ಸ್ಥಾಪನೆಗೆ ಸಂಬಂಧಿಸಿದಂತೆ ಮಾಜಿ ರೈಲ್ವೆ ಸಚಿವರಾದ ಜಾಫರ್ ಷರೀಫ, ಮಲ್ಲಿಕಾರ್ಜುನ ಖರ್ಗೆ ಅವರನ್ನೂ ಸ್ಮರಿಸಿದರು.

**ಇಲಾಖೆ ನಿರ್ಲಕ್ಷ್ಯ** : ಗದಗ ರೈಲ್ವೆ ನಿಲ್ದಾಣದಲ್ಲಿ ವೃದ್ಧರು, ವಿಶೇಷಚೇತನರಿಗೆ ಪ್ಲಾಟ್‌ಫಾರ್ಂ ದಾಟಲು ಕಷ್ಟವಾಗುತ್ತಿದೆ. ಅವರ ಅನುಕೂಲಕ್ಕಾಗಿ ಎಸ್ಕಲೇಟರ್ ಅಳವಡಿಸಬೇಕು. ತಮಗಾದರೂ ಅವಕಾಶ ನೀಡಿದರೇ ಯಾವುದಾದರೂ ಅನುದಾನದಲ್ಲಿ ಅದನ್ನು ನಿರ್ಮಿಸಲಾಗುತ್ತದೆ ಎಂದರು. ಬಸ್ ನಿಲ್ದಾಣದಲ್ಲಿ ರೈಲ್ವೆ ಟಿಕೆಟ್ ಸಿಗುವಂತಾಗಬೇಕು ಎಂದ ಅವರು, ರೈಲ್ವೆಗೆ ಸಂಬಂಧಿಸಿದ ಉದ್ಯೋಗ ಸೃಷ್ಟಿಗೆ ಗದಗ ಸೂಕ್ತವಾಗಿದೆ. ಕೆಲವು ಸಂದರ್ಭ ಇಲಾಖೆ ಗದಗನ್ನು ನಿರ್ಲಕ್ಷಿಸುತ್ತಿದೆ. ಜನರ ಧ್ವನಿಯಾಗಿರುವ ಹೋರಾಟಗಾರರ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಸದ ಶಿವಕುಮಾರ ಉದಾಸಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ದೇಶದ ರೈಲ್ವೆ ಮೂಲ ಸೌಲಭ್ಯಗಳ ಅಭಿವೃದ್ಧಿಗೆ ಒತ್ತು ನೀಡಿದೆ. » |||



ಗದಗ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಗದಗ-ಕೂಡಗಿ-ಹೂಟಗಿ ಜೋಡಿ ಮಾರ್ಗ ನಿರ್ಮಾಣ ಕಾಮಗಾರಿಗೆ ಚಾಲನೆ, ಪ್ಲಾಟ್ ಫಾರ್ಮ್ ನಂ.2 ರ ಚಾವಣಿ ಉದ್ಘಾಟನೆ ಸಮಾರಂಭಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಚಾಲನೆ ನೀಡಿದರು.

ಗದಗ-ಕೂಡಗಿ-ಹೂಟಗಿ ಜೋಡಿ ಮಾರ್ಗ ನಿರ್ಮಾಣ ಸೇರಿದಂತೆ ವಿವಿಧ ಯೋಜನೆಗಳಿಗೆ ಚಾಲನೆ ನೀಡಲು ಕೇಂದ್ರದ ರೈಲ್ವೆ ಸಚಿವ ಸುರೇಶ ಪ್ರಭು ಇಲ್ಲಿಗೆ ಆಗಮಿಸಬೇಕಿತ್ತು. ಅವರ ಭೇಟಿಯಿಂದಲಾದರೂ ಹಲವು ಸಣ್ಣಪುಟ್ಟ ಸಮಸ್ಯೆಗಳು ನಿವಾರಣೆಯಾಗುತ್ತಿದ್ದವು.

**ಬಸನಗೌಡ ಪಾಟೀಲ ಯತ್ನಾಳ,**
ಕೇಂದ್ರದ ಮಾಜಿ ರೈಲ್ವೆ ಸಚಿವ

ಕೇಂದ್ರ ಸರಕಾರವು ರೈಲ್ವೆ ಬಜೆಟ್‌ನಲ್ಲಿ ಹೊಸ ಘೋಷಣೆಗಳನ್ನು ಕೈಬಿಟ್ಟು, ಈಗಾಗಲೇ ಘೋಷಿಸಿರುವ ಯೋಜನೆಗಳ ಅನುಷ್ಠಾನಕ್ಕೆ ಒತ್ತು ನೀಡಿದೆ. ಮೂಲ ಸೌಲಭ್ಯ ಅಭಿವೃದ್ಧಿಗಾಗಿ ಹಲವು ಕಾಮಗಾರಿ ಕೈಗೊಂಡಿದೆ. ಗದಗ-ಯಲವಿಗಿ ಮಾರ್ಗಕ್ಕೆ 1 ಕೋಟಿ ರೂ. ಮಂಜೂರಾಗಿದೆ. ರಾಜ್ಯ ಸರಕಾರ ತನ್ನ ಶೇ.50 ರಷ್ಟು ಅನುದಾನದೊಂದಿಗೆ ಮಾರ್ಗ ನಿರ್ಮಾಣಕ್ಕಾಗಿ ಭೂಸ್ವಾಧೀನಕ್ಕೆ ಒಪ್ಪಿಗೆ ನೀಡಬೇಕು.

**-ಶಿವಕುಮಾರ ಉದಾಸಿ**, ಸಂಸದ

## ಕರ್ನಾಟಕಕ್ಕೆ ಅನುದಾನ ಹೆಚ್ಚಳ: ಪ್ರಭು



**ಗದಗ:** ಗದಗ-ಕೂಡಗಿ-ಹೂಟಗಿ ರೈಲ್ವೆ ಜೋಡಿ ಮಾರ್ಗ ನಿರ್ಮಾಣ ಕಾಮಗಾರಿಗೆ ಕೇಂದ್ರ, ರೈಲ್ವೆ ಸಚಿವ ಸುರೇಶ ಪ್ರಭು ನವದೆಹಲಿಯ ರೈಲ್ವೆ ಭವನದಲ್ಲಿ ವಿಡಿಯೊ ಲಿಂಕ್ ಮೂಲಕ ಶುಕ್ರವಾರ ಚಾಲನೆ ನೀಡಿ, ಗದಗ ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಂ 2ರ ವಿಸ್ತರಿಸಿದ ಚಾವಣಿ ಉದ್ಘಾಟಿಸಿದರು.

ವಿಡಿಯೊ ಲಿಂಕ್ ಮೂಲಕವೇ ಮಾತನಾಡಿದ ಅವರು, ಕಳೆದ ಮೂರು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಕರ್ನಾಟಕದ ವಿವಿಧ ರೈಲ್ವೆ ಯೋಜನೆಗಳಿಗಾಗಿ 60 ಸಾವಿರ ಕೋಟಿ ರೂ. ಅನುದಾನ ಒದಗಿಸಿ, ಕಾಮಗಾರಿ ಗಳನ್ನು ಕೈಗೊಂಡಿದೆ ಎಂದು ಹೇಳಿದರು. ರೈಲ್ವೆ ಬೋಗಿ ಕಾರ್ಖಾನೆ, ನೀರು ಪುನರ್ಬಳಕೆ ಯೋಜನೆ, ರೈಲು ಗಾಲಿ ನಿರ್ಮಾಣ ಕಾರ್ಖಾನೆ ಸ್ಥಾಪನೆ, ಜೋಡಿ ಮಾರ್ಗ ನಿರ್ಮಾಣ ಸೇರಿದಂತೆ ವಿವಿಧ ಯೋಜನೆಗಳಿಗಾಗಿ ಮೂರು ವರ್ಷಗಳಲ್ಲಿ 60 ಸಾವಿರ ಕೋಟಿ ರೂ.ಗಳನ್ನು ಕರ್ನಾಟಕದಲ್ಲಿ ಹೂಡಿಕೆ ಮಾಡಲಾಗಿದೆ ಎಂದು ತಿಳಿಸಿದರು. » |||

### ಜೈ ಕರ್ನಾಟಕ !

ರಾಜ್ಯದ ವಿವಿಧ 11 ರೈಲ್ವೆ ಯೋಜನೆಗಳಿಗೆ ವಿಡಿಯೊ ಲಿಂಕ್ ಮೂಲಕ ಚಾಲನೆ ನೀಡಿದ ಕೇಂದ್ರ ಸಚಿವ ಸುರೇಶ ಪ್ರಭು, 'ಜೈ ಹಿಂದ್, ಜೈ ಕರ್ನಾಟಕ' ಎಂಬ ಘೋಷಣೆ ಮೂಲಕ ತಮ್ಮ ಭಾಷಣ ಕೊನೆಗೊಳಿಸಿದರು. ಇದಕ್ಕೂ ಮೊದಲು ಮುಂದಿನ 2 ವರ್ಷಗಳಲ್ಲಿ ದೇಶದಲ್ಲಿ 16 ಸಾವಿರ ಕಿಮೀ ರೈಲ್ವೆ ಮಾರ್ಗಗಳನ್ನು ಡಬ್ಲಿಂಗ್ ಮಾಡುವುದಾಗಿ ತಿಳಿಸಿದರು.

VISHWAWANI/GADAG 19/8/2017

## ಗದಗ, ಕೂಡಗಿ, ಹೂಟಗಿ ಜೋಡಿ ರೈಲು ಮಾರ್ಗ ಕಾಮಗಾರಿಗೆ ಚಾಲನೆ

# ಪ್ಲಾಟ್ ಫಾರ್ಮ್ ಮೇಲ್ಸಾವಣಿ ಉದ್ಘಾಟನೆ

ವಿಶ್ವವಾಣಿ ಸುದ್ದಿಮನೆ ಗದಗ

1615 ಕೋಟಿ ರು. ವೆಚ್ಚದಲ್ಲಿ 284 ಕಿಮೀ ಉದ್ದದ ಗದಗ-ಕೂಡಗಿ-ಹೂಟಗಿ ಜೋಡಿ ರೈಲು ಮಾರ್ಗ ನಿರ್ಮಾಣದಿಂದ ದಕ್ಷಿಣ ಭಾರತವನ್ನು ಉತ್ತರ ಭಾರತಕ್ಕೆ ಜೋಡಿಸುವ ಪ್ರಮುಖ ಮಾರ್ಗವಾಗಲಿದೆ ಎಂದು ವಿಪ ಸದಸ್ಯ ಬಸನಗೌಡ ಯತ್ನಾಳ ಹೇಳಿದರು.

ರೈಲ್ವೆ ನಿಲ್ದಾಣದಲ್ಲಿ ನಡೆದ ಗದಗ-ಕೂಡಗಿ-ಹೂಟಗಿ ದ್ವಿಪಥ ಯೋಜನೆಯ ಚಾಲನೆ ಹಾಗೂ ನಿಲ್ದಾಣದ 2ನೇ ಪ್ಲಾಟ್ ಫಾರ್ಮ್‌ನ ಮೇಲ್ಛಾವಣಿ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ಬಹುದಿನಗಳ ಬೇಡಿಕೆ ಇದಾಗಿದ್ದು, ಕೂಡಗಿ ಶಾಖ ವಿದ್ಯುತ್ ಸ್ಥಾವರಕ್ಕೆ ಈ ಮಾರ್ಗದಿಂದ ಅನುಕೂಲವಾಗಲಿದೆ. ಮಾಜಿ ಪ್ರಧಾನಮಂತ್ರಿ ಅಟಲ್‌ಬಿಹಾರಿ ವಾಜಪೇಯಿ ಅವರ ಸರಕಾರದಲ್ಲಿ ತಾವು ಕೂಡ ರೈಲ್ವೆ ಇಲಾಖೆ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದನ್ನು ಸ್ಮರಿಸಿದ ಅವರು, ರೈಲ್ವೆ ಸಚಿವರು ಆಗಾಗ ರೈಲ್ವೆ ನಿಲ್ದಾಣಗಳಿಗೆ ಭೇಟಿ ನೀಡುವುದರಿಂದ ಊರಿನ ರೈಲು ನಿಲ್ದಾಣಗಳೆಲ್ಲ ಸುಣ್ಣ-ಬಣ್ಣ ಕಂಡು ಉದ್ಧಾರವಾಗುತ್ತವೆ. ಈ ಕಾರ್ಯಕ್ರಮಕ್ಕು ರೈಲ್ವೆ ಸಚಿವ ಸುರೇಶ ಪ್ರಭು ಅವರನ್ನು ಗದಗ ನಗರಕ್ಕೆ ಕರೆ ತರಬೇಕಿತ್ತು ಎಂದು ಸಂಸದ ಶಿವಕುಮಾರ ಉದಾಸಿಯವರಿಗೆ ಹೇಳಿದರು.

ಸಂಸದ ಶಿವಕುಮಾರ ಉದಾಸಿ ಮಾತನಾಡಿ, 13 ಲಕ್ಷ ಜನ ಉದ್ಯೋಗಿಗಳನ್ನು



ರೈಲ್ವೆ ನಿಲ್ದಾಣದ 2ನೇ ಪ್ಲಾಟ್ ಫಾರ್ಮ್ ಮೇಲ್ಛಾವಣಿ ಉದ್ಘಾಟಿಸಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಮಾತನಾಡಿದರು.

### ವಿಡಿಯೋ ಲಿಂಕ್ ಮೂಲಕ ಉದ್ಘಾಟನೆ

**ನವದೆಹಲಿಯ ರೈಲ್ ಭವನದಲ್ಲಿ ವಿಡಿಯೋ ಲಿಂಕ್ ಮುಖಾಂತರ ರಾಜ್ಯದ 11 ರೈಲ್ವೆ ಕಾಮಗಾರಿಗಳಿಗೆ ಕೇಂದ್ರ ರೈಲ್ವೆ ಸಚಿವ ಸುರೇಶ ಪ್ರಭು ಚಾಲನೆ ನೀಡಿದರು. ಇದೇ ವೇಳೆ ಕೊಪ್ಪಳದಲ್ಲಿ ಗದಗ, ವಾಡಿ ಭಾಗದ ಹೊಸ ಮಾರ್ಗಕ್ಕೂ ಚಾಲನೆ ನೀಡಲಾಯಿತು.**

ಸಾವಿರ ಕೋಟಿ ರು.ಗಳನ್ನು ಹೂಡಿಕೆ ಮಾಡಿದ್ದು, ರೈಲ್ವೆ ವೇಗ ಹೆಚ್ಚಳದೊಂದಿಗೆ ಸುರಕ್ಷಿತ ಪ್ರಯಾಣ ಒದಗಿಸುವ ವಿಶ್ವದ ಅತ್ಯಂತ ಬಹುದೊಡ್ಡ ಸಾರಿಗೆ ವ್ಯವಸ್ಥೆಯಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಮಾತನಾಡಿ, ನಿಗಧಿತ ಅವಧಿಯಲ್ಲಿ ತಾವು ನಿರ್ವಹಿಸುವ ಕೆಲಸವನ್ನು

ಮಿತ್ರರಾದ ಕೇಂದ್ರ ರೈಲ್ವೆ ಸಚಿವ ಸುರೇಶ ಪ್ರಭು ಯಶಸ್ವಿಯಾಗಿದ್ದಾರೆ ಎಂದರು.

ಗದಗ ಜಿಪಂ ಅಧ್ಯಕ್ಷ ವಾಸಣ್ಣ ಕುರಡಗಿ, ಶ್ರೀನಿವಾಸ ಹುಯಿಲಗೋಳ, ಜಿಲ್ಲಾಧಿಕಾರಿ ಮನೋಜ್ ಜೈನ್, ಜಿಪಂ ಸಿಇಒ ಮಂಜುನಾಥ ಚವ್ಹಾಣ, ಮಾಜಿ ಸಚಿವ ಸಿ.ಸಿ. ಪಾಟೀಲ, ನೈರುತ್ಯ ರೈಲ್ವೆ ಇಲಾಖೆ ಹಿರಿಯ ಅಧಿಕಾರಿ ಎ.ಕೆ. ಗುಪ್ತಾ, ಎ.ಕೆ. ಜೈನ್ ಹಾಗೂ

> ರೈಲ್ವೆ ನಿಲ್ದಾಣಗಳಿಗೆ ತೆರಳಲು ವಿಕಲಾಂಗರು, ಹಿರಿಯ ಜೀವಗಳು ಸಂಚರಿಸಲು ಅನುಕೂಲವಾಗುವ ನಿಟ್ಟಿನಲ್ಲಿ ರೈಲು ನಿಲ್ದಾಣದಲ್ಲಿ ಎಕ್ಸ್‌ಲೇಟರ್ ಅಳವಡಿಸಬೇಕು. ರೈಲ್ವೆ ಇಲಾಖೆ ಒಪ್ಪಿದಲ್ಲಿ ಸ್ಥಳೀಯ ಆಡಳಿತದಿಂದ ನಿರ್ಮಿಸಬಹುದು. ಇಲ್ಲವೇ ಶೇ.50ರಷ್ಟು ಹಣ ನೀಡಲು ಸಹ ಸರಕಾರ ಸಿದ್ಧವಿದೆ.
>
> -ಎಚ್.ಕೆ. ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ

46

SAMYUKTA KARNATAKA
GADAG 17/8/2017

## ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರ ಮೇಲ್ಸೇತುವೆ ಉದ್ಘಾಟನೆ

# ಬಸ್ ನಿಲ್ದಾಣದಲ್ಲಿ ರೈಲ್ವೆ ಟಿಕೆಟ್ ಸೌಲಭ್ಯ ಕಲ್ಪಿಸಿ

ಗದಗ: ಪ್ರಯಾಣಿಕರ ಅನುಕೂಲಕ್ಕಾಗಿ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ರೈಲ್ವೆ ಟಿಕೆಟ್ ದೊರೆಯುವಂತೆ ವ್ಯವಸ್ಥೆ ಕಲ್ಪಿಸುವಂತೆ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಎಚ್. ಕೆ. ಪಾಟೀಲ ಸಲಹೆ ನೀಡಿದರು.

ಗದಗ ರೈಲ್ವೆ ನಿಲ್ದಾಣದಲ್ಲಿ ಗದಗ-ವಾಡಿ ನೂತನ ರೈಲು ಮಾರ್ಗ, ಗದಗ-ಕೂಡಗಿ-ಹೋಟಗಿ ಜೋಡಿ ಮಾರ್ಗ, ರೈಲು ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮನಲ್ಲಿ ಪ್ರಯಾಣಿಕರಿಗಾಗಿ ಮೇಲ್ಸೇತುವೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಜಿಲ್ಲೆಯ ಬಹುತೇಕ ಎಲ್ಲ ತಾಲೂಕುಗಳಿಗೆ ರೈಲ್ವೆ ಸಂಪರ್ಕ ಕಲ್ಪಿಸಲು ಅವಕಾಶವಿದೆ. ಗದಗ-ಲಕ್ಷ್ಮೇಶ್ವರ-ಯಲುವಿಗಿ ಮೂಲಕ ಹಾವೇರಿ ಸಂಪರ್ಕಿಸುವ ಮೂಲಕ ಶಿರಹಟ್ಟಿ ತಾಲೂಕಿಗೆ, ಗದಗ ಕೋಟುಮಚಗಿ,ನರೇಗಲ್, ಗಜೇಂದ್ರಗಡ ಮಾರ್ಗವಾಗಿ ಕೊಪ್ಪಳ ಸಂಪರ್ಕಿಸುವ ಮೂಲಕ ರೋಣ, ಗಜೇಂದ್ರಗಡ ತಾಲೂಕುಗಳಿಗೆ, ಮುಂಡರಗಿ, ಹರಪನಹಳ್ಳಿ ಮಾರ್ಗವಾಗಿ ದಾವಣಗೆರೆ ಸಂಪರ್ಕಿಸುವ ಮೂಲಕ ಮುಂಡರಗಿ ತಾಲೂಕುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು.

**ರಾಜ್ಯ ಸರ್ಕಾರದ ವಂತಿಗೆ:** ರಾಜ್ಯದಲ್ಲಿನ ಕೆಲ ಯೋಜನೆಗಳಿಗೆ ರಾಜ್ಯ ಸರ್ಕಾರ ಶೇ. 50 ರಿಂದ 60 ರಷ್ಟು ವಂತಿಗೆ ನೀಡಿದೆ. ರೈಲ್ವೆ ಯೋಜನೆಗಳಿಗೆ ಅವಶ್ಯವಿರುವ ಜಮೀನು ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಯಾವುದೇ ರೈಲ್ವೆ ಯೋಜನೆಗೆ ಸಂಬಂಧಿಸಿದ ಯಾವುದೇ ಕಡತ ರಾಜ್ಯ ಸರ್ಕಾರಿ ಹಂತದಲ್ಲಿ ಸ್ಥಗಿತಗೊಂಡಿದ್ದಲ್ಲಿ ಅಧಿಕಾರಿಗಳು ಕೂಡಲೇ ಮಾಹಿತಿ ನೀಡಬೇಕು. ಅಂದರೆ ಕಡತವನ್ನು ಕೂಡಲೇ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಇಲ್ಲಿನ ರೈಲ್ವೆ ನಿಲ್ದಾಣದಲ್ಲಿ ಗದಗ-ವಾಡಿ ನೂತನ ರೈಲು ಮಾರ್ಗ, ಗದಗ-ಕೂಡಗಿ-ಹೋಟಗಿ ಜೋಡಿ ಮಾರ್ಗ, ರೈಲು ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮನಲ್ಲಿ ಪ್ರಯಾಣಿಕರಿಗಾಗಿ ನಿರ್ಮಿಸಿದ ಮೇಲ್ಸೇತುವೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ರೈಲ್ವೆ ಸಚಿವರನ್ನೇ ಇಲ್ಲಿಗೆ ಕರೆಯಿಸಿ ಉದ್ಘಾಟನೆ ಮಾಡಿಸಬೇಕಿತ್ತು.

ಇಂತಹ ಮಹತ್ವಾಕಾಂಕ್ಷಿ ಯೋಜನೆಗಳ ಉದ್ಘಾಟನೆಗೆ ಕೇಂದ್ರ ಸಚಿವ ಸುರೇಶ ಪ್ರಭು ಗದಗಕ್ಕೆ ಬಂದು ಉದ್ಘಾಟಿಸಬೇಕಿತ್ತು. ಕೇಂದ್ರ ಸಚಿವರು ಬಂದರೇ ಈ ಮಾರ್ಗದಲ್ಲಿನ ರೈಲು ನಿಲ್ದಾಣಗಳು ಉದ್ಧಾರವಾಗುತ್ತವೆ.

**ಬಸನಗೌಡಾ ಪಾಟೀಲ ಯತ್ನಾಳ**
**ವಿಧಾನ ಪರಿಷತ್ ಸದಸ್ಯರು. ಮಾಜಿ ರೈಲ್ವೆ ಸಚಿವರು.**

**ಬ್ರಾಡ್‌ಗೇಜ್ ಶರೀಫ ಕೊಡುಗೆ:**

ರಾಜ್ಯದಲ್ಲಿನ ಬಹುತೇಕ ಮೀಟರ್ ಗೇಜ್‌ಗಳನ್ನು ಬ್ರಾಡ್‌ಗೇಜ್‌ಗೆ ಪರಿವರ್ತಿಸಿದ ಕೀರ್ತಿ ಮಾಜಿ ರೈಲ್ವೆ ಸಚಿವ ಸಿ.ಕೆ. ಜಾಫರಶರೀಫರಿಗೆ ಸಲ್ಲುತ್ತದೆ. ಅತೀ ಕಡಿಮೆ ಅವಧಿಯಲ್ಲಿ ಹುಬ್ಬಳ್ಳಿ-ಬೆಂಗಳೂರು ರೈಲ್ವೆ ಮಾರ್ಗವನ್ನು ಪೂರ್ಣಗೊಳಿಸುವ ಮೂಲಕ ಕ್ರಾಂತಿಯುಂಟು ಮಾಡಿದರು ಎಂದರು.

**ಗದಗ ನರೇಗಲ್ಲ ಮೂಲಕ ರೈಲು**

ಗದಗ ನರೇಗಲ್ಲ, ಕೋಟುಮಚಗಿ ಮೂಲಕ ಇಳಕಲ್ಲ ಮಾರ್ಗವಾಗಿ ನೂತನ ರೈಲ್ವೆ ಆರಂಭಿಸಲು ಸರ್ವೆ ನಡೆಸುವಂತೆ ರೈಲ್ವೆ ಸಚಿವರೊಂದಿಗೆ ಚರ್ಚಿಸುತ್ತೇನೆ.

**ಶಿವಕುಮಾರ ಉದಾಸಿ**
**ಸಂಸದರು.**

ಗದಗ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಸುಮಾರು ಮೂರು ಸಾವಿರಕ್ಕೂ ಮಿಕ್ಕ ಕಾರ್ಮಿಕರು ರೈಲ್ವೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಗದಗನಲ್ಲಿ ರೈಲ್ವೆ ವರ್ಕ್‌ಶಾಪನ್ನು ಆರಂಭಿಸುವಂತೆ ಆಗ್ರಹಿಸಿದರು.

ಸಂಸದ ಶಿವಕುಮಾರ ಉದಾಸಿ ಮಾತನಾಡಿ, ಗದಗ ವಾಡಿ ನೂತನ ರೈಲು ಮಾರ್ಗದ ಮಧ್ಯೆ ತಮ್ಮ ಮತಕ್ಷೇತ್ರದಲ್ಲಿ ರಾಣಿಬೆನ್ನೂರ, ಮೋಟೆಬೆನ್ನೂರ, ಬ್ಯಾಡಗಿಗಳಲ್ಲಿ ಮೂರು ಮೇಲ್ಸೇತುವೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.

ಈ ಭಾಗದ ಜನರ ಬಹುದಿನದ ಬೇಡಿಕೆಯಾಗಿರುವ ಗದಗ-ಯಲುವಿಗಿ ಮೂಲಕ ಹಾವೇರಿ ತಲುಪುವ ಯೋಜನೆಗೆ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಯೋಜನೆ ರೂಪಿಸಲಾಗಿದೆ. ಈ ಯೋಜನೆಗೆ ರಾಜ್ಯ ಸರ್ಕಾರ ಶೇ. 50ರಷ್ಟು ವಂತಿಗೆ ನೀಡುವುದಾಗಿ ಹೇಳಿದೆ. ಈ ಕಡತವನ್ನು ಸಚಿವ ಎಚ್.ಕೆ. ಪಾಟೀಲ ಸಚಿವ ಸಂಪುಟದಲ್ಲಿ ಚರ್ಚಿಸಿ ಕೂಡಲೇ ಬಿಡುಗಡೆ ಮಾಡಿಸುವಂತೆ ಆಗ್ರಹಿಸಿದರು.

48

ವಿಜಯ ಕರ್ನಾಟಕ/ ಬೆಂಗಳೂರು
VIJAYA KARNATAKA/ BNG
19 AUG 2017

# ಕರ್ನಾಟಕಕ್ಕೆ ಅನುದಾನ ಹೆಚ್ಚಳ: ಪ್ರಭು



**ಗದಗ:** ಗದಗ-ಕೂಡಗಿ-ಹೂಟಗಿ ರೈಲ್ವೆ ಜೋಡಿ ಮಾರ್ಗ ನಿರ್ಮಾಣ ಕಾಮಗಾರಿಗೆ ಕೇಂದ್ರ ರೈಲ್ವೆ ಸಚಿವ ಸುರೇಶ ಪ್ರಭು ನವದೆಹಲಿಯ ರೈಲ್ವೆ ಭವನದಲ್ಲಿ ವಿಡಿಯೊ ಲಿಂಕ್ ಮೂಲಕ ಶುಕ್ರವಾರ ಚಾಲನೆ ನೀಡಿ, ಗದಗ ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಂ 2ರ ವಿಸ್ತರಿಸಿದ ಚಾವಣಿ ಉದ್ಘಾಟಿಸಿದರು.

ವಿಡಿಯೊ ಲಿಂಕ್ ಮೂಲಕವೇ ಮಾತನಾಡಿದ ಅವರು, ಕಳೆದ ಮೂರು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಕರ್ನಾಟಕದ ವಿವಿಧ ರೈಲ್ವೆ ಯೋಜನೆಗಳಿಗಾಗಿ 60 ಸಾವಿರ ಕೋಟಿ ರೂ. ಅನುದಾನ ಒದಗಿಸಿ, ಕಾಮಗಾರಿಗಳನ್ನು ಕೈಗೊಂಡಿದೆ ಎಂದು ಹೇಳಿದರು. ರೈಲ್ವೆ ಬೋಗಿ ಕಾರ್ಖಾನೆ, ನೀರು ಪುನರ್ಬಳಕೆ ಯೋಜನೆ, ರೈಲು ಗಾಲಿ ನಿರ್ಮಾಣ ಕಾರ್ಖಾನೆ ಸ್ಥಾಪನೆ, ಜೋಡಿ ಮಾರ್ಗ ನಿರ್ಮಾಣ ಸೇರಿದಂತೆ ವಿವಿಧ ಯೋಜನೆಗಳಿಗಾಗಿ ಮೂರು ವರ್ಷಗಳಲ್ಲಿ 60 ಸಾವಿರ ಕೋಟಿ ರೂ.ಗಳನ್ನು ಕರ್ನಾಟಕದಲ್ಲಿ ಹೂಡಿಕೆ ಮಾಡಲಾಗಿದೆ ಎಂದು ತಿಳಿಸಿದರು.

### ಜೈ ಕರ್ನಾಟಕ !

ರಾಜ್ಯದ ವಿವಿಧ 11 ರೈಲ್ವೆ ಯೋಜನೆಗಳಿಗೆ ವಿಡಿಯೊ ಲಿಂಕ್ ಮೂಲಕ ಚಾಲನೆ ನೀಡಿದ ಕೇಂದ್ರ ಸಚಿವ ಸುರೇಶ ಪ್ರಭು, 'ಜೈ ಹಿಂದ್, ಜೈ ಕರ್ನಾಟಕ' ಎಂಬ ಘೋಷಣೆ ಮೂಲಕ ತಮ್ಮ ಭಾಷಣ ಕೊನೆಗೊಳಿಸಿದರು. ಇದಕ್ಕೂ ಮೊದಲು ಮುಂದಿನ 2 ವರ್ಷಗಳಲ್ಲಿ ದೇಶದಲ್ಲಿ 16 ಸಾವಿರ ಕಿಮೀ ರೈಲ್ವೆ ಮಾರ್ಗಗಳನ್ನು ಡಬ್ಲಿಂಗ್ ಮಾಡುವುದಾಗಿ ತಿಳಿಸಿದರು.

# ಗದಗ-ಯಲವಿಗಿ ಮಾರ್ಗಕ್ಕೆ ಸಹಕಾರ

**ಗದಗ:** ಜಿಲ್ಲೆಯ ಬಹುತೇಕ ತಾಲೂಕು ಕೇಂದ್ರಗಳನ್ನು ರೈಲ್ವೆ ಸಂಪರ್ಕಕ್ಕೆ ಒಳಪಡಿಸಲು ಉತ್ತಮ ಅವಕಾಶವಿದೆ. ರೈಲ್ವೆ ಯೋಜನೆಗಳಿಗೆ ರಾಜ್ಯ ಸರಕಾರ ತನ್ನ ಪಾಲಿನ ಅನುದಾನ, ಭೂಸ್ವಾಧೀನ ಸೇರಿದಂತೆ ಅಗತ್ಯ ಸಹಕಾರ ನೀಡಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹೇಳಿದರು. ಗದಗ ರೈಲ್ವೆ ನಿಲ್ದಾಣ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸ್ಥಳೀಯವಾಗಿ ಜೋಡಿ ರೈಲ್ವೆ ಮಾರ್ಗ ನಿರ್ಮಾಣದ ಕಾಮಗಾರಿ ಫಲಕ ಅನಾವರಣಗೊಳಿಸಿ, ನಿಲ್ದಾಣದ 2 ನೇ ಪ್ಲಾಟ್‌ಫಾರ್ಂನ ಚಾವಣಿಯನ್ನು ಸಾಂಕೇತಿಕವಾಗಿ ಉದ್ಘಾಟಿಸಿ ಅವರು ಮಾತನಾಡಿದರು.



ಗದಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಗದಗ-ಕೂಡಗಿ-ಹೂಟಗಿ ಜೋಡಿ ಮಾರ್ಗ ನಿರ್ಮಾಣ ಕಾಮಗಾರಿಗೆ ಚಾಲನೆ, ಪ್ಲಾಟ್ ಫಾರ್ಮ್ ನಂ.2 ರ ಚಾವಣಿ ಉದ್ಘಾಟನೆ ಸಮಾರಂಭಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಚಾಲನೆ ನೀಡಿದರು.

49

ದಿ ಹಿಂದೂ ಬೆಂಗಳೂರು
THE HINDU/ BNG
19 AUG 2017

# Work on Gadag-Wadi new railway line begins

## Minister: Hopeful that the work will be completed according to the schedule



Minister Basavaraj Rayaraddi speaking at a function organised at Bhanapur railway station on Friday.

SPECIAL CORRESPONDENT
KOPPAL

Minister for Higher Education and district in-charge Basavaraj Rayaraddi was hopeful that the new railway line between Gadag and Wadi would be completed within the scheduled five years.

He was speaking after inaugurating the work of laying the new line, dedicating the second line between Bhanapur and Koppal and new platforms in Koppal railway station at a function organised in Bhanapur railway station near here on Friday.

"The 257-km stretch new Gadag-Wadi line, which was approved in 2013-14 at an estimated cost of ₹1,923 crore, was being taken up now with revised cost estimate of ₹2,841 crore. The new line was proposed long back when I was the member of Parliament and for various reasons it got delayed," he said.

According to him, the proposed work was being taken on a cost sharing basis with the State government shouldering 50% of the cost and also allotting the required lands.

To ensure speedy progress, the State government had entrusted the task of acquiring the lands through Karnataka Industrial Area Development Board and hand it over to the Railways.

"Now the 58-km stretch work between Talakal and Kushtagi had been taken up and would be completed in a span of 18 months. The process of acquiring land between Kushtagi-Shahapur-Wadi was under way. The new line will reduce the distance between Karnataka and Andhra Pradesh besides helping economic development of this region," he said.

Karadi Sanganna, MP, said that the new line would benefit Koppal, Raichur, Yadgir, and Kalaburagi districts and give a boost to economic and industrial development.

He underlined the need to complete the land acquisition process so as to ensure that the project would be ready as per schedule.

B.B. Singh, Assistant General Manager South Western Zone, welcomed. Raghavendra Hitnal, MLA, Halappa Achar, and Amaregouda Byyapur, former legislators, M. Kanagavalli, Deputy Commissioner, Venkataraja, ZP Chief Executive Officer, were among other elected representatives and senior officials present.

DECCAN HERALD/KOPPAL 19/8/2017

# We are committed to enhance railway facilities in State: Prabhu

## Inaugurates Gadag-Wadi railway line, other facilities

**KOPPAL: The launch of Gadag-Wadi railway line, the inauguration of doubling of railway lines between Bhanapur and Koppal, and the inauguration of platform numbers two and three in Koppal Railway Station were carried out at a programme held in Bhanapur Railway Station near Koppal on Friday.**



MP Sanganna Karadi and Minister Basavaraj Rayareddy launching Gadag-Wadi railway line work along with inauguration of various railway facilities at a programme held in Bhanapur railway station near Koppal on Friday. DH PHOTO

Union Railway Minister Suresh Prabhu launched the works from Railway Board office in New Delhi through video link. He also launched a new train at Baiyappanahalli in Bengaluru, a solar unit and rain water harvesting facility at Mysuru railway station, an upgradation of passenger waiting rooms in Shivamogga and Gadag stations, and rail coach factory in Yadgir.

Speaking on the occasion, the Railway Minister stated that the Central government is committed to providing additional facilities in the State.

"There are several opportunities in the State for taking up new projects. Funds, more than what was committed in the Budget, have already been earmarked for the State, and the government is committed to completing them within a particular timeframe," Mr Prabhu stated.

The Central government will complete the modernisation of railway stations, incorporation of new technologies, and construction of new railway lines at the earliest. The Railway Department is all set to extend its areas of operation in the next five years. Moreover, the Railways is committed to contributing to the economic development of the country, the Railway Minister stated.

Speaking after the video conference, District In-charge Minister Basavaraj Rayareddy stated that when he was MP he had taken up the issue of Gadag-Wadi railway line with the then railway minister Ram Vilas Paswan.

"In fact, Gadag-Wadi railway line should have been completed in 1910. The work on the line did not take off due to the differences with the British government and due to several technical problems. Later, surveys on the line were undertaken in 1990 and again in 2015, and now the work on the project is being launched," Mr Rayareddy explained the struggle behind the implementation of the project, and presented the relevant documents to support his contention.

MP Sanganna Karadi also spoke on the occasion.

South Western Railway Additional General Manager B B Singh,

MLA K Raghavendra Hitnal, former MLC Halappachar, and others were present on the occasion.

**DH News Service**

ಸಂಯುಕ್ತ ಕರ್ನಾಟಕ / ಬೆಂಗಳೂರು
SAMYUKTHA KARNATAKA / BNG
9 AUG 2017



# ಗದಗ-ವಾಡಿ ರೈಲ್ವೆ ಯೋಜನೆ 5 ವರ್ಷದೊಳಗೆ ಪೂರ್ಣ



ಕೊಪ್ಪಳ ಜಿಲ್ಲೆಯ ಭಾನಾಪುರ ರೈಲ್ವೆ ನಿಲ್ದಾಣದಲ್ಲಿ ಗದಗ-ವಾಡಿ ಹೊಸ ರೈಲ್ವೆ ಮಾರ್ಗ ಕಾಮಗಾರಿಗೆ ಚಾಲನೆ, ಭಾನಾಪುರ-ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗ ಪ್ಲಾಟ್ ಫಾರಂ ಸಂಖ್ಯೆ 2/3ರ ಸಮಾರಂಭದಲ್ಲಿ ಸಚಿವ ರಾಯರೆಡ್ಡಿ ಮಾತನಾಡಿದರು.

**ಕೊಪ್ಪಳ:** ಜಿಲ್ಲೆಯ ಯಲಬುರ್ಗಾ ತಾಲೂಕಿನ ತಳಕಲ್‌ನಿಂದ ಪ್ರಾರಂಭವಾಗುವ ಗದಗ-ವಾಡಿ ರೈಲ್ವೆ ನೂತನ ಮಾರ್ಗದ ಕಾಮಗಾರಿ ಐದು ವರ್ಷದೊಳಗೆ ಪೂರ್ಣಗೊಳ್ಳುವ ವಿಶ್ವಾಸವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಹೇಳಿದರು.

ಜಿಲ್ಲೆಯ ಭಾನಾಪುರ ರೈಲ್ವೆ ನಿಲ್ದಾಣದಲ್ಲಿ ಆಯೋಜಿಸಿದ ಗದಗ-ವಾಡಿ ಹೊಸ ರೈಲ್ವೆ ಮಾರ್ಗ ಕಾಮಗಾರಿಗೆ ಚಾಲನೆ, ಭಾನಾಪುರ-ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗ ಪ್ಲಾಟ್‌ಫಾರಂ ಸಂಖ್ಯೆ 2/3 ರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಗದಗ-ವಾಡಿ ನೂತನ ರೈಲ್ವೆ ಮಾರ್ಗ 257 ಕಿ.ಮೀ. ಮಾರ್ಗವನ್ನು ಹೊಂದಿದ್ದು, 1923 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲು 2013-14 ರಲ್ಲಿ ಮಂಜೂರಾತಿ ನೀಡಲಾಗಿದೆ. ಇದೀಗ ಯೋಜನೆ ವೆಚ್ಚ 2841 ಕೋಟಿ ರೂ. ಗಳಿಗೆ ಪರಿಷ್ಕರಣೆಗೊಂಡಿದೆ ಎಂದು ಮಾಹಿತಿ ನೀಡಿದರು.

### ಶೇ.65ರಷ್ಟು ವೆಚ್ಚ ರಾಜ್ಯದ್ದು

ಗದಗ-ವಾಡಿ ರೈಲ್ವೆ ಮಾರ್ಗವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವೆಚ್ಚ ಹಂಚಿಕೆಯ ಆಧಾರದಲ್ಲಿ ಕೈಗೊಳ್ಳಲಾಗಿದೆ. ರಾಜ್ಯ ಸರ್ಕಾರ ಕಾಮಗಾರಿಯ ಶೇ.50ರ ವೆಚ್ಚದ ಜೊತೆಗೆ ಭೂಮಿಯನ್ನು ಯೋಜನೆಗೆ ನೀಡಲಾಗಿದೆ. ಅಂದರೆ ಶೇ. 65ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಿದಂತಾಗುತ್ತದೆ ಎಂದರು. ರೈಲ್ವೆ ಮಾರ್ಗಕ್ಕೆ ಅಗತ್ಯವಿರುವ 3472 ಎಕರೆ ಭೂಸ್ವಾಧೀನಕ್ಕಾಗಿ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮ ವತಿಯಿಂದ ಭೂಮಿಯನ್ನು ರೈತರಿಂದ ಖರೀದಿಸಲಾಗುತ್ತದೆ ಎಂದು ಹೇಳಿದರು.

### ತಳಕಲ್- ಕುಷ್ಟಗಿ ಮಾರ್ಗ

ಇದೀಗ ತಳಕಲ್-ಕುಷ್ಟಗಿ ಮಾರ್ಗದ 58 ಕಿ.ಮೀ. ಮಾರ್ಗದ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಅಗತ್ಯ ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ. 18 ತಿಂಗಳ ಒಳಗಾಗಿ 58 ಕಿ.ಮೀ. ಮಾರ್ಗ ಪೂರ್ಣಗೊಳ್ಳಲಿದೆ. ಕುಷ್ಟಗಿ-ಶಹಾಪುರ ಮತ್ತು ಶಹಾಪುರ-ವಾಡಿ ಮಾರ್ಗಕ್ಕಾಗಿ ಭೂಮಿಯನ್ನು ವಶಪಡಿಸಿಕೊಳ್ಳುವ ಕಾರ್ಯಕ್ಕೆ ಈಗಾಗಲೆ ಚಾಲನೆ ದೊರೆತಿದೆ. ಗದಗ-ವಾಡಿ ಮಾರ್ಗದ ತಳಕಲ್ ಜಂಕ್ಷನ್ ರೈಲ್ವೆ ನಿಲ್ದಾಣವನ್ನು ರಾಜ್ಯದ ಮಾದರಿ ರೈಲ್ವೆ ನಿಲ್ದಾಣವನ್ನಾಗಿ ನಿರ್ಮಿಸುವ ಆಶಯ ನಮ್ಮದು ಎಂದು ತಿಳಿಸಿದರು.

ಸಂಸದ ಕರಡಿ ಸಂಗಣ್ಣ ಮಾತನಾಡಿ, ತಳಕಲ್-ಕುಷ್ಟಗಿ ಮಾರ್ಗದ ಭೂಸ್ವಾಧೀನ ಪೂರ್ಣಗೊಂಡಿದ್ದು, ಕುಷ್ಟಗಿ-ಲಿಂಗಸುಗೂರು ಮಾರ್ಗದ ಭೂಸ್ವಾಧೀನ ಬೇಗ ಆಗಬೇಕು. ಮುನಿರಾಬಾದ್-ಮೆಹಬೂಬ್‌ನಗರ ರೈಲ್ವೆ ಮಾರ್ಗಕ್ಕೆ ಸಂಬಂಧಿಸಿದಂತೆ ಈಗಾಗಲೆ ಚಿಕ್ಕಬೆಣಕಲ್ ವರೆಗೆ ರೈಲು ಸಂಚಾರ ಪ್ರಾರಂಭವಾಗಿದ್ದು, ಡಿಸೆಂಬರ್ ವೇಳೆಗೆ ಗಂಗಾವತಿಗೆ ರೈಲು ಸಂಚರಿಸಲಿದೆ. ಭಾನಾಪುರ ರೈಲ್ವೆ ಗೇಟ್‌ಗೆ ಸೇತುವೆ ನಿರ್ಮಾಣ ಕಾಮಗಾರಿಗೆ ಶೀಘ್ರದಲ್ಲಿಯೇ ಅಡಿಗಲ್ಲು ನೆರವೇರಿಸಲಾಗುವುದು ಎಂದರು.

ನೈರುತ್ಯ ರೈಲ್ವೆ ಇಲಾಖೆ ಎಜಿಎಂ ಬಿ.ಬಿ. ಸಿಂಗ್ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್, ಮಾಜಿ ಸಚಿವ ಅಮರೇಗೌಡ ಬಯ್ಯಾಪುರ, ವಿಧಾನಪರಿಷತ್ ಮಾಜಿ ಸದಸ್ಯ ಹಾಲಪ್ಪ ಆಚಾರ್, ಸೇರಿದಂತೆ ಗಣ್ಯರು ಅಧಿಕಾರಿಗಳು ಉಪಸ್ಥಿತರಿದ್ದರು.

[illegible]ವುದೇ ಕ್ರಮವಾಗಿಲ್ಲ ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿಗಳಿಗೆ ಪಾಲ್ಗೊಂಡಿದ್ದರು.

UDAYAVANI/KOPPAL 19/8/2017

# ಗದಗ-ವಾಡಿ ರೈಲ್ವೆ ಕಾಮಗಾರಿ ಐದು ವರ್ಷಗಳಲ್ಲಿ ಪೂರ್ಣ




[illegible]ನೂರು: ಭಾನಾಪೂರದಲ್ಲಿ ಗದಗ-ವಾಡಿ ನೂತನ ರೈಲ್ವೆ ಕಾಮಗಾರಿಗೆ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ [illegible]ಜ್ಯೋತಿ ಬೆಳಗಿಸಿದರು.

[illegible]ನೂರು: ನಿಜಾಮರ ಕಾಲದಲ್ಲೇ [illegible] ಮುಗಿದು ನನೆಗುದಿಗೆ ಬಿದ್ದಿದ್ದ [illegible] ನಿರೀಕ್ಷಿತ ಗದಗ-ವಾಡಿ ರೈಲು ಕಾಮಗಾರಿ ಐದು ವರ್ಷಗಳಲ್ಲಿ [illegible]ಗೊಳ್ಳಲಿದೆ ಎಂದು ಸಚಿವ [illegible] ರಾಯರಡ್ಡಿ ಹೇಳಿದರು.

[illegible]ಮಂತ್ರಿ ಸುರೇಶ್ ಪ್ರಭು ವಿಡಿಯೋ [illegible] ಮೂಲಕ ಕಾಮಗಾರಿಗೆ ಚಾಲನೆ [illegible] ಭಾನಾಪುರ ಗ್ರಾಮದಲ್ಲಿ [illegible] ನಡೆದ ಸಮಾರಂಭದಲ್ಲಿ ಅವರು [illegible]ದರು.

[illegible]ದಲ್ಲಿ ರೈಲು ಸಂಚಾರಕ್ಕೆ 1910ರಲ್ಲೇ [illegible] ನಡೆಸಲಾಗಿದ್ದರೂ, ಅನುಷ್ಠಾನಕ್ಕೆ ಅಂದಿನ ಬ್ರಿಟಿಷರ ಕುತಂತ್ರಗಾರಿಕೆ ಅಡ್ಡಿಯಾಗಿತ್ತು. ಈಗ ಈ ಯೋಜನೆ ಜಾರಿಗೆ ಈಗಾಗಲೇ ಸರಕಾರ 556 ಎಕರೆ ಭೂಮಿ ಖರೀದಿಸಿದ್ದು ಇನ್ನುಳಿದ ಭೂಮಿ ಖರೀದಿ ಕಾರ್ಯ ನಡೆದಿದೆ. ತಳಕಲ್‌ದಿಂದ ಕುಷ್ಟಗಿ 58 ಕಿ.ಮೀ, ವಾಡಿಯಿಂದ ಶಹಾಪುರ 47 ಕಿ.ಮೀ ಕಾಮಗಾರಿ ಮೂರು ತಿಂಗಳಲ್ಲಿ ಚಾಲನೆಗೊಳ್ಳಲಿದ್ದು ಈ ಭಾಗದಲ್ಲಿ 18 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಸಂಸದ ಕರಡಿ ಸಂಗಣ್ಣ ಮಾತನಾಡಿ, ಕೇಂದ್ರ ಸರಕಾರ ಜನಪರವಾದ ಕೆಲಸಕ್ಕೆ ಮುಂದಾಗಿದೆ. ಅಧಿಕಾರಕ್ಕೆ ಬಂದು ಮೂರೇ ವರ್ಷದಲ್ಲಿ ಪ್ರಧಾನಿ ನರೇಂದ್ರ ಮೋದಿ ಯುವಕರಲ್ಲಿ ತಂದ ಬದಲಾವಣೆ ಜನರ ಗಮನ ಸೆಳೆದಿದ್ದು 'ಕೃಷಿ ಸಿಂಚನ' ಯೋಜನೆ ನೀಡುವ ಮೂಲಕ ರೈತರ ಏಳ್ಗೆಗೆ ಮುಂದಾಗಿದ್ದಾರೆ ಎಂದರು.

ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪುರ, ವಿಧಾನ ಪರಿಷತ್ ಮಾಜಿ ಸದಸ್ಯ ಹಾಲಪ್ಪ ಆಚಾರ್, ಶಾಸಕ ಕೆ. ರಾಘವೇಂದ್ರ ಹಿಟ್ನಾಳ್, ಗ್ರಾಪಂ ಅಧ್ಯಕ್ಷ ಬಸವರಾಜ ಮುಗಂಡಮಠ, ತಾಪಂ ಅಧ್ಯಕ್ಷೆ ಲಕ್ಷ್ಮೀ ಗೌಡರ್ ಇನ್ನಿತರರು ಪಾಲ್ಗೊಂಡಿದ್ದರು.

PRAJAVANI / HOSAPETE 19/8/17

# ರಾಜ್ಯದಲ್ಲಿ ರೈಲ್ವೆ ಸೌಲಭ್ಯ ವಿಸ್ತರಣೆಗೆ ಬದ್ಧ: ಕೇಂದ್ರ ಸಚಿವ ಸುರೇಶ್ ಪ್ರಭು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಗದಗ- ವಾಡಿ ನೂತನ ರೈಲು ಮಾರ್ಗದ ಕಾಮಗಾರಿಗೆ ಚಾಲನೆ, ಭಾನಾಪುರ- ಕೊಪ್ಪಳ ರೈಲು ಮಾರ್ಗದ ದ್ವಿಪಥ ಹಳಿ, ಕೊಪ್ಪಳ ರೈಲು ನಿಲ್ದಾಣದ 2 ಮತ್ತು 3ನೇ ಪ್ಲಾಟ್ ಫಾರಂ ಲೋಕಾರ್ಪಣೆ ಕಾರ್ಯಕ್ರಮ ಶುಕ್ರವಾರ ಭಾನಾಪುರ ರೈಲು ನಿಲ್ದಾಣದಲ್ಲಿ ನಡೆಯಿತು.

ಕೇಂದ್ರ ರೈಲ್ವೆ ಸಚಿವ ಸುರೇಶ್ ಪ್ರಭು ರೈಲ್ವೆ ಮಂಡಳಿಯ ಕಚೇರಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಈ ಯೋಜನೆಗಳಿಗೆ ಚಾಲನೆ ನೀಡಿದರು. ಬೆಂಗಳೂರಿನ ಬೈಯಪ್ಪನಹಳ್ಳಿಯಲ್ಲಿ ನೂತನ ರೈಲು ಸಂಚಾರಕ್ಕೆ, ಚಾಲನೆ, ಮೈಸೂರು ನಿಲ್ದಾಣದಲ್ಲಿ ಸೋಲಾರ್ ಘಟಕ ಹಾಗೂ ಮಳೆ ನೀರು ಸಂಗ್ರಹ ವ್ಯವಸ್ಥೆಗೆ ಚಾಲನೆ, ಶಿವಮೊಗ್ಗ ಮತ್ತು ಗದಗದಲ್ಲಿ ಪ್ರಯಾಣಿಕರ ನಿರೀಕ್ಷಣಾ ಘಟಕ ಮೇಲ್ದರ್ಜೆಗೆ ಏರಿಸಿರುವುದು, ಯಾದಗಿರಿಯಲ್ಲಿ ರೈಲ್ವೆ ಕೋಚ್ ಫ್ಯಾಕ್ಟರಿಗೆ ಸುರೇಶ್ ಪ್ರಭು ಏಕಕಾಲದಲ್ಲಿ ಚಾಲನೆ ನೀಡಿದರು.

'ರೈಲ್ವೆ ಸೌಲಭ್ಯವನ್ನು ಕರ್ನಾಟಕದಲ್ಲಿ ಇನ್ನೂ ಹೆಚ್ಚು ವಿಸ್ತರಿಸಲು ಇಲಾಖೆ ಬದ್ಧವಾಗಿದೆ. ಸಾಕಷ್ಟು ಅವಕಾಶಗಳೂ ಅಲ್ಲಿ ಇವೆ. ಬಜೆಟ್‌ನಲ್ಲಿ ಘೋಷಿಸಿದ್ದಕ್ಕಿಂತಲೂ ಹೆಚ್ಚು ಅನುದಾನವನ್ನು ಕರ್ನಾಟಕಕ್ಕೆ ವಿನಿಯೋಗಿಸಿದ್ದು, ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಇಲಾಖೆ ಬದ್ಧವಿದೆ. ದೇಶದಲ್ಲಿ ರೈಲು ನಿಲ್ದಾಣಗಳ ಆಧುನೀಕರಣ, ತಂತ್ರಜ್ಞಾನ ಅಳವಡಿಕೆ, ಹೊಸ ಮಾರ್ಗಗಳ ನಿರ್ಮಾಣವನ್ನು ತ್ವರಿತಗತಿಯಲ್ಲಿ ಮಾಡುತ್ತೇವೆ. ಮುಂದಿನ ಐದು ವರ್ಷಗಳಲ್ಲಿ ರೈಲ್ವೆ ಇಲಾಖೆ ತನ್ನ ಕಾರ್ಯಜಾಲವನ್ನು ಇನ್ನಷ್ಟು ವಿಸ್ತರಿಸಲಿದೆ. ಮಾತ್ರವಲ್ಲ ದೇಶದ ಆರ್ಥಿಕ ಪ್ರಗತಿಗೆ ಮಹತ್ತರವಾದ ಕೊಡುಗೆ ನೀಡಲು ಬದ್ಧವಾಗಿದೆ' ಎಂದರು.

ವಿಡಿಯೊ ಸಂವಾದದ ಬಳಿಕ ಮಾತನಾಡಿದ ಜಿಲ್ಲಾ ಉಸ್ತುವಾರಿ ಮತ್ತು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ, 'ನಾನು ಸಂಸದನಾಗಿದ್ದಾಗ ರಾಮ ವಿಲಾಸ್ ಪಾಸ್ವಾನ್ ಅವರ ಬಳಿ ಗದಗ- ವಾಡಿ ರೈಲು ಮಾರ್ಗ ನಿರ್ಮಾಣಕ್ಕೆ ಸಮೀಕ್ಷೆ ನಡೆಸಬೇಕು ಎಂದು ಕೋರಿದ್ದೆ. ಹಾಗೆ ನೋಡಿದರೆ 1910ರಲ್ಲಿ ನಿಜಾಮರ ಕಾಲದಲ್ಲೇ ಈ ಮಾರ್ಗ ನಿರ್ಮಾಣ ಆಗಬೇಕಿತ್ತು. ಆದರೆ, ಬ್ರಿಟಿಷ್ ಸರ್ಕಾರದ ಜತೆಗಿನ ಅಭಿಪ್ರಾಯ ಬೇಧ ಸೇರಿದಂತೆ ಹಲವು ತಾಂತ್ರಿಕ ಅಡಚಣೆಗಳಿಂದ ಕಾಮಗಾರಿ ಮುಂದುವರಿಯಲೇ ಇಲ್ಲ. 1990ರ ನಂತರ ಈ ಬಗ್ಗೆ ಸಮೀಕ್ಷೆ, 2015ರಲ್ಲಿ ಮರು ಸಮೀಕ್ಷೆ ನಡೆದು ಇದೀಗ ಕಾಮಗಾರಿ ಆರಂಭವಾಗುವ ಹಂತಕ್ಕೆ ಬಂದಿದೆ' ಎಂದು ಈ ಯೋಜನೆಯ ಅನುಷ್ಠಾನದ ಹಿಂದಿನ ಹೋರಾಟವನ್ನು ದಾಖಲೆ ಸಹಿತ ತೆರೆದಿಟ್ಟರು.

ಸಂಸದ ಸಂಗಣ್ಣ ಕರಡಿ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ರೈಲ್ವೆ ಸಚಿವರ ಗುಣಗಾನ ಮಾಡಿದರು. ಶಾಸಕ ಕೆ.ರಾಘವೇಂದ್ರ ಹಿಟ್ನಾಳ್, ವಿಧಾನ ಪರಿಷತ್ ಮಾಜಿ ಸದಸ್ಯ ಹಾಲಪ್ಪಾಚಾರ್, ಭಾನಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜ ಎಸ್. ಮುಗಂಡಮಠ, ತಾ.ಪಂ ಅಧ್ಯಕ್ಷೆ ... ಲಕ್ಷ್ಮೀಗೌಡ್ರ ಅವರು ಇದ್ದರು.

ನೈಋತ್ಯ ರೈಲ್ವೆಯ ಹೆಚ್ಚುವರಿ ಮಹಾನಿರ್ದೇಶಕ ಬಿ.ಬಿ.ಸಿಂಗ್ ಹಾಜರಿದ್ದರು.



ಕೊಪ್ಪಳ ಸಮೀಪ ಭಾನಾಪುರದಲ್ಲಿ ವಿವಿಧ ರೈಲ್ವೆ ಸೌಲಭ್ಯ ಮತ್ತು ಗದಗ ವಾಡಿ ರೈಲು ಮಾರ್ಗದ ಕಾಮಗಾರಿಗೆ ಚಾಲನೆ ಸಮಾರಂಭವನ್ನು ಸಂಸದ ಸಂಗಣ್ಣ ಕರಡಿ ಮತ್ತು ಸಚಿವ ಬಸವರಾಜ ರಾಯರಡ್ಡಿ ಶುಕ್ರವಾರ ಉದ್ಘಾಟಿಸಿದರು

### ಮುಖ್ಯಾಂಶಗಳು

- ರಸ್ತೆಗೆ.ಸಮಾನಾಂತರವಾಗಿ ಮುಖ್ಯ ಮಾರ್ಗವಾಗಲಿರುವ ಗದಗ- ವಾಡಿ ಯೋಜನೆ
- ಮುಂಬೈ , ದೆಹಲಿಗೆ ಸಂಪರ್ಕಕ್ಕೆ ಅವಕಾಶ
- ಕಾಮಗಾರಿಗೆ 18 ತಿಂಗಳ ಗಡುವು

ಹೆರಿಗೆ ನೋವು ಅನುಭವಿಸಿದವರಿಗಷ್ಟೇ ಗೊತ್ತು. ಗದಗ-ವಾಡಿ ರೈಲ್ವೆ ಯೋಜನೆಗಾಗಿ ಪಟ್ಟ ಶ್ರಮವನ್ನು ದಾಖಲೆ ಸಹಿತ ಹೇಳುತ್ತೇನೆ.

ಬಸವರಾಜ ರಾಯರಡ್ಡಿ, ಜಿಲ್ಲಾ ಉಸ್ತುವಾರಿ ಮತ್ತು ಉನ್ನತ ಶಿಕ್ಷಣ ಸಚಿವ

## ಮೋದಿ ಗುಣಗಾನವೂ ದಾಖಲೆಗಳ ಅನಾವರಣವೂ...

ಸಂಸದ ಸಂಗಣ್ಣ ಕರಡಿ ಅವರು ಇಡೀ ಯೋಜನೆ ಪ್ರಧಾನಿ ನರೇಂದ್ರ ಮೋದಿ ಹಾಗೂ ರೈಲ್ವೆ ಸಚಿವ ಸುರೇಶ್ ಪ್ರಭು ಅವರದ್ದು. ಹಾಲಿ ಕೇಂದ್ರ ಸರ್ಕಾರದ ಕ್ರಿಯಾಶೀಲತೆಯಿಂದ ತ್ವರಿತಗತಿಯಲ್ಲಿ ಅನುಷ್ಠಾನ ನಡೆದಿದೆ ಹಿಂದಿನ ಸರ್ಕಾರಗಳು ಇಷ್ಟೊಂದು ಕಾಳಜಿ ವಹಿಸಿರಲಿಲ್ಲ ಎಂದು ತಮ್ಮ ಭಾಷಣದುದ್ದಕ್ಕೂ ಮೋದಿ ಗುಣಗಾನ ಮಾಡಿದರು. ಅದುವರೆಗೆ ಸುಮ್ಮನಿದ್ದ ಸಚಿವ ಬಸವರಾಜ. ರಾಯರಡ್ಡಿ ತಮ್ಮ ಭಾಷಣದ ವೇಳೆ ಒಂದು ಪೆಟ್ಟಿಗೆ ತುಂಬಾ ದಾಖಲೆ ಪತ್ರಗಳನ್ನು ವೇದಿಕೆಗೆ ತರಿಸಿ ಇಡೀ ಯೋಜನೆ ಆರಂಭವಾದ ಕಥೆಯನ್ನು ಎಳೆಎಳೆಯಾಗಿ ವಿವರಿಸಿದರು. ಹಾಗಿದ್ದೂ ರಾಯರಡ್ಡಿ ಯಾರನ್ನೂ ದೂಷಿಸಲಿಲ್ಲ. ಹೇಳಿದರೆ ಹೀಗೆ ದಾಖಲೆ ಸಹಿತ ಹೇಳಬೇಕು. ಈ ಯೋಜನೆಗಾಗಿ ನನ್ನ ರಕ್ತ ಕುದಿದಿದೆ. ಹಾಗಾಗಿ ಹೆರಿಗೆಯ ಸಂಕಟ ಅನುಭವಿಸಿದವರಿಗಷ್ಟೇ ಗೊತ್ತು. ಇಷ್ಟೆಲ್ಲಾ ಹೋರಾಡಿ ಯೋಜನೆ ತಂದರೂ ಹಲವರು ನನ್ನನ್ನು ಟೀಕಿಸುತ್ತಾರೆ. ಗೇಲಿ ಮಾಡುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಸದ್ಯ ಸಂಗಣ್ಣ ತುಂಬಾ ಕ್ರಿಯಾಶೀಲರಾಗಿದ್ದಾರೆ. ಅವರು ಈ ಯೋಜನೆಯನ್ನು ಯಶಸ್ವಿಯಾಗಿ ಗುರಿಮುಟ್ಟಿಸುತ್ತಾರೆ ಎಂಬ ಭರವಸೆ ಇದೆ. ಇನ್ನೂ ಕೆಲವರು ಏನೋ ಹೇಳುತ್ತಾರೆ. ಅವರವರ ಮಟ್ಟಕ್ಕೆ ತಕ್ಕಂತೆ ಮಾತನಾಡುತ್ತಾರೆ. ಅದಕ್ಕೇನನ್ನಲಿ ಎಂದರು.

ರಾಯರಡ್ಡಿ ಮಾತಿನ ತಿವಿತಕ್ಕೆ ಸಂಗಣ್ಣ ಮೌನವಾದರು.

53

KANNADA PRABHA/KOPPAL 19/8/2017

# ಅಧಿಕಾರವಲ್ಲ, ಮಾಡಿದ ಕೆಲಸ ಶಾಶ್ವತ

## ಗದಗ-ವಾಡಿ ರೈಲ್ವೆ ಕಾಮಗಾರಿಗೆ ಭೂಮಿ ಪೂಜೆಯಲ್ಲಿ ಸಚಿವ ರಾಯರಡ್ಡಿ। ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ

• ಕನ್ನಡಪ್ರಭ ವಾರ್ತೆ ಕೊಪ್ಪಳ

ಸಮಾಜದಲ್ಲಿ ಅಧಿಕಾರ, ಪಕ್ಷ ಶಾಶ್ವತವಲ್ಲ, ಮಾಡಿದ ಕೆಲಸ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತದೆ. ಗದಗ-ವಾಡಿ ರೈಲ್ವೆ ಕಾಮಗಾರಿ ಸಾಕಾರಗೊಳ್ಳಲು ನನ್ನ ರಕ್ತ ಹರಿಸಿ, ಶ್ರಮಪಟ್ಟಿದ್ದೇನೆ. ಅದು, ನನಗೆ ಮಾತ್ರ ಗೊತ್ತು ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ ಹೇಳಿದರು.

ತಾಲೂಕಿನ ಭಾನಾಪುರ ಗ್ರಾಮದ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಗದಗ-ವಾಡಿ ನೂತನ ರೈಲ್ವೆ ಮಾರ್ಗ ಕಾಮಗಾರಿ ಆರಂಭ, ಭಾನಾಪುರ- ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗ ರಾಷ್ಟ್ರಕ್ಕೆ ಸಮರ್ಪಣೆ, ಕೊಪ್ಪಳ ನಿಲ್ದಾಣದಲ್ಲಿ ಹೊಸ ಪ್ಲಾಟ್ ಫಾರಂ ಸಂಖ್ಯೆ2,3 ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ನಾವು ಯಾವುದೇ ಕೆಲಸ ಮಾಡಿದರೂ ಅದು, ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಬೇಕು. ಯಲಬುರ್ಗಾ ಭಾಗಕ್ಕೆ ರೈಲ್ವೆ ಕಾಮಗಾರಿ ಆಗಬೇಕೆಂಬ ನನ್ನ ಕನಸು ಬಹಳ ದಿನಗಳದ್ದಾಗಿತ್ತು. ಅದೆ ದಿಶೆಯಲ್ಲಿ 1997 ರಿಂದ ನಾನು ಕಾರ್ಯ ಪ್ರವೃತ್ತರಾಗಿದ್ದರಿಂದ ಇಂದು ರೈಲ್ವೆ ಕಾಮಗಾರಿಗೆ ಭೂಮಿ ಪೂಜೆಗೊಳ್ಳಲು ಸಾಧ್ಯವಾಗಿದೆ. ಅಂದು ಮಾಜಿ ಪ್ರಧಾನಿ ದೇವೆಗೌಡ ಅವರು, ಈ ರೈಲ್ವೆ ಕಾಮಗಾರಿ ಕೈಗೊಳ್ಳಲು ಪ್ರಥಮವಾಗಿ ಒಪ್ಪಿಗೆ ನೀಡಿದರು. ಅಂದಿನಿಂದ ಇಂದಿನ ವರೆಗೆ ಸಾಕಷ್ಟು ರಾಜಕೀಯ ನಾಯಕರು ಸಹಕಾರ ನೀಡಿದ್ದರಿಂದ ಇಂದಿಗೆ ಮೊದಲ ಹಂತದ ಕಾಮಗಾರಿ ಆರಂಭಿಸಲು ಅನುಕೂಲವಾಗುತ್ತಿದೆ. ಅಚ್ಚರಿ ಎಂದರೇ 1911 ರ ನಿಜಾಮರ ಕಾಲದಲ್ಲಿಯೇ ಈ ರೈಲ್ವೆ ಯೋಜನೆ ಆರಂಭಗೊಳ್ಳಬೇಕಿತ್ತು. ಅಂದು ಕೇವಲ ₹ 1 ಕೋಟಿ ವೆಚ್ಚದಲ್ಲಿ ಈ ಕಾಮಗಾರಿ ಮುಕ್ತಾಯವಾಗುತ್ತಿತ್ತು. ಆದರೆ, ಕೆಲ ಕಾರಣಾಂತರಗಳಿಂದ ಮಾಡಲಿಲ್ಲ, ಸದ್ಯ ₹ 1922 ಕೋಟಿ ಅವಶ್ಯಕತೆಯಿದೆ. ಇದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಶೇ.50 ರಷ್ಟು ಅನುದಾನ ನೀಡಬೇಕಿದ್ದರೂ ರಾಜ್ಯ ಸರ್ಕಾರ ಶೇ.65 ರಷ್ಟು ಅನುದಾನ ನೀಡುತ್ತಿದೆ. ಅನುದಾನ ನೀಡುವುದಲ್ಲದೇ ಭೂಮಿಯನ್ನು ಖರೀದಿ ಮಾಡಿ, ಕೊಟ್ಟಿರುವುದು ಸಂತಸದ ಸಂಗತಿ ಎಂದರು.

ರಾಜ್ಯದಲ್ಲಿ ರೈಲ್ವೆ ಕಾಮಗಾರಿಗಳು ಹಿಂದುಳಿಯಲು ಭೂ-ಸ್ವಾಧೀನ ಸಮಸ್ಯೆ ಪ್ರಮುಖ ಕಾರಣ. ಅದನ್ನು ಮನಗಂಡು ಮೊದಲ ಹಂತದ ಭೂ-ಸ್ವಾಧೀನ ಸಮಸ್ಯೆ ಬಗೆಹರಿಸಲಾಗಿದೆ. ಸದ್ಯ ಒಟ್ಟು ತಳಕಲ್ ನಿಂದ ಕುಷ್ಟಗಿಯವರೆಗೆ 700 ಎಕರೆ ಜಮೀನು ಖರೀದಿ ಮಾಡಲಾಗಿದೆ. ಇದರಲ್ಲಿ ಕೆಲ ರೈತರಿಗೆ ಸಂಪೂರ್ಣ ಹಣ ನೀಡಲಾಗಿಲ್ಲ, ಅದನ್ನು ಕೂಡಲೇ ವಿತರಿಸುವ ವ್ಯವಸ್ಥೆ ಮಾಡಲಾಗುವುದು. ಈ ಕಾಮಗಾರಿ 5 ವರ್ಷದಲ್ಲಿ ಮುಗಿಯಲಿದ್ದು, ತಳಕಲ್ -ಕುಷ್ಟಗಿಯ 58 ಕಿಮಿ ಕಾಮಗಾರಿ 18 ತಿಂಗಳಲ್ಲಿ ಸಂಪೂರ್ಣಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಸಂಸದ ಸಂಗಣ್ಣ ಕರಡಿ ಮಾತನಾಡಿ, ನರೇಂದ್ರ ಮೋದಿ ಅವರ ಸಹಕಾರದಿಂದ ಗದಗ-ವಾಡಿ ರೈಲ್ವೆ ಯೋಜನೆ ಸಾಕಾರಗೊಳ್ಳುತ್ತಿದೆ. ಈ ಗದಗ-ವಾಡಿ ರೈಲ್ವೆ ಯೋಜನೆಗೆ ಕೇಂದ್ರ ಸರ್ಕಾರದಿಂದ ₹ 40 ಕೋಟಿ ಅನುದಾನ ಬಿಡುಗಡೆಗೊಂಡಿದೆ. ಇಂಥ ಹಲವು ಯೋಜನೆಗಳನ್ನು ದೇಶದಲ್ಲಿ ಸಾಕಾರಗೊಳಿಸಿದ ಮೋದಿ ಅವರು, ಅದಾಗಲೇ ಮೆಹಬೂಬ-ಗಿಣಗೇರಾ ರೈಲ್ವೆ ಯೋಜನೆಯಲ್ಲಿನ ಚಿಕ್ಕಬೆಣಕಲ್ ವರೆಗೆ ರೈಲ್ವೆ ಕಾಮಗಾರಿ ಮುಗಿದಿದ್ದು, ರೈಲುಗಳು ಚಲಿಸಲಾರಂಭಿಸಿವೆ. ಶೀಘ್ರವೇ ಈ ರೈಲ್ವೆ ಕಾಮಗಾರಿ ಗಂಗಾವತಿಗೆ ತಲುಪಲಿದ್ದು, 2019 ರ ವೇಳೆಗೆ ಸಿಂಧನೂರಿಗೆ ತಲುಪಲಿದೆ ಎಂದರು. ವಿಪ ಮಾಜಿ ಸದಸ್ಯ ಹಾಲಪ್ಪ ಆಚಾರ, ಮಾಜಿ ಸಚಿವ ಅಮರೇಗೌಡ ಭಯ್ಯಾಪುರ, ಶಾಸಕ ರಾಘವೇಂದ್ರ ಹಿಟ್ನಾಳ್, ಜಿಲ್ಲಾಧಿಕಾರಿ ಎಂ.ಕನಗವಲ್ಲಿ, ಜಿಪಂ ಸಿಇಒ ವೆಂಕಟರಾಜಾ, ಎಸ್ಪಿ ಡಾ.ಅನೂಪಶೆಟ್ಟಿ, ಗ್ರಾಪಂ ಅಧ್ಯಕ್ಷ ಬಸವರಾಜ ಮುಂಗಡಿಮಠ, ರೈಲ್ವೆ ಸಿಬ್ಬಂದಿ, ಅಧಿಕಾರಿಗಳು ಸೇರಿದಂತೆ ಇತರರು ಇದ್ದರು.




ಕೊಪ್ಪಳ ತಾಲೂಕಿನ ಭಾನಾಪುರ ಗ್ರಾಮದ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಗದಗ-ವಾಡಿ ನೂತನ ರೈಲ್ವೆ ಮಾರ್ಗ ಕಾಮಗಾರಿ ಆರಂಭ, ಭಾನಾಪುರ- ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗ ರಾಷ್ಟ್ರಕ್ಕೆ ಸಮರ್ಪಣೆ, ಕೊಪ್ಪಳ ನಿಲ್ದಾಣದಲ್ಲಿ ಹೊಸ ಪ್ಲಾಟ್ ಫಾರಂ ಸಂಖ್ಯೆ2, 3 ಉದ್ಘಾಟನಾ ಕಾರ್ಯಕ್ರಮದಲ್ಲಿ ಸಚಿವ ಬಸವರಾಜ ರಾಯರಡ್ಡಿ ಮಾತನಾಡಿದರು.

## ಗದಗ- ವಾಡಿ ರೈಲ್ವೆ ಕಾಮಗಾರಿಗೆ ಚಾಲನೆ

**ಕೊಪ್ಪಳ:** ಮುಂಬೈ ಮತ್ತು ಹೈದ್ರಾಬಾದ್ ಕರ್ನಾಟವನ್ನು ಇನ್ನಷ್ಟು ಹತ್ತಿರ ಮಾಡುವ (ಜೋಡಿಸುವ) ಗದಗ-ವಾಡಿ ರೈಲ್ವೆ ಕಾಮಗಾರಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ರೈಲ್ವೆ ಇಲಾಖೆ ಸಚಿವ ಸುರೇಶ ಪ್ರಭು ಶುಕ್ರವಾರ ಚಾಲನೆ ನೀಡಿದರು.

ಸಚಿವರು ಗೋವಾದಲ್ಲಿ ಚಾಲನೆ ನೀಡಿದ್ದನ್ನು, ಯಲುಬುರ್ಗಾ ತಾಲೂಕು ಭಾನಾಪುರ ಗ್ರಾಮದ ರೈಲ್ವೆ ನಿಲ್ದಾಣದ ಬಳಿ ನಡೆದ ಕಾರ್ಯಕ್ರಮದಲ್ಲಿ ವೀಕ್ಷಣೆ ಮಾಡುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಹಾಗು ಸಂಸದ ಸಂಗಣ್ಣ ಕರಡಿ ಸಾಕ್ಷಿಯಾದರು.

ಬಹುದಿನಗಳ ಬೇಡಿಕೆಯಾಗಿದ್ದ ಈ ರೈಲ್ವೆ ಕಾಮಗಾರಿ ಕಳೆದೆರಡು ವರ್ಷಗಳ ಹಿಂದೆ ಸರ್ವೇಯಾಗಿದ್ದು, ಈಗ ಕಾಮಗಾರಿ ಪ್ರಾರಂಭಕ್ಕೆ ಚಾಲನೆ ದೊರೆತಿದೆ. 252 ಕಿ.ಮೀಟರ ಉದ್ದದ ಮಾರ್ಗ ಇದಾಗಿದ್ದು, ₹ 1922 ಕೋಟಿ ಅಂದಾಜು ಯೋಜನೆಯಾಗಿದೆ. ಶೇಕಡಾ 50 ರಾಜ್ಯ ಮತ್ತು ಶೇಕಡಾ 50 ರಷ್ಟು ಕೇಂದ್ರ ಸರ್ಕಾರ ಯೋಜನೆಗೆ ಹಣ ನೀಡಲಿದೆ.

ಸುರೇಶ ಪ್ರಭು ಅವರು ಚಾಲನೆ ನೀಡಿದ ಬಳಿಕ ಜಿಲ್ಲಾ ಉಸ್ತುವಾರಿ ಮತ್ತು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ ಹಾಗು ಸಂಸದ ಸಂಗಣ್ಣ ಕರಡಿ ಮಾತನಾಡಿದರು.

### ಕೇಂದ್ರ ಸಚಿವರು ಭಾಗಿ

ಗದಗ-ವಾಡಿ ಹೊಸ ಮಾರ್ಗ ಕಾಮಗಾರಿ, ಭಾನಾಪುರ-ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗ ರಾಷ್ಟ್ರಕ್ಕೆ ಸಮರ್ಪಣೆ, ಕೊಪ್ಪಳ ನಿಲ್ದಾಣದಲ್ಲಿ ಹೊಸ ಪ್ಲಾಟ್ ಫಾರಂ ಸಂಖ್ಯೆ2,3 ಉದ್ಘಾಟನೆ ಕಾರ್ಯಕ್ರಮಕ್ಕೆ ಕೇಂದ್ರ ರೈಲ್ವೆ ಸಚಿವ ಸುರೇಶ ಪ್ರಭು ಅವರು ಗೋವಾದಲ್ಲಿ ವಿಡಿಯೋ ಕಾನ್ಫರೇನ್ಸ್ ಮೂಲಕ ಚಾಲನೆ ನೀಡಿದರು. ನಂತರ ಸ್ಥಳೀಯವಾಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

VIJAY KARNATAKA / KOPPAL 19/5/2017

### 5 ವರ್ಷದಲ್ಲೇ ಸಾರ್ವಜನಿಕರ ಸೇವೆಗೆ ಸಮರ್ಪಣೆ: ಸಚಿವ ರಾಯರೆಡ್ಡಿ

# ಗದಗ-ವಾಡಿ ಹೊಸ ರೈಲ್ವೆ ಮಾರ್ಗ ಕಾಮಗಾರಿಗೆ ಚಾಲನೆ

**■ ವಿಕ ಸುದ್ದಿಲೋಕ, ಕೊಪ್ಪಳ**

ಗದಗ-ವಾಡಿ ಹೊಸ ರೈಲ್ವೆ ಮಾರ್ಗ ಕಾಮಗಾರಿಗೆ ಶುಕ್ರವಾರ ವಿಧ್ಯುಕ್ತವಾಗಿ ಚಾಲನೆ ನೀಡಲಾಯಿತು.

ಯಲಬುರ್ಗಾ ತಾಲೂಕಿನ ಭಾನಾಪುರ ಗ್ರಾಮದ ರೈಲ್ವೆ ನಿಲ್ದಾಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರೆಡ್ಡಿ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಭಾನಾಪುರ-ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗವನ್ನು ರಾಷ್ಟ್ರಕ್ಕೆ ಸಮರ್ಪಣೆಗೊಳಿಸಿರುವ ಜತೆಗೆ ಕೊಪ್ಪಳ ರೈಲ್ವೆ ನಿಲ್ದಾಣದಲ್ಲಿ ಹೊಸ ಪ್ಲಾಟ್ ಫಾರಂ ಸಂಖ್ಯೆ 2/3 ಉದ್ಘಾಟಿಸಲಾಯಿತು.

ನಂತರ ಮಾತನಾಡಿದ ಸಚಿವ ರಾಯರೆಡ್ಡಿ, "ಗದಗ-ವಾಡಿ ನೂತನ ರೈಲ್ವೆ ಮಾರ್ಗ 257 ಕಿ.ಮೀ. ಮಾರ್ಗ ಹೊಂದಿದೆ. 2013-14ರಲ್ಲಿ ಮಂಜೂರಾತಿ ದೊರತ 1923ಕೋಟಿ ರೂ. ಅಂದಾಜು ವೆಚ್ಚದ ಈ ಕಾಮಗಾರಿಯ ಯೋಜನಾ ವೆಚ್ಚ 2841 ಕೋಟಿ ರೂ.ಗೆ ಪರಿಷ್ಕರಣೆಗೊಂಡಿದೆ. ಹಲವು ವರ್ಷಗಳ ಕನಸಾದ ಯೋಜನೆಗೆ ಚಾಲನೆ ದೊರೆತಿರುವುದು ಅಪಾರ ಸಂತಸ ತಂದಿದೆ" ಎಂದರು.

**ರಾಜ್ಯದ ಪಾಲು ಗರಿಷ್ಠ:** "ಭೂಮಿಯನ್ನು ಉಚಿತವಾಗಿ ನೀಡಲು ಸಿಎಂ ಒಪ್ಪಿದ ನಂತರ ಯೋಜನೆಗೆ ಮಂಜೂರಾತಿ ದೊರೆಯಿತು. ಕಾಮಗಾರಿಯ ಶೇ.65ರಷ್ಟು ವೆಚ್ಚವನ್ನು ರಾಜ್ಯ ಸರಕಾರ ಭರಿಸುತ್ತಿದೆ. ರೈಲ್ವೆ ಮಾರ್ಗಕ್ಕೆ ಅಗತ್ಯ 3472ಎಕರೆ ಭೂಸ್ವಾಧೀನ ಪ್ರಕ್ರಿಯೆಯ ವಿಳಂಬ ತಪ್ಪಿಸಲು, ಮೊದಲ ಬಾರಿ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ಭೂಮಿಯನ್ನು ರೈತರಿಂದ ಖರೀದಿಸಿ, ಯೋಜನೆಗೆ ಪಡೆಯಲು ಕ್ರಮಕೈಗೊಳ್ಳಲಾಗಿದೆ. ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, 5 ವರ್ಷಗಳ ಅವಧಿಯಲ್ಲೇ ಸಾರ್ವಜನಿಕರ ಸೇವೆಗೆ ಯೋಜನೆ ಸಮರ್ಪಿಸುವ ಉದ್ದೇಶ ಹೊಂದಲಾಗಿದೆ" ಎಂದು ತಿಳಿಸಿದರು.



ಯಲಬುರ್ಗಾ ತಾಲೂಕಿನ ಭಾನಾಪುರ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗದಗ-ವಾಡಿ ಹೊಸ ರೈಲ್ವೆ ಮಾರ್ಗ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರೆಡ್ಡಿ ಚಾಲನೆನೀಡಿದರು.

"ಸದ್ಯ ತಳಕಲ್-ಕುಷ್ಟಗಿ ಮಾರ್ಗದ 58 ಕಿ.ಮೀ. ಮಾರ್ಗದ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಅಗತ್ಯ ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. 18 ತಿಂಗಳಲ್ಲಿ 58 ಕಿ.ಮೀ. ಮಾರ್ಗ ಪೂರ್ಣಗೊಳ್ಳಲಿದೆ. ಕುಷ್ಟಗಿ-ಶಹಾಪುರ ಮತ್ತು ಶಹಾಪುರ-ವಾಡಿ ಮಾರ್ಗಕ್ಕಾಗಿ ಭೂಮಿ ವಶಪಡಿಸಿಕೊಳ್ಳುವ ಕಾರ್ಯಕ್ಕೆ ಈಗಾಗಲೇ ಚಾಲನೆ ದೊರೆತಿದೆ. ಗದಗ-ವಾಡಿ ಮಾರ್ಗದ ತಳಕಲ್ ಜಂಕ್ಷನ್ ರೈಲ್ವೆ ನಿಲ್ದಾಣವನ್ನು ರಾಜ್ಯದ ಮಾದರಿ ರೈಲ್ವೆ ನಿಲ್ದಾಣವನ್ನಾಗಿ ನಿರ್ಮಿಸುವ ಆಶಯ ಹೊಂದಲಾಗಿದೆ. ಈ ಭಾಗದ ಎಲ್ಲ ರೈಲ್ವೆ ನಿಲ್ದಾಣಗಳನ್ನು ಉತ್ತಮ ನಿಲ್ದಾಣಗಳನ್ನಾಗಿ ನಿರ್ಮಿಸಲು ಕ್ರಮಕೈಗೊಳ್ಳಲಾಗುವುದು" ಎಂದು ಸಚಿವ ರಾಯರೆಡ್ಡಿ ವಿವರಿಸಿದರು.

ಸಂಸದ ಸಂಗಣ್ಣ ಕರಡಿ ಮಾತನಾಡಿ, "ಮುನಿರಾಬಾದ್-ಮೆಹಬೂಬ್‌ನಗರ ರೈಲ್ವೆ ಮಾರ್ಗದಲ್ಲಿ ಡಿಸೆಂಬರ್ ವೇಳೆಗೆ ಗಂಗಾವತಿವರೆಗೆ ರೈಲು ಸಂಚರಿಸಲಿದೆ. ಭಾನಾಪುರ ರೈಲ್ವೆ ಗೇಟ್‌ಗೆ ಸೇತುವೆ ನಿರ್ಮಾಣ ಕಾಮಗಾರಿಗೆ ಶೀಘ್ರದಲ್ಲಿಯೇ ಅಡಿಗಲ್ಲು ನೆರವೇರಿಸಲಾಗುವುದು" ಎಂದರು. ನೈರುತ್ಯ ರೈಲ್ವೆ ಇಲಾಖೆ ಎಜಿಎಂ ಬಿ.ಬಿ.ಸಿಂಗ್ ಪ್ರಾಸ್ತಾವಿಕ ಮಾತನಾಡಿದರು. ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ್, ಮಾಜಿ ಸಚಿವ ಅಮರೇಗೌಡ ಬಯ್ಯಾಪುರ, ಮಾಜಿ ಎಮ್ಮೆಲ್ಸಿ ಹಾಲಪ್ಪ ಆಚಾರ್, ತಾ.ಪಂ. ಅಧ್ಯಕ್ಷೆ ಲಕ್ಷ್ಮಿ ದ್ಯಾಮಣ್ಣ, ಗ್ರಾ.ಪಂ. ಅಧ್ಯಕ್ಷ ಬಸವರಾಜ, ಡಿಸಿ ಎಂ.ಕನಗವಲ್ಲಿ, ಜಿ.ಪಂ. ಸಿಇಒ ವೆಂಕಟರಾಜಾ, ಅಪರ ಡಿಸಿ ಡಾ. ರುದ್ರೇಶ್ ಘಾಳಿ, ಉಪವಿಭಾಗಾಧಿಕಾರಿ ಗುರುದತ್ ಹೆಗ್ಡೆ ಇತರರಿದ್ದರು.

VIJAYVANI / KOPPAL 19/8/2017

# ಗದಗ-ವಾಡಿ ರೈಲು ಮಾರ್ಗ ಕಾಮಗಾರಿಗೆ ಸಚಿವ ಚಾಲನೆ

## ಭಾಣಾಪುರ-ಕೊಪ್ಪಳ ಜೋಡಿ ಮಾರ್ಗ ಲೋಕಾರ್ಪಣೆ

ವಿಜಯವಾಣಿ ಚಿತ್ರ



ಭಾಣಾಪುರದಲ್ಲಿ ಗದಗ-ವಾಡಿ ರೈಲ್ವೆ ಕಾಮಗಾರಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಸಚಿವ ಬಸವರಾಜ ರಾಯರಡ್ಡಿ ಸಂಸದ ಸಂಗಣ್ಣ ಕರಡಿ ಇತರರು ಪಾಲ್ಗೊಂಡಿದ್ದರು. ಗೋವಾದಿಂದಲೇ ರೈಲ್ವೆ ಸಚಿವ ರೈಲ್ವೆ ಸಚಿವ ಸುರೇಶ ಪ್ರಭು ವಿಡಿಯೋ ಲಿಂಕ್ ಮೂಲಕ ಚಾಲನೆ ನೀಡಿದ್ದರು.

■ ವಿಜಯವಾಣಿ ಸುದ್ದಿಜಾಲ ಕೊಪ್ಪಳ

ರಾಜ್ಯದ ಮಹತ್ವಾಕಾಂಕ್ಷಿ ರೈಲ್ವೆ ಯೋಜನೆಯಲ್ಲಿ ಒಂದಾದ ಗದಗ-ವಾಡಿ ರೈಲು ಮಾರ್ಗ ಕಾಮಗಾರಿ ಮತ್ತು ಭಾನಾಪುರ-ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗ ಹಾಗೂ ಕೊಪ್ಪಳ ರೈಲು ನಿಲ್ದಾಣದ ಹೊಸ ಪ್ಲಾಟ್‌ಫಾರಂಗಳಿಗೆ ಶುಕ್ರವಾರ ವಿಡಿಯೋ ಲಿಂಕ್ ಮೂಲಕ ಕೇಂದ್ರ ರೈಲ್ವೆ ಸಚಿವ ಸುರೇಶ್ ಪ್ರಭು ಗೋವಾದಿಂದಲೇ ಚಾಲನೆ ಶುಕ್ರವಾರ ನೀಡಿದರು.

» ರೈಲ್ವೆ ಸಚಿವ ಸುರೇಶ ಪ್ರಭುರಿಂದ ಕಾಮಗಾರಿಗೆ ಹಸಿರು ನಿಶಾನೆ

ಕೇಂದ್ರ ಸರ್ಕಾರವು ಉತ್ತಮ ರೈಲ್ವೆ ಯೋಜನೆಗಳನ್ನು ಹಾಕಿಕೊಂಡಿದೆ. ಮೊದಲಿಗೆ ಅನುಮೋದನೆಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲಿದೆ. ದೇಶಾದ್ಯಂತ 60 ಸಾವಿರಕ್ಕೂ ಹೆಚ್ಚು ಕಿಮೀ ಉದ್ದ ರೈಲ್ವೆ ಹಳಿಗಳನ್ನು ಡಬ್ಲಿಂಗ್ ಮಾಡಲಾಗಿದೆ. ಇದರಿಂದ ಸಮಯ ಉಳಿತಾಯ, ಸುಗಮ ಸಂಚಾರಕ್ಕೆ ಅನುಕೂಲವಾಗಿದೆ. ಸ್ವಚ್ಛ ಭಾರತ ಯೋಜನೆಯಡಿ ರೈಲುಗಳಲ್ಲೂ ಸ್ವಚ್ಛತೆ ಕಾಪಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. 'ದೇಶ್ ಬಡೆ ರೇಲ್ ಬಡೆ' ತತ್ವದೊಂದಿಗೆ ರೈಲ್ವೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಕೇಂದ್ರ ರೈಲ್ವೆ ಸಚಿವ ಸುರೇಶ್ ಪ್ರಭು ಎಂದರು.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕು ಭಾನಾಪುರದಲ್ಲಿ ಗದಗ-ವಾಡಿ ರೈಲ್ವೆ ಕಾಮಗಾರಿಗೆ ಚಾಲನೆ ನೀಡಲು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ, ಗದಗ-ವಾಡಿ ರೈಲ್ವೆ ಕಾಮಗಾರಿಗೆ ದೊಡ್ಡ ಇತಿಹಾಸವಿದೆ. ತಲಕಲ್ -ಕುಷ್ಟಗಿವರೆಗೆ 58 ಕಿಮೀ ಭೂ ಸ್ವಾಧೀನ ಪ್ರಕ್ರಿಯೆ ಮುಗಿದಿದೆ. ಅಲ್ಲದೇ ಕುಷ್ಟಗಿಯಿಂದ ವಾಡಿವರೆಗಿನ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ. 5 ವರ್ಷದಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ತಳಕಲ್ ಜಂಕ್ಷನ್ ಆಗಲಿದ್ದು, ಈ ಭಾಗದ ಬೃಹತ್ ರೈಲ್ವೆ ಕಾಮಗಾರಿಯಾಗಲಿದೆ ಎಂದರು. ಸಂಸದ ಸಂಗಣ್ಣ ಕರಡಿ ಮಾತನಾಡಿದರು. ಶಾಸಕ ರಾಘವೇಂದ್ರ ಹಿಟ್ನಾಳ, ಮಾಜಿ ಸಚಿವ ಅಮರೇಗೌಡ ಬಯ್ಯಾಪುರ, ಮಾಜಿ ಎಂಎಲ್ಸಿ ಹಾಲಪ್ಪ ಆಚಾರ, ದಕ್ಷಿಣ ವಲಯ ರೈಲ್ವೆ ಎಜಿಎಂ ಬಿ.ಬಿ ಸಿಂಗ್, ಡಿಸಿ ಎಂ.ಕನಗವಲ್ಲಿ, ಜಿಪಂ ಸಿಇಒ ವೆಂಕಟರಾಜಾ ಸೇರಿ ಇತರರು ಇದ್ದರು.



ವಿಜಯವಾಣಿ ಚಿತ್ರ

### ಗದಗ-ವಾಡಿ ಕಾಮಗಾರಿ ವಿವರ

ಈ ಯೋಜನೆ 2013ರಲ್ಲಿ ಮಂಜೂರಾಗಿದ್ದು, ಒಟ್ಟು 252 ಕಿಮೀ ಉದ್ದದ ಕಾಮಗಾರಿಯಾಗಿದೆ. ಒಟ್ಟು 1922 ಕೋಟಿ ರೂ. ಮಂಜೂರಾಗಿದ್ದು, 3457 ಎಕರೆ ಜಾಗ ಬೇಕಿದೆ. ಈಗಾಗಲೇ 558 ಎಕರೆ ಭೂಸ್ವಾಧೀನವಾಗಿದೆ. ಯೋಜನೆಯಿಂದ ರಾಜ್ಯದ ಕುಕನೂರು, ಯಲಬುರ್ಗಾ, ಕುಷ್ಟಗಿ, ಲಿಂಗಸುಗೂರು, ಗುರಗುಂಟಾ, ದೇವಪುರ, ಸುರಪುರ, ಶಹಪುರ, ಬಿರಾಲ, ಬುಜರ್ಗಕ್ಕೆ ಸಂಪರ್ಕ ಲಭಿಸಲಿದೆ. ಸದ್ಯ ಸಂಗನಾಳದಿಂದ ಕುಷ್ಟಗಿವರೆಗೆ 58 ಕಿಮೀ ಟೆಂಡರ್ ಮುಗಿದಿದ್ದು, ಕಾಮಗಾರಿ ಆರಂಭವಾಗಲಿದೆ.

ಹುಬ್ಬಳ್ಳಿ
vishwavani.news
19.08.2017 ಶನಿವಾರ

VISHWAVANI / KOPPAL 19/8/17



## 5 ವರ್ಷದೊಳಗೆ ಗದಗ-ವಾಡಿ ರೈಲ್ವೆ ಯೋಜನೆ ಪೂರ್ಣ । ವಿವಿಧ ರೈಲ್ವೆ ಕಾಮಗಾರಿಗಳಿಗೆ ಚಾಲನೆ

# ಕಾರ್ಯಕ್ರಮವೋ, ಚುನಾವಣೆ ಪ್ರಚಾರವೋ?

ವಿಶ್ವವಾಣಿ ಸುದ್ದಿಮನೆ ಕೊಪ್ಪಳ

ಇಂದು ಆರಂಭವಾದ ಗದಗ-ವಾಡಿ ರೈಲ್ವೆ ನೂತನ ಮಾರ್ಗ ಮುಂದಿನ ಐದು ವರ್ಷದೊಳಗೆ ಪೂರ್ಣಗೊಂಡು, ಸಾರ್ವಜನಿಕರ ಸೇವೆಗೆ ದೊರೆಯುವ ವಿಶ್ವಾಸವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಹೇಳಿದರು.

ಅವರು ಗದಗ- ವಾಡಿ ಹೊಸ ರೈಲ್ವೆ ಮಾರ್ಗ ಕಾಮಗಾರಿಗೆ ಚಾಲನೆ, ಭಾನಾಪುರ- ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗ ರಾಷ್ಟ್ರಕ್ಕೆ ಸಮರ್ಪಣೆ ಹಾಗೂ ಕೊಪ್ಪಳ ರೈಲ್ವೆ ನಿಲ್ದಾಣದಲ್ಲಿ ಹೊಸ ಪ್ಲಾಟ್ ಫಾರಂ 2/3ರ ಉದ್ಘಾಟನೆ ಸಂಬಂಧ ಭಾನಾಪುರ ರೈಲ್ವೆ ನಿಲ್ದಾಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗದಗ-ವಾಡಿ ರೈಲ್ವೆ 257 ಕಿ.ಮೀ ಉದ್ದದ ಮಾರ್ಗವಾಗಿದ್ದು, 2013- 14ರಲ್ಲಿ ಮಂಜೂರಾತಿ ದೊರೆತಿದ್ದು, ಯೋಜನೆ ವೆಚ್ಚ 2841 ಕೋಟಿ ರು. ಗಳಿಗೆ ಪರಿಷ್ಕರಣೆಗೊಂಡಿದೆ. ಈ ಮಾರ್ಗದ ಕನಸು ಇಂದು ನಿನ್ನೆಯದಲ್ಲ, ದಶಕಗಳೇ ಉರುಳಿವೆ. ಹಲವು ಕಾರಣಗಳಿಂದ ಯೋಜನೆ ನನೆಗುದಿಗೆ ಬಿದ್ದಿತ್ತು. ಹಲವು ಪ್ರಯತ್ನ, ಎಲ್ಲರ ಸಹಕಾರದೊಂದಿಗೆ ಚಾಲನೆ ದೊರೆತಿರುವುದು ಸಂತಸವಾಗಿದೆ. ಸಹಕಾರ ನೀಡಿದ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ಯೋಜನೆಯ ಅರ್ಧ ವೆಚ್ಚ, ಭೂಮಿಯನ್ನು ರಾಜ್ಯ ಸರಕಾರ ಉಚಿತವಾಗಿ ನೀಡುವಂತೆ ಸಿಎಂ ಮನವೊಲಿಸಿದ ನಂತರ ಮಂಜೂರಾತಿ ದೊರೆಯಿತು. ಕಾಮಗಾರಿಯ ಶೇ. 65ರಷ್ಟು ವೆಚ್ಚವನ್ನು ರಾಜ್ಯ ಸರಕಾರ ಭರಿಸುತ್ತಿದೆ. ರೈಲ್ವೆ ಮಾರ್ಗಕ್ಕೆ ಅಗತ್ಯವಿರುವ 3472 ಎಕರೆ ಭೂಮಿಯನ್ನು ಮೊದಲ ಬಾರಿಗೆ ಕೆಐಎಡಿಬಿ ವತಿಯಿಂದ ರೈತರಿಂದ ಖರೀದಿಸಿ, ಯೋಜನೆಗೆ ಹಸ್ತಾಂತರಿಸಿಕೊಳ್ಳುವಂತಹ ಕ್ರಮ ಕೈಗೊಳ್ಳಲಾಗಿದೆ. ಹೀಗಾಗಿ ಯೋಜನೆ ತ್ವರಿತಗತಿಯಲ್ಲಿ ಪೂರ್ಣಗೊಳ್ಳುವ ವಿಶ್ವಾಸವಿದೆ. ತಳಕಲ್-ಕುಷ್ಟಗಿ ಮಾರ್ಗದ 58 ಕಿ.ಮೀ ಕಾಮಗಾರಿಯ ಅಗತ್ಯ ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ. 18 ತಿಂಗಳಲ್ಲಿ 58 ಕಿ.ಮೀ ಮಾರ್ಗ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ಈ ಯೋಜನೆಯಿಂದ ಕರ್ನಾಟಕ ಹಾಗೂ ಆಂಧ್ರದ ನಡುವೆ ಅತಿ ಹತ್ತಿರದ ಮಾರ್ಗವಾಗಲಿದ್ದು, ಪ್ರಯಾಣದ ಅವಧಿ ತಗ್ಗಲಿದೆ. ಅಲ್ಲದೆ ಈ ವಲಯದ ಆರ್ಥಿಕ ಪ್ರಗತಿ, ಕೈಗಾರಿಕೆಗಳಿಗೆ ಉತ್ಪನ್ನ ಸಾಗಿಸಲು, ಉದ್ಯೋಗ ಸೃಷ್ಟಿ, ಕೃಷಿ, ತೋಟಗಾರಿಕೆ, ಕೈಗಾರಿಕೋದ್ಯಮ, ಪ್ರವಾಸೋದ್ಯಮ ಪ್ರಗತಿಗೆ ಅನುಕೂಲವಾಗಲಿದೆ ಎಂದರು.



ವಿವಿಧ ರೈಲ್ವೆ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಉದ್ಘಾಟಿಸಿದರು.

ಸಂಸದ ಕರಡಿ ಸಂಗಣ್ಣ ಮಾತನಾಡಿ, ಗದಗ-ವಾಡಿ ರೈಲ್ವೆ ಮಾರ್ಗ ಈ ಭಾಗದ ಪ್ರಮುಖ ಯೋಜನೆ. ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ ಜಿಲ್ಲೆಗಳ ಮೂಲಕ ಹಾದು ಹೋಗಲಿದೆ. ತಳಕಲ್, ಕುಷ್ಟಗಿ, ಮುದಗಲ್, ಲಿಂಗಸುಗೂರ, ಶೋರಾಪುರ ಮತ್ತು ಶಹಾಪುರ ಮೂಲಕ ಸಾಗಲಿದೆ. ಈ ಭಾಗದ ವಾಣಿಜ್ಯ ಉದ್ಯಮ ಬೆಳೆಯಲು ಸಹಕಾರಿಯಾಗಲಿದೆ. ಕುಷ್ಟಗಿ-ಲಿಂಗಸುಗೂರು ಮಾರ್ಗದ ಭೂಸ್ವಾಧೀನ ಬೇಗ ಆಗಬೇಕು. ಮುನಿರಾಬಾದ್-ಮೆಹಬೂಬ್ ನಗರ ರೈಲ್ವೆ ಮಾರ್ಗಕ್ಕೆ ಸಂಬಂಧಿಸಿದಂತೆ ಈಗಾಗಲೆ ಚಿಕ್ಕಬೆಣಕಲ್ ವರೆಗೆ ರೈಲು ಸಂಚಾರ ಆರಂಭವಾಗಿದ್ದು, ಡಿಸೆಂಬರ್ ವೇಳೆಗೆ ಗಂಗಾವತಿಗೆ ರೈಲು ಸಂಚರಿಸಲಿದೆ. 2019ರೊಳಗಾಗಿ ಸಿಂಧನೂರು ವರೆಗೂ ರೈಲು ಸಂಚರಿಸುವ ವಿಶ್ವಾಸವಿದೆ ಎಂದರು.

ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ನೂತನವಾಗಿ 3 ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಲು ಕೇಂದ್ರ ಸರಕಾರ ಮಂಜೂರಾತಿ ನೀಡಿದೆ. ಯಾವುದೇ ಯೋಜನೆಗಳು ನಿಗದಿತ ಅವಧಿಯೊಳಗೆ ಪೂರ್ಣಗೊಂಡಾಗ ಮಾತ್ರ ಯೋಜನೆಗಳು ಸಾರ್ಥಕವಾಗಲಿದೆ. ಭಾಗ್ಯನಗರ ರೈಲ್ವೆ ಮೇಲ್ಸೇತುವೆ ಕಾರ್ಯ ವಿಳಂಬವಾಗುತ್ತಿದ್ದು, ಶೀಘ್ರ, ಅನುದಾನ ಬಿಡುಗಡೆಗೆ ಸರಕಾರ ಕ್ರಮ ಕೈಗೊಳ್ಳಬೇಕು ಎಂದರು.

ನೈರುತ್ಯ ರೈಲ್ವೆ ವಲಯದ ಎಜಿಎಂ ಬಿ.ಬಿ. ಸಿಂಗ್ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್, ಮಾಜಿ ಸಚಿವ ಅಮರೇಗೌಡ ಬಯ್ಯಾಪುರ, ವಿಧಾನಪರಿಷತ್ ಮಾಜಿ ಸದಸ್ಯ ಹಾಲಪ್ಪ ಆಚಾರ್, ಭಾನಾಪುರ ಗ್ರಾ.ಪಂ ಅಧ್ಯಕ್ಷ ಬಸವರಾಜ, ಯಲಬುರ್ಗಾ ತಾ.ಪಂ ಅಧ್ಯಕ್ಷೆ ಲಕ್ಷ್ಮೀ ದ್ಯಾಮಣ್ಣ, ಜಿಲ್ಲಾಧಿಕಾರಿ ಎಂ. ಕನಗವಲ್ಲಿ, ಜಿ.ಪಂ ಸಿಇಒ ವೆಂಕಟರಾಜಾ, ಎಡಿಸಿ ಡಾ. ರುದ್ರೇಶ್ ಘಾಳಿ, ಎಸಿ ಗುರುದತ್ತ ಹೆಗ್ಡೆ ಪಾಲ್ಗೊಂಡಿದ್ದರು.

### ಚುನಾವಣಾ ಪ್ರಚಾರದ ವೇದಿಕೆ

ರೈಲ್ವೆ ಇಲಾಖೆ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲು ಕಾರ್ಯಕ್ರಮ ಆಯೋಜಿಸಿದ್ದರೆ ಇತ್ತ ಸಚಿವ ರಾಯರಡ್ಡಿ ಮತ್ತು ಸಂಸದ ಸಂಗಣ್ಣ ಕರಡಿ ಚುನಾವಣಾ ಪ್ರಚಾರದ ವೇದಿಕೆಯನ್ನಾಗಿ ಬಳಸಿಕೊಂಡರು. ಮೊದಲು ಮಾತನಾಡಿದ ಸಂಗಣ್ಣ ಎಲ್ಲ ಯೋಜನೆಗಳು ಕೇವಲ ಒಂದು ಪಕ್ಷದ ಅಧಿಕಾರಕ್ಕೆ ಬಂದಾಗ ಅಲ್ಲ, 60 ವರ್ಷಗಳಿಂದ ಆ ಪಕ್ಷ ಯಾವೆಲ್ಲ ಅಭಿವೃದ್ಧಿ ಮಾಡಿದೆ ಎಂಬುದು ದೇಶಕ್ಕೆ ತಿಳಿದ ವಿಷಯ. ಮೋದಿಯವರು ಪ್ರಧಾನಿಯಾದಾಗಿನಿಂದ ಉತ್ತಮ ಅಭಿವೃದ್ಧಿಯತ್ತ ದೇಶ ಹೊರಟಿದೆ. ಅನೇಕ ಯೋಜನೆಗಳಿಗೆ ಅಂದಿನ ಸಿಎಂ ಯಡಿಯೂರಪ್ಪ ಹಣ ನೀಡಿದ್ದಾರೆ. ಇಂದಿನ ಸರಕಾರ ಅಲ್ಲ ಎಂದು ಹೇಳಿದರು.

ನಂತರ ಮಾತನಾಡಿದ ರಾಯರಡ್ಡಿ, ಸಂಗಣ್ಣ ಅವರ ಮಾತಿಗೆ ತಿರುಗೇಟು ನೀಡಿ, ಪಕ್ಷ ರಾಜಕೀಯ ಕೇವಲ ಚುನಾವಣೆಗೆ ಮಾತ್ರ ಸೀಮಿತವಾಗಿರಬೇಕು. ಆದರೆ ಅಭಿವೃದ್ಧಿ ವಿಷಯದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸುವ ಮನೋಭಾವ ಬೆಳೆಸಿಕೊಳ್ಳುವುದು ಅಭಿವೃದ್ಧಿ ದೃಷ್ಟಿಕೋನದಲ್ಲಿ ಅಗತ್ಯ. ಇಂದು ಯಾರಾದರೂ ಪಿಎಂ, ಸಿಎಂ ಆಗಬಹುದು. ಅದು ದೊಡ್ಡ ವಿಷಯವಲ್ಲ, ಆದರೆ ಅಭಿವೃದ್ಧಿ ಮಾಡುವತ್ತ ಗಮನವಿರಬೇಕು. ಅದಕ್ಕೆ ನಾನು ಹೊರತಲ್ಲ ಎಂದು ಹೇಳಿದರು.

ಇದನ್ನೆಲ್ಲ ಕೇಳುತ್ತಿದ್ದ ಜನತೆ ಇದು ಇಲಾಖೆಯ ಕಾರ್ಯಕ್ರಮವೋ ಅಥವಾ ಚುನಾವಣೆ ಪ್ರಚಾರವೋ ಎಂದು ಒಂದು ಕ್ಷಣ ಅವಕ್ಕಾದರು.



ಗೋವಾದಿಂದಲೇ ವಿಡಿಯೋ ಕಾನ್ಫರೆನ್ಸ್ ಮೂಲಕ ವಿವಿಧ ರೈಲ್ವೆ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

SAMYUKTA KARNATAKA/19/8/2017

# ಗದಗ–ವಾಡಿ ರೈಲ್ವೆ ಯೋಜನೆ 5 ವರ್ಷದೊಳಗೆ ಪೂರ್ಣ



ಕೊಪ್ಪಳ ಜಿಲ್ಲೆಯ ಭಾನಾಪುರ ರೈಲ್ವೆ ನಿಲ್ದಾಣದಲ್ಲಿ ಗದಗ–ವಾಡಿ ಹೊಸ ರೈಲ್ವೆ ಮಾರ್ಗ ಕಾಮಗಾರಿಗೆ ಚಾಲನೆ, ಭಾನಾಪುರ–ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗ ಪ್ಲಾಟ್ ಫಾರಂ ಸಂಖ್ಯೆ 2/3ರ ಸಮಾರಂಭದಲ್ಲಿ ಸಚಿವ ರಾಯರೆಡ್ಡಿ ಮಾತನಾಡಿದರು.

ಕೊಪ್ಪಳ: ಜಿಲ್ಲೆಯ ಯಲಬುರ್ಗಾ ತಾಲೂಕಿನ ತಳಕಲ್‌ನಿಂದ ಪ್ರಾರಂಭವಾಗುವ ಗದಗ–ವಾಡಿ ರೈಲ್ವೆ ನೂತನ ಮಾರ್ಗದ ಕಾಮಗಾರಿ ಐದು ವರ್ಷದೊಳಗೆ ಪೂರ್ಣಗೊಳ್ಳುವ ವಿಶ್ವಾಸವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಹೇಳಿದರು.

ಜಿಲ್ಲೆಯ ಭಾನಾಪುರ ರೈಲ್ವೆ ನಿಲ್ದಾಣದಲ್ಲಿ ಆಯೋಜಿಸಿದ ಗದಗ–ವಾಡಿ ಹೊಸ ರೈಲ್ವೆ ಮಾರ್ಗ ಕಾಮಗಾರಿಗೆ ಚಾಲನೆ, ಭಾನಾಪುರ–ಕೊಪ್ಪಳ ಸೆಕ್ಷನ್ ಜೋಡಿ ಮಾರ್ಗ ಪ್ಲಾಟ್‌ಫಾರಂ ಸಂಖ್ಯೆ 2/3 ರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಗದಗ–ವಾಡಿ ನೂತನ ರೈಲ್ವೆ ಮಾರ್ಗ 257 ಕಿ.ಮೀ. ಮಾರ್ಗವನ್ನು ಹೊಂದಿದ್ದು, 1923 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲು 2013–14 ರಲ್ಲಿ ಮಂಜೂರಾತಿ ನೀಡಲಾಗಿದೆ. ಇದೀಗ ಯೋಜನೆ ವೆಚ್ಚ 2841 ಕೋಟಿ ರೂ. ಗಳಿಗೆ ಪರಿಷ್ಕರಣೆಗೊಂಡಿದೆ ಎಂದು ಮಾಹಿತಿ ನೀಡಿದರು.

**ಶೇ.50ರಷ್ಟು ವೆಚ್ಚ ರಾಜ್ಯದ್ದು**

ಗದಗ–ವಾಡಿ ರೈಲ್ವೆ ಮಾರ್ಗವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವೆಚ್ಚ ಹಂಚಿಕೆಯ ಆಧಾರದಲ್ಲಿ ಕೈಗೊಳ್ಳಲಾಗಿದೆ. ರಾಜ್ಯ ಸರ್ಕಾರ ಕಾಮಗಾರಿಯ ಶೇ.50ರ ವೆಚ್ಚದ ಜೊತೆಗೆ ಭೂಮಿಯನ್ನು ಯೋಜನೆಗೆ ನೀಡಲಾಗಿದೆ. ಅಂದರೆ ಶೇ. 65ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಿದಂತಾಗುತ್ತದೆ ಎಂದರು. ರೈಲ್ವೆ ಮಾರ್ಗಕ್ಕೆ ಅಗತ್ಯವಿರುವ 3472 ಎಕರೆ ಭೂಸ್ವಾಧೀನಕ್ಕಾಗಿ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮ ವತಿಯಿಂದ ಭೂಮಿಯನ್ನು ರೈತರಿಂದ ಖರೀದಿಸಲಾಗುತ್ತದೆ ಎಂದು ಹೇಳಿದರು.

**ತಳಕಲ್- ಕುಷ್ಟಗಿ ಮಾರ್ಗ**

ಇದೀಗ ತಳಕಲ್–ಕುಷ್ಟಗಿ ಮಾರ್ಗದ 58 ಕಿ.ಮೀ. ಮಾರ್ಗದ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಅಗತ್ಯ ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ. 18 ತಿಂಗಳ ಒಳಗಾಗಿ 58 ಕಿ.ಮೀ. ಮಾರ್ಗ ಪೂರ್ಣಗೊಳ್ಳಲಿದೆ. ಕುಷ್ಟಗಿ–ಶಹಾಪುರ ಮತ್ತು ಶಹಾಪುರ–ವಾಡಿ ಮಾರ್ಗಕ್ಕಾಗಿ ಭೂಮಿಯನ್ನು ವಶಪಡಿಸಿಕೊಳ್ಳುವ ಕಾರ್ಯಕ್ಕೆ ಈಗಾಗಲೆ ಚಾಲನೆ ದೊರೆತಿದೆ. ಗದಗ–ವಾಡಿ ಮಾರ್ಗದ ತಳಕಲ್ ಜಂಕ್ಷನ್ ರೈಲ್ವೆ ನಿಲ್ದಾಣವನ್ನು ರಾಜ್ಯದ ಮಾದರಿ ರೈಲ್ವೆ ನಿಲ್ದಾಣವನ್ನಾಗಿ ನಿರ್ಮಿಸುವ ಆಶಯ ನಮ್ಮದು ಎಂದು ತಿಳಿಸಿದರು.

ಸಂಸದ ಕರಡಿ ಸಂಗಣ್ಣ ಮಾತನಾಡಿ, ತಳಕಲ್–ಕುಷ್ಟಗಿ ಮಾರ್ಗದ ಭೂಸ್ವಾಧೀನ ಪೂರ್ಣಗೊಂಡಿದ್ದು, ಕುಷ್ಟಗಿ–ಲಿಂಗಸುಗೂರು ಮಾರ್ಗದ ಭೂಸ್ವಾಧೀನ ಬೇಗ ಆಗಬೇಕು. ಮುನಿರಾಬಾದ್–ಮೆಹಬೂಬ್‌ನಗರ ರೈಲ್ವೆ ಮಾರ್ಗಕ್ಕೆ ಸಂಬಂಧಿಸಿದಂತೆ ಈಗಾಗಲೆ ಚಿಕ್ಕಬೆಣಕಲ್ ವರೆಗೆ ರೈಲು ಸಂಚಾರ ಪ್ರಾರಂಭವಾಗಿದ್ದು, ಡಿಸೆಂಬರ್ ವೇಳೆಗೆ ಗಂಗಾವತಿಗೆ ರೈಲು ಸಂಚರಿಸಲಿದೆ. ಭಾನಾಪುರ ರೈಲ್ವೆ ಗೇಟ್‌ಗೆ ಸೇತುವೆ ನಿರ್ಮಾಣ ಕಾಮಗಾರಿಗೆ ಶೀಘ್ರದಲ್ಲಿಯೇ ಅಡಿಗಲ್ಲು ನೆರವೇರಿಸಲಾಗುವುದು ಎಂದರು.

ನೈರುತ್ಯ ರೈಲ್ವೆ ಇಲಾಖೆ ಎಜಿಎಂ ಬಿ.ಬಿ. ಸಿಂಗ್ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್, ಮಾಜಿ ಸಚಿವ ಅಮರೇಗೌಡ ಬಯ್ಯಾಪುರ, ವಿಧಾನಪರಿಷತ್ ಮಾಜಿ ಸದಸ್ಯ ಹಾಲಪ್ಪ ಆಚಾರ್, ಸೇರಿದಂತೆ ಗಣ್ಯರು ಅಧಿಕಾರಿಗಳು ಉಪಸ್ಥಿತರಿದ್ದರು.

ಗದಗ–ಕೂಡಗಿ–ಹೊಟಗಿ ಜೋಡಿ ಮಾರ್ಗಕ್ಕೆ ಚಾಲನೆ

# ರಾಜ್ಯದಲ್ಲಿ ಡಬಲ್ ಡೆಕ್ಕರ್ ರೈಲು: ಪ್ರಭು

ಗದಗ: ಪ್ರಯಾಣಿಕರಿಗೆ ಇನ್ನಷ್ಟು ಅನುಕೂಲತೆ ಕಲ್ಪಿಸಲು ರಾಜ್ಯದಲ್ಲಿ ಡಬಲ್ ಡೆಕ್ಕರ್ ರೈಲ್ವೆ ಬೋಗಿಗಳನ್ನು ಪರಿಚಯಿಸಲು ಉದ್ದೇಶಿಸಲಾಗಿದೆ ಎಂದು ರೈಲ್ವೆ ಸಚಿವ ಸುರೇಶ ಪ್ರಭು ಪ್ರಕಟಿಸಿದರು.

ಗದಗ ವಾಡಿ ನೂತನ ರೈಲು ಮಾರ್ಗ, ಗದಗ–ಕೂಡಗಿ–ಹೊಟಗಿ ಜೋಡಿ ಮಾರ್ಗಕ್ಕೆ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿ ಮಾತನಾಡಿದರು.

ಎರಡು ವರ್ಷಗಳಲ್ಲಿ 16,500 ಕಿ.ಮೀ. ರೈಲ್ವೆ ಮಾರ್ಗವನ್ನು ಜೋಡಿ ಮಾರ್ಗಗಳಾಗಿ ಪರಿವರ್ತಿಸಲಾಗಿದೆ. ದೇಶದಲ್ಲಿನ ಎಲ್ಲ ಮೀಟರ್‌ಗೇಜ್ ರೈಲು ಮಾರ್ಗಗಳನ್ನು ಬ್ರಾಡ್‌ಗೇಜಿಗೆ ಪರಿವರ್ತಿಸಲು ಉದ್ದೇಶಿಸಲಾಗಿದೆ. ರೈಲ್ವೆ ಮಾರ್ಗಗಳು ಬ್ರಾಡ್‌ಗೇಜಿಗೆ ಪರಿವರ್ತನೆಗೊಂಡ ನಂತರ ರೈಲುಗಳ ವೇಗ ವೃದ್ಧಿಸಿ ಪ್ರಯಾಣಿಕರು ಕಡಿಮೆ ಅವಧಿಯಲ್ಲಿ ನಿಗದಿತ ಸ್ಥಳಗಳನ್ನು ತಲುಪುವರು ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿಯವರ ಹೆಮ್ಮೆಯ ಮೇಕ್ ಇನ್ ಇಂಡಿಯಾ ಯೋಜನೆಯಡಿ ಯಾದಗಿರಿಯಲ್ಲಿ ಲೋಕೋ ರೈಲ್ವೆ ಬೋಗಿಗಳು ಮತ್ತು ವಿದ್ಯುತ್ ರೈಲು ಬೋಗಿಗಳನ್ನು ತಯಾರಿಸುವ ಕಾರ್ಖಾನೆಯನ್ನು ಪ್ರಾರಂಭಿಸಲಾಗಿದೆ ಎಂದು ವಿವರಿಸಿದರು.ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ರಾಜ್ಯದಲ್ಲಿ ಸುಮಾರು 60 ಸಾವಿರ ಕೋಟಿ ರೂ. ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಈ ಹಿಂದಿನ ಯುಪಿಎ ಸರ್ಕಾರಗಳು ಮಂಡಿಸುತ್ತಿದ್ದ ರೈಲ್ವೆ ಬಜೆಟ್‌ಗಳಲ್ಲಿ ಶೇ. 150 ಕ್ಕೂ ಹೆಚ್ಚು ಹಣ ಮಂಜೂರು ಮಾಡುವ ಮೂಲಕ ಕರ್ನಾಟಕಕ್ಕೆ ವಿಶೇಷ ಕೊಡುಗೆ ನೀಡಿದೆ ಎಂದು ತಿಳಿಸಿದರು.



ಗದಗ –ವಾಡಿ ನೂತನ ರೈಲು ಮಾರ್ಗವನ್ನು ರೈಲ್ವೆ ಸಚಿವ ಸುರೇಶ ಪ್ರಭು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಸಚಿವ ಎಚ್.ಕೆ. ಪಾಟೀಲ ಮಾತನಾಡಿ, ರಾಜ್ಯದಲ್ಲಿ ಕೈಗೊಳ್ಳುವ ವಿವಿಧ ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರ ಅಗತ್ಯ ಸಹಾಯ, ಸಹಕಾರ ನೀಡುವುದೆಂದು ಹೇಳಿದರು.

ಸಂಸದ ಶಿವಕುಮಾರ ಉದಾಸಿ ಮಾತನಾಡಿದರು. ಮಾಜಿ ಕೇಂದ್ರ ಸಚಿವ ಬಸನಗೌಡಾ ಪಾಟೀಲ ಯತ್ನಾಳ, ಜಿ.ಪಂ. ಅಧ್ಯಕ್ಷ ವಾಸಣ್ಣ ಕುರಡಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯ ಮೇಲೆ ಮಾಜಿ ಸಚಿವ ಸಿ.ಸಿ. ಪಾಟೀಲ, ಮಾಜಿ ಶಾಸಕ ರಾಮಣ್ಣ ಲಮಾಣಿ, ನೈರುತ್ಯ ರೈಲ್ವೆಯ ಮಹಾಪ್ರಬಂಧಕ ಎ.ಎಲ್. ಗುಪ್ತಾ ಮತ್ತಿತರರು ಇದ್ದರು.

# ಕರಾವಳಿಯಲ್ಲಿ ಕಂಪಿಸಿದ ನೆಲ

ಅಂಕೋಲಾ: ತಾಲೂಕಿನ ಕರಾವಳಿ ಪ್ರದೇಶಕ್ಕೆ ಹೊಂದಿಕೊಂಡಿರುವ ವಿವಿಧೆಡೆ ಗುರುವಾರ ರಾತ್ರಿ ಭೂಕಂಪ ಉಂಟಾಗಿರುವ ವರದಿಯಾಗಿದೆ. ನಡುರಾತ್ರಿಯ ಸುಮಾರು 2 ಗಂಟೆ 10 ನಿಮಿಷಕ್ಕೆ ಸಂಭವಿಸಿದ ಭೂಕಂಪನದಿಂದ ನಿದ್ರೆಯ ಮಂಪರಿನಲ್ಲಿದ್ದ ಹಲವರು ಆತಂಕಕ್ಕೊಳಗಾದರು.

ಭಾರೀ ಸದ್ದಿನೊಂದಿಗೆ ಕಾಣಿಸಿಕೊಂಡ ಭೂಕಂಪನದಿಂದಾಗಿ ಸಾರ್ವಜನಿಕರು ಭಯಭೀತರಾದರು. ಬೆಳಗ್ಗೆ ಸ್ಥಳಕ್ಕೆ ದೌಡಾಯಿಸಿದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿ ರಾಜೇಶ ಹಾಗೂ ತಹಸೀಲ್ದಾರ ವಿವೇಕ ಶೇಣ್ವಿ ಪರಿಶೀಲನೆ ನಡೆಸಿದರು.

ತಾಲೂಕಿನ ಹುಲಿದೇವರವಾಡಾ, ಪುರ್ಲಕ್ಕಿಬೇಣ, ಭಾವಿಕೇರಿ, ಬೆಲೆಕೇರಿ, ಹೊನ್ನೆಕೇರಿ, ಅಲಗೇರಿ, ನದಿಭಾಗ ಸೇರಿದಂತೆ ಹಲವೆಡೆ ಭೂಕಂಪನದ ಅನುಭವವಾಗಿರುವ ವರದಿಗಳು ಬಂದಿವೆ. ಆದರೆ ಜಿಲ್ಲೆಯ ಜೋಯಿಡಾ ತಾಲೂಕಿನ ರಿಕ್ಟರ್ ಮಾಪನದಲ್ಲಿ ಭೂಕಂಪನದ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ.

ಉದ್ಘಾಟನಾ ಸಮಾರಂಭ

UDAYAVANI/BELGAUM
19/8/2017

# ಕುಡಚಿ-ಬಾಗಲಕೋಟೆ ರೈಲ್ವೆ ಮಾರ್ಗ ಶೀಘ್ರ ಪೂರ್ಣಗೊಳಿಸಲು ಒತ್ತಾಯ

## ■ ಬೆಲ್ಲದ ಬಾಗೇವಾಡಿ ಸ್ಟೇಷನ್ ವ್ಯಾಪ್ತಿಯ ಗ್ರಾಮಗಳಿಗೆ ಪ್ಲಾಟ್‌ಫಾರಂ ನಿರ್ಮಿಸಿ

**ಚಿಕ್ಕೋಡಿ:** ಹಿಂದಿನ ಯುಪಿಎ ಸರಕಾರದ ಅವಧಿಯಲ್ಲಿ 700 ಕೋಟಿ ಅನುದಾನ ಒದಗಿಸಿದರೂ ಕುಡಚಿ-ಬಾಗಲಕೋಟ ನೂತನ ರೈಲ್ವೆ ಮಾರ್ಗ ಕಾಮಗಾರಿ ಮುಕ್ತಾಯವಾಗದೇ ಇರುವುದರಿಂದ ರೈಲ್ವೇ ಅಧಿಕಾರಿಗಳು ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲಾಧಿಕಾರಿಗಳ ಸಭೆ ಕರೆದು ಭೂಸ್ವಾಧೀನಕ್ಕೆ ಕ್ರಮ ಕೈಗೊಂಡು ರೈಲ್ವೆ ಮಾರ್ಗದ ಕಾಮಗಾರಿ ಆರಂಭಿಸಬೇಕೆಂದು ಸಂಸದ ಪ್ರಕಾಶ ಹುಕ್ಕೇರಿ ಒತ್ತಾಯಿಸಿದರು.

ತಾಲೂಕಿನ ಚಿಕ್ಕೋಡಿ ರೋಡ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಹೊಸ ನಿಲ್ದಾಣ ಮತ್ತು ವಿಸ್ತರಿಸಿದ ಪ್ಲಾಟ್‌ಫಾರಂ ಮೇಲ್ಛಾವಣಿ, ರಾಯಬಾಗ ಸ್ಟೇಷನ್‌ನಲ್ಲಿ ವಿಸ್ತರಿಸಿದ ಪ್ಲಾಟ್‌ಫಾರಂ ಮೇಲ್ಛಾವಣಿ, ಲೋಂಡಾ-ಶಿವಥಾನ ಸೆಕ್ಷನ್ ಜೋಡಿ ಮಾರ್ಗದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕಳೆದ ಯುಪಿಎ ಸರಕಾರದ ಅವಧಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ರೈಲ್ವೆ ಸಚಿವರಿದ್ದಾಗ ಕುಡಚಿ-ಬಾಗಲಕೋಟ ರೈಲ್ವೆ ಮಾರ್ಗಕ್ಕೆ ಮಂಜೂರಾತಿ ಸಿಕ್ಕಿದೆ. ಅಲ್ಲಿಂದ ಇಲ್ಲಿಯವರಿಗೆ ಕೇವಲ 31 ಕಿಮೀ ರೈಲ್ವೆ ಮಾರ್ಗ ಮಾತ್ರ ಮುಕ್ತಾಯವಾಗಿದೆ. ಇಲಾಖೆ ಅಧಿಕಾರಿಗಳು ಎರಡು ಜಿಲ್ಲೆಗಳ ಜಿಲ್ಲಾಧಿಕಾರಿಗಳ ಸಭೆ ನಡೆಸಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಿ ಶೀಘ್ರ ಕಾಮಗಾರಿ ಮುಕ್ತಾಯಗೊಳಿಸಬೇಕು ಎಂದರು.

ಚಿಕ್ಕೋಡಿ ಲೋಕಸಭೆ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕುಡಚಿ, ಬಾಗೇವಾಡಿ ರೈಲ್ವೆ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕೆ ಸಮರ್ಪಕ ಕುಡಿಯುವ ನೀರು, ಪ್ಲಾಟಫಾರಂ ಒದಗಿಸಬೇಕು. ಬೆಲ್ಲದ ಬಾಗೇವಾಡಿ ಸ್ಟೇಷನ್ ವ್ಯಾಪ್ತಿಯಲ್ಲಿ ಒಂಬತ್ತು ಹಳ್ಳಿಗಳು ಬರುತ್ತವೆ. ಅಲ್ಲಿ ಪ್ಲಾಟಫಾರಂ ವ್ಯವಸ್ಥೆ ಕಲ್ಪಿಸಬೇಕೆಂದು ಇಲಾಖೆ ಹಿರಿಯ ಅಧಿಕಾರಿಗಳಿಗೆ ಹಲವು ಬಾರಿ ಪತ್ರ ಬರೆಯಲಾಗಿದೆ. ಖುದ್ದಾಗಿ ಭೇಟಿ ಮಾಡಿದರೂ ಸಹ ಕೆಲಸ ಆಗುತ್ತಿಲ್ಲ, ಇದರಿಂದ ತಾವು ಖುದ್ದಾಗಿ ರೈಲ್ವೆ ಸಚಿವ ಸುರೇಶ ಪ್ರಭು ಅವರನ್ನು ಭೇಟಿಯಾಗಿ ಮನವಿ ಮಾಡಿಕೊಂಡಾಗ ಸಚಿವರು ಅನುದಾನ ಒದಗಿಸುವ ಭರವಸೆ ನೀಡಿದ್ದಾರೆ ಎಂದರು.




ಚಿಕ್ಕೋಡಿ: ಚಿಕ್ಕೋಡಿ ರೋಡ್ ರೈಲ್ವೆ ನಿಲ್ದಾಣದಲ್ಲಿ ನಡೆದ ಹೊಸ ನಿಲ್ದಾಣ ಮತ್ತು ವಿಸ್ತರಿಸಿದ ಪ್ಲಾಟ್‌ಫಾರಂ ಮೇಲ್ಛಾವಣಿ, ರಾಯಬಾಗ ಸ್ಟೇಷನ್‌ನಲ್ಲಿ ವಿಸ್ತರಿಸಿದ ಪ್ಲಾಟ್‌ಫಾರಂ ಮೇಲ್ಛಾವಣಿ ಉದ್ಘಾಟನಾ ಸಮಾರಂಭದಲ್ಲಿ ಸಂಸದ ಪ್ರಕಾಶ ಹುಕ್ಕೇರಿ ಮಾತನಾಡಿದರು.

ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಮಾತನಾಡಿ, ರಾಯಬಾಗ ಕ್ಷೇತ್ರದಲ್ಲಿ ಬರುವ ರಾಯಬಾಗ, ಚಿಂಚಲಿ, ಚಿಕ್ಕೋಡಿ ರೋಡ, ಬಾಗೇವಾಡಿ ನಿಲ್ದಾಣದ ಬಳಿ ರಸ್ತೆ ನಿರ್ಮಿಸಿ ಜನರಿಗೆ ಅನುಕೂಲ ಕಲ್ಪಿಸಬೇಕು. ಸ್ಟೇಷನ್‌ಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದರು.

ಸಂಸದೀಯ ಕಾರ್ಯದರ್ಶಿ ಗಣೇಶ ಹುಕ್ಕೇರಿ ಮಾತನಾಡಿ, ಮಹಾರಾಷ್ಟ್ರದ ಮಿರಜದಿಂದ ಬೆಂಗಳೂರಿಗೆ ಪ್ರತಿದಿನ ಸಾಕಷ್ಟು ಪ್ರಯಾಣಿಕರು ಪ್ರಯಾಣ ಬೆಳೆಸುವುದರಿಂದ ಮತ್ತೆರಡು ರೈಲುಗಳನ್ನು ಮಿರಜ-ಬೆಂಗಳೂರು ಮಾರ್ಗಕ್ಕೆ ಬಿಡಬೇಕು ಎಂದರು.

ಇದಕ್ಕೂ ಮುನ್ನ ಎಲ್ಲ ಕಾಮಗಾರಿಗಳನ್ನು ರೈಲ್ವೆ ಸಚಿವ ಸುರೇಶ ಪ್ರಭು ಅವರು ದೆಹಲಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು.

ಚಿಕ್ಕೋಡಿ ಪುರಸಭೆ ಅಧ್ಯಕ್ಷೆ ಆರತಿ ಮುಂಡೆ, ಜಿಲ್ಲಾ ಪಂಚಾಯತಿ ಸದಸ್ಯ ಪವನ ಕತ್ತಿ ಸೇರಿದಂತೆ ಮೀರಾಪೂರಹಟ್ಟಿ, ಜೋಡಟ್ಟಿ, ಚಿಕ್ಕೋಡಿ ಭಾಗದ ಜನರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಹೆಸರು ಮಾಯ: ಶಾಸಕ ಐಹೊಳೆ ಸಿಡಿಮಿಡಿ

**ಚಿಕ್ಕೋಡಿ:** ಶಿಷ್ಟಾಚಾರ ನಿಯಮದ ಪ್ರಕಾರ ಸ್ಥಳೀಯ ಶಾಸಕರು ಕಾರ್ಯಕ್ರಮದ ಅಧ್ಯಕ್ಷರಾಗಿರುತ್ತಾರೆ. ಆದರೆ ನೈರುತ್ಯ ರೈಲ್ವೆ ಇಲಾಖೆಯ ಅಧಿಕಾರಿಗಳು ಶಿಷ್ಟಾಚಾರವನ್ನು ಗಾಳಿಗೆ ತೂರಿ ಶಾಸಕರಿಗೆ ಅಪಮಾನ ಮಾಡಿದ್ದಾರೆ ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಸಭೆಯಿಂದ ಹೊರ ನಡೆದ ಘಟನೆ ನಡೆಯಿತು.



ಶುಕ್ರವಾರ ತಾಲೂಕಿನ ಚಿಕ್ಕೋಡಿ ರೈಲ್ವೆ ನಿಲ್ದಾಣದ ಹೊಸ ಕಟ್ಟಡ ಮತ್ತು ವಿಸ್ತರಿಸಿದ ಪ್ಲಾಟ್‌ಫಾರಂ ಮೇಲ್ಛಾವಣಿ ಉದ್ಘಾಟನೆ ಸಮಾರಂಭದಲ್ಲಿ ರೈಲ್ವೆ ಸಚಿವ ಸುರೇಶ ಪ್ರಭು ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟನೆ ಮಾಡುವ ಸಂದರ್ಭದಲ್ಲಿ ನಾಮಫಲಕದಲ್ಲಿ ಶಾಸಕರ ಹೆಸರು ಇಲ್ಲದೇ ಇರುವುದರಿಂದ ಆಕ್ರೋಶಗೊಂಡ ಶಾಸಕ ಐಹೊಳೆ ಅವರು ಅಧಿಕಾರಿಗಳ ವಿರುದ್ಧ ಹರಿಹಾಯ್ದರು. ರಾಯಬಾಗ ಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಶಾಸಕರ ಹೆಸರು ಯಾಕೆ ಹಾಕಿಲ್ಲ ಎಂದು ಪ್ರಶ್ನಿಸಿದರು. ಅದರ ಜೊತೆಗೆ ಸಂಸದೀಯ ಕಾರ್ಯದರ್ಶಿ ಗಣೇಶ ಹುಕ್ಕೇರಿ ಹೆಸರನ್ನು ಕೂಡ ಹಾಕಿಲ್ಲ, ಈ ರೀತಿ ಇದ್ದರೆ ನಮ್ಮನ್ನು ಯಾಕೆ ಕರೆಯುತ್ತೀರಿ? ನಿಮ್ಮ ಇಲಾಖೆ ಕಾರ್ಯಕ್ರಮ ನೀವೇ ಮಾಡಿಕೊಬೇಕಿತ್ತು ಎಂದು ವೇದಿಕೆ ಮೇಲೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, ಕಾರ್ಯಕ್ರಮದ ಉಸ್ತುವಾರಿ ವಹಿಸಿಕೊಂಡಿರುವ ಅಧಿಕಾರಿಗಳ ವಿರುದ್ಧ ರೈಲ್ವೆ ಸಚಿವರಿಗೆ ದೂರು ನೀಡಲಾಗುವುದು. ತಕ್ಷಣ ಅಧಿಕಾರಿಗಳು ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು. ಮಧ್ಯೆ ಪ್ರವೇಶಿಸಿದ ಸಂಸದ ಪ್ರಕಾಶ ಹುಕ್ಕೇರಿ, ಶಾಸಕರನ್ನು ಸಮಾಧಾನಗೊಳಿಸಿ ನಾಮಫಲಕದಲ್ಲಿ ಹೆಸರು ಹಾಕಬೇಕು ಎಂದು ಸೂಚನೆ ನೀಡಿದರು. ನಂತರ ರೈಲ್ವೆ ಇಲಾಖೆ ಅಧಿಕಾರಿಗಳು ಕ್ಷಮೆ ಕೋರಿದ ನಂತರ ಕಾರ್ಯಕ್ರಮ ಮುಂದುವರಿಯಿತು.

# ರೇಲ್ವೆ ಅಧಿಕಾರಿಗಳಿಗೆ ಜನಪ್ರತಿನಿಧಿಗಳ ಕಿಮ್ಮತ್ತಿಲ್ಲ: ಸಂಸದ ಹುಕ್ಕೇರಿ ಆಕ್ರೋಶ

19/8/17 KANNADAMMA/CHIKODI



ಕನ್ನಡಮ್ಮ ಸುದ್ದಿ-ಚಿಕ್ಕೋಡಿ 18: ರೇಲ್ವೆ ಇಲಾಖೆ ಅಧಿಕಾರಿಗಳಿಗೆ ಸಂಸದರು ಹಾಗೂ ಶಾಸಕರೆಂದರೆ ಕಿಮ್ಮತ್ತಿಲ್ಲದಂತಾಗಿದೆ. ಯಾವುದೇ ಪ್ರಸ್ತಾವಣೆ ಸಲ್ಲಿಸಿದರೂ ಮತ್ತೊಮ್ಮೆ ಕಳುಹಿಸಿ ಎನ್ನುವ ಸಂಪ್ರದಾಯದಿಂದ ರೈಲು ಯೋಜನೆಗಳಿಗೆ ಹಿನ್ನಡೆಯಾಗುತ್ತಿದ್ದು ಈ ಕುರಿತು ಸಚಿವರಿಗೆ ದೂರು ನೀಡುವದಾಗಿ ಚಿಕ್ಕೋಡಿ ಸಂಸದ ಪ್ರಕಾಶ ಹುಕ್ಕೇರಿ ತಿಳಿಸಿದರು.

ತಾಲೂಕಿನ ಕಬ್ಬೂರ ಬಳಿ ಮೇಲ್ದರ್ಜೆಗೇರಿದ ಚಿಕ್ಕೋಡಿ ರೈಲು ನಿಲ್ದಾಣ ಹಾಗೂ ರಾಯಬಾಗ ರೈಲು ನಿಲ್ದಾಣಗಳನ್ನು ಆನ್‌ಲೈನ್ ಮೂಲಕ ರೇಲ್ವೆ ಸಚಿವ ಸುರೇಶ ಪ್ರಭು ಲೋಕಾರ್ಪಣೆಗೊಳಿಸಿದ ಬಳಿಕ ಮಾತನಾಡಿದ ಅವರು, ಬೆಲ್ಲದ-ಬಾಗೇವಾಡಿ ನಿಲ್ದಾಣ ಅಭಿವೃದ್ಧಿ ಸಲುವಾಗಿ ಹಲವಾರು ಬಾರಿ ಪತ್ರ ಬರೆದು ದೂರವಾಣಿ ಮೂಲಕ ಕರೆ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದಕ್ಕೆ ಸಚಿವರು ಒಪ್ಪಿಗೆ ಸೂಚಿಸಿದ್ದಾರೆ. ಕುಡಚಿ-ಬಾಗಲಕೋಟ ಯೋಜನೆಗೆ ಬೇಕಿರುವ 700 ಕೋಟಿ ಹಣ ರಾಜ್ಯ ಸರಕಾರ ಒದಗಿಸಿದೆ ಎಂದರು. ಆದರೆ ಸಂಸದರು ಕರಾಡ-ಬೆಳಗಾವಿ ಹೊಸ ಮಾರ್ಗದ ಕುರಿತು ಯಾವುದೇ ಹೇಳಿಕೆ ನೀಡಲಿಲ್ಲ.

ಒಂದು ಬಾರಿ ಉದ್ಘಾಟನೆಗೊಂಡ ರಾಯಬಾಗ ರೈಲು ನಿಲ್ದಾಣ ಸೇರಿದಂತೆ ಇನ್ನಿತರ ಕಾಮಗಾರಿಗಳನ್ನು ಮತ್ತೊಮ್ಮೆ ಉದ್ಘಾಟನೆ ಮಾಡುವ ಮೂಲಕ ರೈಲು ಇಲಾಖೆ ಅಧಿಕಾರಿಗಳು ಜನರ ದಿಕ್ಕು ತಪ್ಪಿಸುತ್ತಿದ್ದಾರೆಂದು ರೇಲ್ವೆ ಇಲಾಖೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಅಧ್ಯಕ್ಷತೆವಹಿಸಿದ್ದ ದುರ್ಯೋಧನ ಐಹೊಳೆ ಮಾತನಾಡಿ, ಬೆಂಗಳೂರು-ಮಿರಜ ರೇಲ್ವೆ ಯೋಜನೆಗೆ ಮತ್ತೊಂದು ರೈಲು ಸೇರ್ಪಡೆ ಮಾಡಬೇಕು ಹಾಗೂ ಪಂಡರಪುರ ರೈಲು ಮಾರ್ಗ ವಾರವಿಡಿ ರೈಲು ಸಂಚರಿಸಬೇಕೆಂದರು.

ನೈರುತ್ಯ ರೇಲ್ವೆ ವಲಯದ ಜನರಲ್ ಮ್ಯಾನೇಜರ ಪುನೀತ ಮಾತನಾಡಿ, ರಾಜ್ಯದಲ್ಲಿ ರೈಲು ಅಭಿವೃದ್ಧಿಗೆ ಅನೇಕ ಯೋಜನೆ ಜಾರಿಗೊಳಿಸಲಾಗುತ್ತಿದೆ ಎಂದರು. ಕಂದಾಯ ಇಲಾಖೆ ಸಂಸದೀಯ ಕಾರ್ಯದರ್ಶಿ ಗಣೇಶ ಹುಕ್ಕೇರಿ ಮಾತನಾಡಿದರು.

**ನಾಮಫಲಕದಲ್ಲಿ ಶಾಸಕರ ಹೆಸರಿಲ್ಲ**

ಇಂದು ಲೋಕಾರ್ಪಣೆಗೊಂಡ ಚಿಕ್ಕೋಡಿ-ರಾಯಬಾಗ ನಿಲ್ದಾಣಗಳ ನಾಮಫಲಕಗಳಲ್ಲಿ ಶಾಸಕರು ತಮ್ಮ ಹೆಸರು ಹಾಕದ ಅಧಿಕಾರಿಗಳಿಗೆ ಲೆಫ್ಟ್-ರೈಟ ತೆಗೆದುಕೊಂಡದರು. ಶಾಸಕ ದುರ್ಯೋಧನ ಐಹೊಳೆ ಸ್ಥಳೀಯ ಶಾಸಕ ಲೆಕ್ಕಕ್ಕಿಲ್ಲ ಎಂದ ಮೇಲೆ ನಮ್ಮನ್ನೇಕೆ ಕಾರ್ಯಕ್ರಮಕ್ಕೆ ಕರೆಸಿದ್ದೀರಿ ಎಂದು ಅಧಿಕಾರಿಗಳ ವಿರುದ್ಧ, ಹರಿಹಾಯ್ದರು. ಬೋರ್ಡಿನ ಮೇಲೆ ಹೆಸರು ಹಾಕಿಸುವ ಭರವಸೆ ನೀಡುವದಾದರೆ ಮಾತ್ರ ಕಾರ್ಯಕ್ರಮದಲ್ಲಿರುತ್ತೇನೆ ಇಲ್ಲದಿದ್ದರೆ ಇಲ್ಲಿಂದ ಹೋಗುತ್ತೇನೆ ಎಂದು ಕಾರ್ಯಕ್ರಮದ ವೇದಿಕೆಯಿಂದ ಹೊರಟು ನಿಂತರು. ಆಗ ಮಧ್ಯಪ್ರವೇಶಿಸಿದ ಸಂಸದ ಪ್ರಕಾಶ ಹುಕ್ಕೇರಿ ಅವರು ಶಾಸಕ ಐಹೊಳೆ ಹೆಸರನ್ನು ಕೈಬಿಟ್ಟಿರುವುದು ಸರಿಯಲ್ಲ ಎಂದರು. ಆದರೂ ಪಟ್ಟು ಸಡಿಲಿಸದ ಅಧಿಕಾರಿಗಳಿಗೆ ಮಾಡಿದ ತಪ್ಪು ಸರಿಪಡಿಸಿಕೊಳ್ಳಲಾಗದ ನೀವು ಕೆಲಸ ಮಾಡಲಾಗದಿದ್ದರೇ ಬೇರೆ ಕಡೆಗೆ ಟ್ರಾನ್ಸಫರ ತೆಗೆದುಕೊಳ್ಳಿ ಎಂದು ಸಂಸದ ಹುಕ್ಕೇರಿ ಆವಾಜ್ ಹಾಕಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಸದಸ್ಯ ಪವನ ರಮೇಶ ಕತ್ತಿ, ಚಿಕ್ಕೋಡಿ ಪುರಸಭಾಧ್ಯಕ್ಷೆ ಆರತಿ ಮುಂಡೆ, ರಾಯಬಾಗ ತಾಪಂ ಅಧ್ಯಕ್ಷ ರವಿಶಂಕರ ನರಗಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಭಾಷಣ ಬಿಡ್ರಿ ನೀರ್ ಕೊಡ್ರಿ

. ನಾಗರಮುನ್ನೋಳಿ ಸೇರಿದಂತೆ 14 ಹಳ್ಳಿಗಳ ಕುಡಿಯುವ ನೀರಿನ ಯೋಜನೆಗೆ ರೇಲ್ವೆ ಕ್ರಾಸಿಂಗ ಮಾಡಲು ಅಧಿಕಾರಿಗಳು ಅನುಮತಿ ನೀಡಿಲ್ಲ ಹೀಗಾಗಿ ಕಾಮಗಾರಿ ವಿಳಂಬವಾಗಿದೆ ಎಂಬ ಶಾಸಕ ಹೇಳಿಕೆಗೆ ರೈತನೊಬ್ಬ ಅಲ್ಲಿತಾಕ್ ನಾವ್ ಹೆಂಗ ನೀರ್ ಕುಡಿಯೋದ್ರಿ ಭಾಷಣ ಬಿಡ್ರಿ ನೀರ್ ಕೊಡ್ರಿ ಎಂದ ರೈತನನ್ನು ಶಾಸಕರ ಬೆಂಬಲಿಗರು ಪೊಲೀಸರ ನೆರವಿನೊಂದಿಗೆ ಹೊರಹಾಕಿದ ಘಟನೆ ನಡೆಯಿತು.

KANNADA PRABHA / BELGAUM 19|8|2017

# ಕುಡಚಿ-ಬಾಗಲಕೋಟೆ ರೈಲ್ವೆ ಮಾರ್ಗಕ್ಕೆ ಒತ್ತಾಯ

## ಭೂಸ್ವಾಧೀನಕ್ಕೆ ಬೆಳಗಾವಿ, ಬಾಗಲಕೋಟೆ ಜಿಲ್ಲಾಧಿಕಾರಿಗಳ ಸಭೆ ನಡೆಸಿ: ಸಂಸದ ಪ್ರಕಾಶ ಹುಕ್ಕೇರಿ

• **ಕನ್ನಡಪ್ರಭ ವಾರ್ತೆ** ಚಿಕ್ಕೋಡಿ

ಕುಡಚಿ-ಬಾಗಲಕೋಟೆ ರೈಲ್ವೆ ಮಾರ್ಗವಾಗಬೇಕು. ಅದರ ಭೂಸ್ವಾಧೀನ ಕುರಿತು ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲಾಧಿಕಾರಿಗಳ ಸಭೆ ನಡೆಸುವಂತೆ ರೈಲ್ವೆ ಇಲಾಖೆ ಅಧಿಕಾರಿಗಳಿಗೆ ಸಂಸದ ಪ್ರಕಾಶ ಹುಕ್ಕೇರಿ ಒತ್ತಾಯಿಸಿದರು.

ತಾಲೂಕಿನ ಚಿಕ್ಕೋಡಿ ರೋಡ್ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ರೈಲ್ವೆ ಇಲಾಖೆ ಹಮ್ಮಿಕೊಂಡಿದ್ದ ಚಿಕ್ಕೋಡಿ ರೋಡ್ ಹೊಸ ರೈಲ್ವೆ ನಿಲ್ದಾಣದ ಕಟ್ಟಡ ಮತ್ತು ವಿಸ್ತರಿಸಿದ ಪ್ಲಾಟ್ ಫಾರ್ಮ್ ಚಾವಣಿ ಉದ್ಘಾಟನೆ, ರಾಯಬಾಗ ಸ್ಟೇಶನ್‌ನಲ್ಲಿ ವಿಸ್ತರಿಸಿದ ಪ್ಲಾಟ್ ಫಾರ್ಮ್ ಚಾವಣಿ ಉದ್ಘಾಟನೆ, ಲೋಂಡಾ-ಶವಥಾ ನ ಸೆಕ್ಷನ್ ಜೋಡಿ ಮಾರ್ಗ ರಾಷ್ಟ್ರಕ್ಕೆ ಸಮರ್ಪಣೆ ಮತ್ತು ಲೆವೆಲ್ ಕ್ರಾಸಿಂಗ್ ಸಂಖ್ಯೆ 438ರ ಬದಲಾಗಿ ರಸ್ತೆ ಮೇಲ್ಸೇತುವೆ ಕಾಮಗಾರಿಯ ಶುಭಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೈಲ್ವೆ ಅಧಿಕಾರಿಗಳು ಶಾಸಕರು ಮತ್ತು ಸಂಸದರಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡುತ್ತಿಲ್ಲ. ಜನರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ದೂರವಾಣಿ ಮೂಲಕ ಯಾವುದಾದರೊಂದು ಕೆಲಸ ಹೇಳಿದರೆ ಕೇಂದ್ರ ರೈಲ್ವೆ ಸಚಿವರಿಗೆ ಕೊಟ್ಟಿರುವ ಮನವಿ ಕಾಫೀ ಕೇಳುತ್ತಾರೆ. ಎಷ್ಟು ಬಾರಿ ಕೊಟ್ಟರೂ ಪ್ರತಿಬಾರಿ ಅದನ್ನೇ ಕೇಳುತ್ತಾರೆ. ನಾವು ಕೊಡುವ ಕಾಫಿಗಳನ್ನು ಕಸದ ಬುಟ್ಟಿಗೆ ಹಾಕುತ್ತೀರೋ ಎಂದು ರೈಲ್ವೆ ಇಲಾಖೆ ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಶಾಸಕ ದುರ್ಯೋಧನ ಐಹೊಳೆ ಮಾತನಾಡಿ, ಈ ಭಾಗದ ಜನರಿಗೆ ಬೆಂಗಳೂರಿಗೆ ಹೋಗಲು ತೊಂ



ಚಿಕ್ಕೋಡಿ ರೋಡ್ ರೈಲ್ವೆ ನಿಲ್ದಾಣದಲ್ಲಿ ಜರುಗಿದ ಹೊಸ ನಿಲ್ದಾಣ ಕಟ್ಟಡ ಮತ್ತು ವಿಸ್ತರಿಸಿದ ಪ್ಲಾಟ್ ಫಾರ್ಮ್ ಚಾವಣಿ ಉದ್ಘಾಟನಾ ಸಮಾರಂಭದಲ್ಲಿ ಸಂಸದ ಪ್ರಕಾಶ ಹುಕ್ಕೇರಿ ಮಾತನಾಡಿದರು.

ರೈಲ್ವೆ ಸಂಚಾರ ಆರಂಭಿಸುವಂತೆ ಒತ್ತಾಯಿಸಿದರು. ಚಿಕ್ಕೋಡಿ ರೋಡ, ಬಾಗೇವಾಡಿ, ಚಿಂಚಲಿ, ರಾಯಬಾಗ ಸೇರಿದಂತೆ ಈ ಭಾಗದ ರೈಲ್ವೆ ನಿಲ್ದಾಣಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯದಂತಹ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿದರು.

ಈ ಭಾಗದ ನಾಲ್ಕಾರು ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಸಲುವಾಗಿ ₹ 15 ಕೋಟಿ ವೆಚ್ಚದ ಕಾಮಗಾರಿ ಪೂರ್ಣಗೊಂಡಿದೆ. ಕಬ್ಬೂರ-ಜೋಡಟ್ಟಿ ರೈಲ್ವೆ ಮಾರ್ಗ ದಾಟಿಸುವ ಸಲುವಾಗಿ ಕಾಮಗಾರಿ ವಿಳಂಬವಾಗಿದೆ. ರೈಲ್ವೆ ಇಲಾಖೆ ಅಧಿಕಾರಿಗಳು ಬೇಗ ಅದಕ್ಕೆ ಅನುಮತಿ ನೀಡುವಂತೆ ಮನವಿ ಮಾಡಿದರು.

ನೀಡಿ 6 ತಿಂಗಳಾದರೂ ಕಾಮಗಾರಿ ಆರಂಭಗೊಂಡಿಲ್ಲ. ಇದರ ಬಗ್ಗೆ ರೈಲ್ವೆ ಇಲಾಖೆ ನಿರ್ಲಕ್ಷ್ಯ ವಹಿಸಿದೆ. ರೈಲ್ವೆ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು. ಬೇಗ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಕಂದಾಯ ಇಲಾಖೆ ಸಂಸದೀಯ ಕಾರ್ಯದರ್ಶಿ, ಶಾಸಕ ಗಣೇಶ ಹುಕ್ಕೇರಿ ಮಾತನಾಡಿ, ರೈಲ್ವೆ ಇಲಾಖೆ ಅಧಿಕಾರಿಗಳು ಜನರ ಸೇವಕರು ಎಂಬುದನ್ನು ತಿಳಿದುಕೊಳ್ಳಬೇಕು. ಪ್ರತಿ ರೈಲ್ವೆ ನಿಲ್ದಾಣವನ್ನೂ ಹೈಟೆಕ್ ಮಾಡಬೇಕು. ಮಿರಜದಿಂದ ಬೆಂಗಳೂರಿಗೆ ಇನ್ನೂ 2 ರೈಲ್ವೆ ಆರಂಭಿಸುವಂತೆ ಒತ್ತಾಯಿಸಿದರು. ಪವನ ಕತ್ತಿ, ಆರತಿ ಮುಂಡೆ, ಶಂಕರಗೌಡ ಪಾಟೀಲ, ಆರ್.ಸಿ.

VIJAYKARNATAKA/BELGAUM 19|8|2017

# ರೈಲ್ವೆ ಮಾರ್ಗ ಭೂಸ್ವಾಧೀನಕ್ಕೆ ಡಿಸಿಗಳ ಸಭೆ ನಡೆಸಿ

## ರೈಲ್ವೆ ಇಲಾಖೆ ಅಧಿಕಾರಿಗಳಿಗೆ ಸಂಸದ ಪ್ರಕಾಶ ಹುಕ್ಕೇರಿ ಆಗ್ರಹ । ಚಿಕ್ಕೋಡಿ ರಸ್ತೆ ರೈಲು ನಿಲ್ದಾಣದಲ್ಲಿ ನಾನಾ ಕಾಮಗಾರಿಗಳಿಗೆ ಚಾಲನೆ

■ ವಿಕ ಸುದ್ದಿಲೋಕ ಚಿಕ್ಕೋಡಿ

ಕುಡಚಿ-ಬಾಗಲಕೋಟ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಭೂಸ್ವಾಧೀನ ಮಾಡಿಕೊಳ್ಳಲು ಬೆಳಗಾವಿ ಮತ್ತು ಬಾಗಲಕೋಟ ಜಿಲ್ಲಾಧಿಕಾರಿಗಳ ಸಭೆ ನಡೆಸಿ ಎಂದು ರೈಲ್ವೆ ಇಲಾಖೆ ಅಧಿಕಾರಿಗಳಿಗೆ ಸಂಸದ ಪ್ರಕಾಶ ಹುಕ್ಕೇರಿ ಒತ್ತಾಯಿಸಿದರು.

ತಾಲೂಕಿನ ಚಿಕ್ಕೋಡಿ ರೋಡ್ ರೈಲು-ನಿಲ್ದಾಣದಲ್ಲಿ ಶುಕ್ರವಾರ ರೈಲ್ವೆ ಇಲಾಖೆ ಹಮ್ಮಿಕೊಂಡಿದ್ದ ಹೊಸ ರೈಲು ನಿಲ್ದಾಣ ಕಟ್ಟಡ ಮತ್ತು ವಿಸ್ತರಿಸಿದ ಪ್ಲಾಟ್‌ಫಾರ್ಮ್ ಭಾವಣಿ ಉದ್ಘಾಟನೆ, ರಾಯಬಾಗ ಸ್ಟೇಶನ್‌ನಲ್ಲಿ ವಿಸ್ತರಿಸಿದ ಪ್ಲಾಟ್‌ಫಾರ್ಮ್ ಭಾವಣಿ ಉದ್ಘಾಟನೆ, ಲೋಂಡಾ-ಶವಥಾನ ಸೆಕ್ಷನ್ ಜೋಡಿ ಮಾರ್ಗ ರಾಷ್ಟ್ರಕ್ಕೆ ಸಮರ್ಪಣೆ, ಲೆವೆಲ್ ಕ್ರಾಸಿಂಗ್ ಸಂಖ್ಯೆ 438ರ ಬದಲಾಗಿ ರಸ್ತೆ ಮೇಲ್ಸೇತುವೆ ಕಾಮಗಾರಿಯ ಶುಭಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೈಲ್ವೆ ಅಧಿಕಾರಿಗಳು ಶಾಸಕರು, ಸಂಸದರಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡುತ್ತಿಲ್ಲ, ದೂರವಾಣಿ ಮುಖಾಂತರ ಯಾವುದಾದರೂ ಕೆಲಸ ಹೇಳಿದರೆ ರೈಲ್ವೆ ಸಚಿವರಿಗೆ ಕೊಟ್ಟಿರುವ ಮನವಿಯ ಪ್ರತಿ ಕೇಳುತ್ತಾರೆ. ಎಷ್ಟು ಬಾರಿ ಕೊಟ್ಟರೂ ಪ್ರತಿ ಬಾರಿ ಅದನ್ನೇ ಕೇಳುತ್ತಾರೆ. ನಾವು ಕೊಡುವ ಮನವಿ ಪ್ರತಿಗಳನ್ನು ಎಲ್ಲಿ ಕಸದ ಬುಟ್ಟಿಗೆ ಹಾಕುತ್ತಾರೋ ಎಂದು ಸಂಸದರು ಕಿಡಿ ಕಾರಿದರು.

ಶಾಸಕ ದುರ್ಯೋಧನ ಐಹೊಳೆ ಮಾತನಾಡಿ, ಈ ಭಾಗದ ಜನರಿಗೆ ಬೆಂಗಳೂರಿಗೆ ಹೋಗಲು ತೊಂದರೆಯಾಗುತ್ತಿದ್ದು, ಮಿರಜ-ಬೆಂಗಳೂರು ಮಾರ್ಗದಲ್ಲಿ ಮತ್ತೊಂದು ರೈಲು ಸಂಚಾರ ಆರಂಭಿಸಿ. ಚಿಕ್ಕೋಡಿ ರೋಡ್, ಬಾಗೇವಾಡಿ, ಚಿಂಚಲಿ, ರಾಯಬಾಗ ಸೇರಿದಂತೆ ಈ ಭಾಗದ ರೈಲು ನಿಲ್ದಾಣಗಳಲ್ಲಿ ಕುಡಿಯುವ ನೀರು, ಶೌಚಾಲಯದಂತಹ ಮೂಲ ಸೌಕರ್ಯ ಕಲ್ಪಿಸಿ ಎಂದು ಅಧಿಕಾರಿಗಳಿಗೆ ಒತ್ತಾಯಿಸಿದರು.

ಈ ಭಾಗದ ನಾಲ್ಕಾರು ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ 15 ಕೋಟಿ ರೂ. ವೆಚ್ಚದ ಕಾಮಗಾರಿ ಪೂರ್ಣಗೊಂಡಿದೆ. ಕಬ್ಬೂರ-ಜೋಡಟ್ಟಿ ರೈಲ್ವೆ ಮಾರ್ಗ ದಾಟಿಸುವ ಸಲುವಾಗಿ ಕಾಮಗಾರಿ ವಿಳಂಬವಾಗಿದೆ. ರೈಲ್ವೆ ಅಧಿಕಾರಿಗಳು ಬೇಗ ಇದಕ್ಕೆ ಅನುಮತಿ ನೀಡಬೇಕು. ರಾಯಬಾಗ ಮೇಲ್ಸೇತುವೆ ಕಾಮಗಾರಿಗೆ ಚಾಲನೆ ನೀಡಿ 6 ತಿಂಗಳಾದರೂ ಆರಂಭಗೊಂಡಿಲ್ಲ, ಕೂಡಲೇ ಕಾಮಗಾರಿ ಪೂರ್ಣಗೊಳಿಸಿ ಜನರಿಗೆ ಅನುಕೂಲ ಮಾಡಿ ಎಂದು ಅವರು ಆಗ್ರಹಿಸಿದರು.

**ಹೈಟೆಕ್ ನಿಲ್ದಾಣ ಮಾಡಿ:** ಶಾಸಕ, ಕಂದಾಯ ಇಲಾಖೆಯ ಸಂಸದೀಯ ಕಾರ್ಯದರ್ಶಿ ಗಣೇಶ ಹುಕ್ಕೇರಿ ಮಾತನಾಡಿ, ಪ್ರತಿಯೊಂದು ರೈಲು ನಿಲ್ದಾಣವನ್ನೂ ಹೈಟೆಕ್ ಮಾಡಬೇಕು. ಮಿರಜದಿಂದ ಬೆಂಗಳೂರಿಗೆ ಇನ್ನೂ ಎರಡು ರೈಲು ಸಂಚಾರ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಜಿಪಂ ಸದಸ್ಯ ಪವನ ಕತ್ತಿ, ಪುರಸಭೆ ಅಧ್ಯಕ್ಷೆ ಆರತಿ ಮುಂಡೆ, ತಾಪಂ ಸದಸ್ಯ ಶಂಕರಗೌಡ ಪಾಟೀಲ, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಆರ್.ಸಿ. ಪುನೀತ್, ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ರಾಜಪ್ಪ, ವಿಭಾಗೀಯ ವಿದ್ಯುತ್ ಅಭಿಯಂತರ ರಾಜೀವ ಶರ್ಮಾ, ವಿಭಾಗೀಯ ಅಭಿಯಂತರ ಗುರುಸ್ವಾಮಿ, ತಹಸೀಲ್ದಾರ ಸಿ.ಎಸ್. ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು.



ಚಿಕ್ಕೋಡಿ ರೋಡ್ ರೈಲು ನಿಲ್ದಾಣದಲ್ಲಿ ಜರುಗಿದ ಹೊಸ ನಿಲ್ದಾಣ ಕಟ್ಟಡ ಮತ್ತು ವಿಸ್ತರಿಸಿದ ಪ್ಲಾಟ್ ಫಾರ್ಮ್ ಭಾವಣಿ ಉದ್ಘಾಟನೆ ಸಮಾರಂಭದಲ್ಲಿ ಸಂಸದ ಪ್ರಕಾಶ ಹುಕ್ಕೇರಿ ಮಾತನಾಡಿದರು.

## ರೈಲ್ವೆ ಅಧಿಕಾರಿಗಳ ವಿರುದ್ಧ ಶಾಸಕರು, ಸಂಸದರ ಆಕ್ರೋಶ

ಚಿಕ್ಕೋಡಿ ರೋಡ್ ಹೊಸ ರೈಲು ನಿಲ್ದಾಣದಲ್ಲಿ ಅಳವಡಿಸಿದ ಶಂಕುಸ್ಥಾಪನಾ ಫಲಕದಲ್ಲಿ ತಮ್ಮ ಹೆಸರು ಹಾಕದಿರುವುದಕ್ಕೆ ಶಾಸಕ ದುರ್ಯೋಧನ ಐಹೊಳೆ ರೈಲ್ವೆ ಅಧಿಕಾರಿಗಳನ್ನು ತೀವ್ರ ತರಾಟೆ ತೆಗೆದುಕೊಂಡರು.

ಯಾವುದೇ ಸರಕಾರಿ ಕಾರ್ಯಕ್ರಮ ನಡೆದರೂ ಅದಕ್ಕೆ ಆಯಾ ಭಾಗದ ಶಾಸಕರೇ ಅಧ್ಯಕ್ಷತೆ ವಹಿಸುವುದು ನಿಯಮ. ಆದರೆ ಇಲ್ಲಿ ಅದ್ಯಾವುದೂ ಸಂಬಂಧವಿಲ್ಲದಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಶಾಸಕ ಗಣೇಶ ಹುಕ್ಕೇರಿ, ಸಂಸದ ಪ್ರಕಾಶ ಹುಕ್ಕೇರಿ ಸಹ ರೈಲ್ವೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಸರಕಾರದ ಶಿಷ್ಟಾಚಾರ ಪಾಲಿಸುವುದು ಅಧಿಕಾರಿಗಳ ಕರ್ತವ್ಯ. ನಿಯಮ ಪಾಲಿಸದಿದ್ದರೆ ಇಲ್ಲಿಂದ ವರ್ಗಾವಣೆ ಮಾಡಿಸಿಕೊಂಡು ಹೋಗಿ ಎಂದು ಪ್ರಕಾಶ ಹುಕ್ಕೇರಿ ಹೇಳಿದರು. ಶಂಕುಸ್ಥಾಪನೆ ಫಲಕದಲ್ಲಿ ನನ್ನ ಹೆಸರು ಹಾಕದಿರುವುದು ತುಂಬಾ ನೋವುಂಟು ಮಾಡಿದೆ. ನಾನು ಈ ಕಾರ್ಯಕ್ರಮದಲ್ಲಿ ಇರುವುದಿಲ್ಲ, ನೀವೆ ಮಾಡಿಕೊಳ್ಳಿ ಎಂದು ದುರ್ಯೋಧನ ಐಹೊಳೆ ವೇದಿಕೆಯಿಂದ ಹೊರಗೆ ನಡೆದಿದ್ದರು. ಆ ಸಂದರ್ಭದಲ್ಲಿ ಸಂಸದ ಪ್ರಕಾಶ ಹುಕ್ಕೇರಿ ಅವರು, ಅಧಿಕಾರಿಗಳು ತಮ್ಮ ತಪ್ಪು ಒಪ್ಪಿಕೊಂಡು ಶಾಸಕರಲ್ಲಿ ಕ್ಷಮೆಯಾಚಿಸುವಂತೆ ಹೇಳಿದರು. ಜನಪ್ರತಿನಿಧಿಗಳಿಗೆ ಗೌರವ ನೀಡದ ರೈಲ್ವೆ ಅಧಿಕಾರಿಗಳ ವಿರುದ್ಧ ಲೋಕಸಭೆಯಲ್ಲಿ ಪ್ರಸ್ತಾಪಿಸಲಾಗುವುದು ಎಂದು ಎಚ್ಚರಿಸಿದರು.



ಚಿಕ್ಕೋಡಿ ರೋಡ್ ರೈಲು ನಿಲ್ದಾಣದ ಹೊಸ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ರೈಲ್ವೆ ಇಲಾಖೆ ಅಧಿಕಾರಿಗಳನ್ನು ಶಾಸಕ ದುರ್ಯೋಧನ ಐಹೊಳೆ ತರಾಟೆ ತೆಗೆದುಕೊಂಡರು.



चिक्कोडी : येथे रेल्वे खात्याच्या विविध विकासकामांच्या उदघाटन कार्यक्रमात बोलताना खासदार प्रकाश हुक्केरी. शेजारी पवन कत्ती, आरती मुंडे, आमदार गणेश हुक्केरी, आम. दुर्योधन ऐहोळे, आर. सी. पुनित, राजाप्पा व इतर.

# चिक्कोडी, रायबागला प्लॅटफॉर्मचे उदघाटन

## रेल्वेमंत्र्यांकडून व्हिडिओ कॉन्फरन्सद्वारे प्रारंभ

**सकाळ वृत्तसेवा**

चिक्कोडी, ता. १८ : चिक्कोडी रोड नवीन रेल्वे स्थानक, विस्तारित प्लॅटफॉर्म, रायबाग स्टेशनमधील विस्तारित प्लॅटफॉर्मचे उद्घाटन व लोंढा शिवनाथ सेक्शन दुपदरी मार्गाचे लोकार्पण शुक्रवारी (ता. १८) सकाळी रेल्वेमंत्री सुरेश प्रभू यांनी दिल्ली येथील रेल्वे मुख्यालयातून व्हिडिओ कॉन्फरसिंगव्दारे केले. चिक्कोडी येथील रेल्वे स्थानकावर आयोजित करण्यात आलेल्या कार्यक्रमात स्थानिक खासदार व आमदार उपस्थित होते.

खासदार प्रकाश हुक्केरी म्हणाले, "९ गावांना उपयोगी असलेल्या बागेवाडी येथील रेल्वेस्थानकाचा विकास करण्याची गरज आहे. कुडची व घटप्रभा रेल्वे स्थानकांचाही टप्प्याटप्प्याने विकास करण्यात यावा. आपण रेल्वेमंत्री सुरेश प्रभू यांची भेट घेऊन त्याबाबत सांगितले आहे. पण अधिकाऱ्यांच्या दुर्लक्षामुळे हा प्रस्ताव रखडला असून अधिवेशन काळात लोकसभेत हा विषय मांडणार आहोत. तत्कालीन रेल्वेमंत्री मल्लिकार्जुन खर्गे यांनी बागलकोट-कुडची रेल्वे मार्गासाठी ७०० कोटीचा निधी मंजूर केला होता. पण त्यातून केवळ ३५ किलोमीटर पर्यंतचे काम झाले आहे. उर्वरित काम करण्याची मागणी केली आहे."

आमदार गणेश हुक्केरी यांनी, या भागातील नागरिकांना बंगळूरला जाण्यासाठी त्रास होत आहे. प्रत्येक स्थानकावर मूलभूत सुविधा व मिरज-बंगळूर मार्गावर दोन गाड्या वाढविण्याची मागणी केली. या वेळी आमदार दुर्योधन ऐहोळे, दक्षिण-मध्य रेल्वे हुबळी विभागाचे अतिरिक्त विभागीय व्यवस्थापक आर. सी. पुनित, व्यवस्थापक राजाप्पा, जिल्हा पंचायत सदस्य पवन कत्ती, चिक्कोडीच्या नगराध्यक्षा आरती मुंडे उपस्थित होत्या.

**फलकावरच्या नावासाठी आमदार रुसले**

चिक्कोडी रोड रेल्वे स्थानकावर आयोजित कार्यक्रमास अनेक मंत्री व खासदारांची नावे होती. पण त्यापैकी काही मोजकेच नेते उपस्थित होते. कार्यक्रमाचे अध्यक्षस्थान भूषविलेल्या रायबागचे आमदार दुर्योधन ऐहोळे यांचे नाव फलकावर लावण्यात आले नव्हते. त्यामुळे त्यांनी अर्ध्यावरच कार्यक्रम सोडून जाण्याचा पवित्रा घेतला. त्यांना साथ देत खासदार प्रकाश हुक्केरी व आमदार गणेश हुक्केरी यांनीही आमदारांना दुर्लक्षित करण्यात आल्याचा आरोप अधिकाऱ्यांवर केला. अधिकाऱ्यांनी फलकावर नावे घालण्याचे आश्वासन दिल्याने वादावर पडदा पडला.





**श्रीगुरू बालाजी तांबे**

**अध्याय १३ वा श्लोक १७**

**ज्योतिषामपि तज्ज्योतिस्तमसः परमुच्यते।**
**ज्ञानं ज्ञेयं ज्ञानगम्यं हृदि सर्वस्य विष्ठितम् ।।**

ज्योतीचीही ज्योत, तत्त्वज्ञानाने प्राप्त असा बोधस्वरूप परमात्मा आहे. मायेच्या पलीकडे असलेला तो सर्वांच्या हृदयात स्थित आहे. गुजरातमध्ये श्री रंगावधूत महाराज होऊन गेले. त्यांनी एक सुंदर भजन लिहिले. 'सर्वव्यापी नारायण कैसे करू मी आवाहन। अंतर्बाह्य सच्चिदघन कैसे करू मी ध्यान।।' हा जो परमात्मा आहे, तो आत आणि बाहेर सगळीकडे आहे. सूर्य, चंद्रापासून आपल्याला मिळणारे तेज हे त्याचेच आहे आणि हा सर्वव्यापी नारायण सर्वांच्या हृदयात बसलेला आहे. हा नारायण आत आणि बाहेर असा सर्वज्ञ आहे. बाहेर आपल्याला वस्तू दिसायला लागल्या आणि त्या भोगाच्या साधन आहेत, असे वाटायला लागले तर मायेचा प्रभाव वाढू लागतो. या वस्तू त्यानेच तयार केल्या आहेत. हे विश्व त्याचीच निर्मिती आहे. म्हणून त्यालाच जाणून घेऊ यात हे ज्याला कळते, त्यालाच तो परमात्मा दिसतो, त्यालाच तो भेटतो. तोच परब्रह्म प्राप्ती करून घेतो. ज्याचे अंतःकरण शुद्ध आहे तिथेच तो वसणार आहे. ज्याचे अंतःकरण शुद्ध नाही त्याच्या हृदयात तो बसलेला नाही. परमेश्वराला प्रेमानेच प्राप्त करता येते. त्याला दिवा लावावा लागत नाही. सूर्य, चंद्राला जो प्रकाश देतो त्याला दिवा लावण्याची गरज नाही. भक्तिभावाने आणि ऐक्यभावनेने त्याची आराधना केली पाहिजे, तरच ब्रह्मप्राप्ती होणार आहे. परमात्मा सर्वव्यापी आहे आणि त्याचा बोध होतो. आपल्याला प्रकाश असलेल्या इंद्रियांनी तो पाहता येणार नाही; पण त्याचा बोध करून घेतला पाहिजे. तत्त्वज्ञानाने त्याला प्राप्त करून घ्यायचा आहे आणि मग तो हृदयात बसेल आणि ब्रह्मप्राप्ती होऊ शकेल.

**(श्रीगुरू बालाजी तांबे यांनी केलेल्या निरूपणाचा हा सारांश आहे. हे निरूपण विस्ताराने पाहा 'श्री गीतायोग : Version २०१२' या संग्रहित कार्यक्रमात 'साम टीव्ही' वाहिनीवर आज (ता. १९ ऑगस्ट) सकाळी ७.३० आणि सायंकाळी ५.३० वाजता. श्रीगुरू तांबे यांनी ट्विटरवरून केलेल्या मार्गदर्शनासाठी @shribalajitambe हा टॅग वापरा, तर फेसबुकवर Shreeguru Balaji Tambe हा अकाउंट पाहा.)**

PUDHARI / BELGAUM 19/8

# रेल्वेकडून बेदखल मागण्या संसदेत मांडणार

## खा. प्रकाश हुक्केरी : चिकोडी रोड रेल्वे स्टेशन इमारतीचे उद्‌घाटन

**चिकोडी : प्रतिनिधी**

रेल्वे खात्याकडे अनेक मागण्या आणि स्टेशन्स विकासासाठीचा मुद्दा मांडण्यात आला. याला रेल्वेमंत्री सुरेश प्रभू यांनी तत्वत: मान्यता दिली. पण येथील अधिकारी याची दखल घेत नाहीत, असा आरोप करून हा विषय संसदेत उपस्थित करणार असल्याचे खा. प्रकाश हुक्केरी यांनी सांगितले.

रेल्वे खात्याने चिकोडी रोड रेल्वे स्टेशन परिसरातील शेतकऱ्यांना रेल्वे ट्रॅकच्या खालून पाण्याच्या पाईपलाईन टाकण्याची परवानगी त्वरित द्यावी. ९ गावांना उपयोगी होणाऱ्या बागेवाडी रेल्वे स्टेशनमध्ये प्लॅटफॉर्म व इतर विकासकामे करण्यात यावीत. कुडची, घटप्रभासह सर्व स्टेशन्सचा विकास टप्प्याटप्प्याने करण्यात यावा. या संदर्भात रेल्वेमंत्री सुरेश प्रभूंची भेट घेतली असता त्यांनी निधी देण्याचे [illegible] आहे. याविषयी रेल्वे



चिकोडी : रेल्वे स्टेशन येथे कार्यक्रमात बोलताना खासदार प्रकाश हुक्केरी. शेजारी इतर मान्यवर.

खात्याच्या कार्यालयात गेल्यानंतर मात्र अधिकारी प्रत्येकवेळी कॉपी द्या, असे सांगत असतात. हे अधिकारी आमदार, खासदारांची दखल घेत नसून यांना शेतकरी व नागरिकांच्या समस्येविषयी काहीही देणे घेणे नसल्याचा आरोप करून संसदेत आवाज उठविणार असल्याचे हुक्केरी यांनी सांगितले.

तालुक्यातील चिकोडी रोड रेल्वे स्टेशन येथे आयोजित रेल्वे स्टेशनच्या नव्या इमारतीचे व प्लॅटफॉर्मचे, रायबाग प्लॅटफॉर्मच्या उद्‌घाटनासह लोंढा-शिवठाण रेल्वे दुपदरी मार्गाच्या लोकार्पण कार्यक्रमात ते बोलत होते. नवी दिल्ली येथून रेल्वेमंत्री सुरेश प्रभू यांनी व्हिडीओ कॉन्फरन्सिंगद्वारे चिकोडी, रायबागसह लोंढा दुपदरी मार्गाचे उद्‌घाटन फीत कापून केले.

खासदार हुक्केरी म्हणाले तत्कालीन रेल्वेमंत्री मल्लिकार्जुन खर्गे यांनी बागलकोट-कुडची रेल्वेमार्गासाठी ७०० कोटी मंजूर केले होते. पण केवळ ३५ कि.मी.पर्यंतचे काम झाले असून उर्वरित करण्यात यावे. कोल्हापूर येथे दोन महिन्यांपूर्वी पुणे-मिरज-लोंढा मार्गाच्या दुपदरीकरणाच्या कामाचे भूमिपूजन करण्यात आले असता पुन्हा येथे याच लोंढा मार्गाचे उद्‌घाटन का?

आमदार गणेश हुक्केरी म्हणाले या भागातून लोकांना बंगळूरला जाण्यासाठी अनेक समस्यांचा सामना करावा लागतो. मिरजेहून बंगळूरला जाण्यासाठी २ रेलगाड्या सुरू करण्याची मागणी केली. सर्वच रेल्वे स्टेशनवर प्लॅटफॉर्म, पिण्याचे पाणी आदी सुविधा रेल्वे खात्याने पुरवून हायटेक रेल्वे स्थानकांची निर्मिती करावी.

रायबागचे आमदार दुर्योधन ऐहोळे म्हणाले रेल्वे खात्याने मिरापूरहट्टी येथील शेतकऱ्यांना जलवाहिनी घेण्यास परवानगी द्यावी. रेल्वे लाईनच्या शेजारच्या सर्व रस्त्यांची अवस्था दयनीय असून रेल्वे खात्याने काम करावे. परिसरातील रस्त्यांसाठी ५० लाखांचा निधी मंजूर केला आहे. दक्षिण रेल्वे विभागाचे हुबळी विभागाचे अतिरिक्त विभागीय रेल्वे व्यवस्थापक आर. सी. पुनित, विभागीय कमर्शिअल व्यवस्थापक राजप्पा, जि. पं. सदस्य पवन कत्ती, चिकोडीच्या नगराध्यक्षा आरती मुंडे यांच्यासह इतर मान्यवर उपस्थित होते.

DINAKARAN IBNG
19 AUG 2017

# ரயில்நிலையத்தில் விவிஜபி ஓய்வறை திறப்பு



ஷிவமொக்கா ரயில் நிலையத்தில் நடந்த விவிஜபி ஓய்வறை திறப்பு விழாவில் மேலவை தலைவர் சங்கரமூர்த்தி, மேயர் ஏழுமலை, எம்எல்சி பானுபிரகாஷ் உள்ளிட்ட பலர் கலந்து கொண்டனர்.

15 AUG 2017
उदय वाणी / मणिपाल
UDAY VANI/MANIPAL

## ವಿವಿಧ ರೈಲ್ವೆ ಕಾಮಗಾರಿಗೆ 18ರಂದು ಚಾಲನೆ

ಹುಬ್ಬಳ್ಳಿ: ಕೇಂದ್ರ ರೈಲ್ವೆ ಸಚಿವ ಸುರೇಶ ಪ್ರಭು ಆ. 18 ರಂದು ಮಧ್ಯಾಹ್ನ 12 ಗಂಟೆಗೆ ಗೋವಾದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ವಿವಿಧ ರೈಲ್ವೆ ಕಾಮಗಾರಿಗೆ ಚಾಲನೆ ನೀಡಲಿದ್ದಾರೆ. ಗದಗ-ಕೂಡಗಿ-ಹೊಟಗಿ (284 ಕಿಮೀ) ಡಬ್ಲಿಂಗ್ ಯೋಜನೆಗೆ ಸಚಿವರು ಶಂಕುಸ್ಥಾಪನೆ ನೆರವೇರಿಸುವರು. ಗದಗ-ವಾಡಿ (257 ಕಿ.ಮೀ) ರೈಲ್ವೆ ಲೈನ್ ಯೋಜನೆಗೆ ಚಾಲನೆ ನೀಡುವರು. ಗದಗ ರೈಲ್ವೆ ನಿಲ್ದಾಣದ ನೂತನ ಪ್ಲಾಟ್‌ಫಾರ್ಮ್ ಶೆಲ್ಟರ್ ಉದ್ಘಾಟಿಸುವರು. ಚಿಕ್ಕೋಡಿ ರೋಡ್ ನಿಲ್ದಾಣದಲ್ಲಿ ಹೊಸ ನಿಲ್ದಾಣ ಕಟ್ಟಡ, ಕೊಪ್ಪಳ ರೈಲ್ವೆ ನಿಲ್ದಾಣದ 2 ಹಾಗೂ 3ನೇ ಪ್ಲಾಟ್‌ಫಾರ್ಮ್ ಹಾಗೂ ರಾಯಬಾಗ ನಿಲ್ದಾಣದಲ್ಲಿ ವಿಸ್ತೃತ ಪ್ಲಾಟ್‌ಫಾರ್ಮ್ ಶೆಲ್ಟರ್ ಉದ್ಘಾಟಿಸುವರು ಎಂದು ನೈಋತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

प्रजा वाणी/हुबली
PRAJA VANI/HUBLI.
16 AUG 2017

## ರೈಲ್ವೆ ಕಾಮಗಾರಿಗೆ 18ರಂದು ಚಾಲನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಟಗಿ, ಕೂಡಗಿ, ಗದಗ ನಡುವಿನ 248 ಕಿ.ಮೀ. ದೂರದ ಜೋಡಿ ಮಾರ್ಗ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ರೈಲ್ವೆ ಸಚಿವ ಸುರೇಶ ಪ್ರಭು ಇದೇ 18ರಂದು ಚಾಲನೆ ನೀಡಲಿದ್ದಾರೆ.

ಗೋವಾದಲ್ಲಿ ಅಂದು ಮಧ್ಯಾಹ್ನ 12ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಅವರು ಚಾಲನೆ ನೀಡಲಿದ್ದಾರೆ ಎಂದು ನೈರುತ್ಯ ರೈಲ್ವೆ ಇಲಾಖೆ ಪ್ರಕಟಣೆ ತಿಳಿಸಿದೆ.

ಚಿಕ್ಕೋಡಿಯಲ್ಲಿ ನಿರ್ಮಿಸಲಾಗಿರುವ ಹೊಸ ರೈಲು ನಿಲ್ದಾಣದ ಉದ್ಘಾಟನೆ, ಚಿಕ್ಕೋಡಿ ಮತ್ತು ರಾಯಭಾಗದಲ್ಲಿ ಪ್ಲಾಟ್‌ಫಾರ್ಮ್ ಶೆಲ್ಟರ್ ವಿಸ್ತರಣೆ, ಗದಗ-ವಾಡಿ ನೂತನ ರೈಲುಮಾರ್ಗ ಕಾಮಗಾರಿ ಸೇರಿದಂತೆ ಇತರ ಕಾರ್ಯಕ್ರಮಗಳು ನಡೆಯಲಿವೆ.

ಸ್ಥಳೀಯವಾಗಿಯೂ ಆಯಾ ನಿಲ್ದಾಣಗಳಲ್ಲಿ ಕಾರ್ಯಕ್ರಮ ಜರುಗಲಿವೆ ಎಂದು ಇಲಾಖೆ ಪ್ರಕಟಣೆ ಹೇಳಿದೆ. ಬಾಣಾಪುರ ಮತ್ತು ಕೊಪ್ಪಳ ನಡುವೆ ಜೋಡಿಮಾರ್ಗ ಸಂಚಾರಕ್ಕೆ ಮುಕ್ತವಾಗಲಿದೆ.

ಹೊಸಪೇಟೆ, ಹುಬ್ಬಳ್ಳಿ, ಲೊಂಡಾ, ತಿನೈಘಾಟ್ ಮತ್ತು ವಾಸ್ಕೊ ಮಾರ್ಗದಲ್ಲಿ ಜೋಡಿಮಾರ್ಗದ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಇದರ ಪೈಕಿ ಲೊಂಡಾ-ಶಿವಾತನ್ ನಡುವಿನ ಕಾಮಗಾರಿ ಪೂರ್ಣಗೊಂಡಿದ್ದು ಇದರ ಲೋಕಾರ್ಪಣೆ ಕೂಡ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

News is about Hon'ble MR will inaugurate various works

राजस्थान पत्रीका/बेंगलूर
RAJASTHAN PATRIKA/BANGALORE
18 AUG 2017

# प्रगति के पथ पर मजबूत कदम



नरेन्द्र मोदी
प्रधानमंत्री

## सुरेश प्रभाकर प्रभु
रेल मंत्री

के कर कमलों से

(रिमोट लिंक के जरिए)

## रेल बोगी कारखाना, यादगीर, कर्नाटक
का शुभारंभ

और

## बाईपास रेलवे लाइन, वाडी, कर्नाटक
का शिलान्यास

**समय : 12:00 बजे 18 अगस्त, 2017 स्थान: रेल बोगी कारखाना, यादगीर, कर्नाटक**

### विशिष्ट अतिथि

**डी. वी. सदानंद गौड**
केंद्रीय मंत्री, सांख्यकीय एवं कार्यक्रम कार्यान्वयन

**अनंत कुमार**
केंद्रीय मंत्री, रसायन व ऊर्वरक एंव संसदीय मामले

**निर्मला सीतारामन**
केंद्रीय राज्य मंत्री (स्वतंत्र प्रभार) वाणिज्य एवं उद्योग

**रमेश चंदप्पा जिगजिनागी**
केंद्रीय राज्य मंत्री पेयजल एवं स्वच्छता

**डॉ. मल्लिकार्जुन खरगे**
सांसद लोकसभा कलबुर्गी

### माननीय अतिथि

**डॉ. शरणप्रकाश पाटील**
मंत्री, आर्युविज्ञान शिक्षा और कलबुर्गी जिला प्रभारी मंत्री, कर्नाटक सरकार

**आर. वी. देशपांडे**
मंत्री, वाणिज्य एवं उद्योग विभाग के भारी और मध्यम उद्योग तथा बुनियादी ढांचा विकास विभाग, कर्नाटक सरकार

**प्रियांक खरगे**
मंत्री, आईटी, बीटी व पर्यटन, (स्वतंत्र प्रभार) और यादगीर जिला प्रभारी, कर्नाटक सरकार

**बसारेड्डीगौडा माली पाटील अनापुर**
अध्यक्ष, जिला पंचायत, यादगीर

**सुवर्णा हनुमंत मालाजी**
अध्यक्षा, जिला पंचायत, कलबुर्गी

**डॉ. बसवराज पाटील**
संसद सदस्य (राज्य सभा)

**बी. वी. नायक**
संसद सदस्य, रायचूर

रेल बोगी कारखाना, यादगीर आधुनिक एलएचबी रेल कोचों के लिए प्रति वर्ष 80 करोड़ की लागत पर 600 एफआईएटी बोगी फ्रेम के निर्माण के लिए स्थापित किया गया।




वाडी जंक्शन पर बिछाई जा रही नई बाईपास रेलवे लाइन सिकंदराबाद की बाहरी सीमा पर सिकंदराबाद साइड को गुंतकल साइड से जोड़ेगी जिससे सभी दिशाओं में गाड़ी संचलन में सुविधा होगी।

PUB 0825 A1172

## दक्षिण मध्य रेलवे

www.scr.indianrailways.gov.in
South Central Railway-S.C.R
SCRailwayIndia

रेल विकास निगम लिमिटेड
Rail Vikas Nigam Limited

## सभी का स्वागत है

विजय वाणी/ हुब्बल्लि
Vijaya Vani/ Hubballi
18 AUG 2017





# INDIAN RAILWAYS

## dedicated to passenger facilitation & connectivity

### DEDICATION TO THE NATION



- Doubling - Hospet (Karnataka) & Tinaighat - Vasco (Goa)
- Electronic Interlocking Systems - Shivathan (Karnataka) & Tinaighat (Karnataka)
- Foot Over Bridge - Holenarasipur (Karnataka)

### COMMENCEMENT & COMMISSIONING

- Doubling - Hotgi (Maharashtra) & Kudgi - Gadag (Karnataka)
- New Line - Gadag - Wadi (Karnataka)
- Rail Bogie Karkhana - Yadgir (Karnataka)



### INAUGURATION



- New Station Building & Extension of Platform Shelter - Chikkodi (Karnataka)
- Platform shelter on PF-2 at Gadag (Karnataka)
- New Platform - 2 & 3 at Koppal (Karnataka)
- VIP lounge - Shivamogga (Karnataka)
- 500 Kwp Solar Roof-Mysuru (Karnataka)
- Water Conservation & Recycling Plant - Mysuru (Karnataka)
- New DEMU between Baiyappanahalli - Whitefield (Karnataka)

### LAYING OF FOUNDATION STONE

- Bye-pass lines - Wadi (Karnataka)
- Doubling between Nethravathi (Karnataka) & Mangalore (Karnataka)
- New FOB - Mangalore (Karnataka)




**Inauguration**
by
**Suresh Prabhakar Prabhu**
Minister of Railways

In the august presence of

**Manoj Sinha**
MoS (IC) Ministry of Communications,
MoS, Ministry of Railways

**Rajen Gohain**
MoS, Ministry of Railways

**On 18th August, 2017, at Rail Bhawan, New Delhi, through Video Conferencing**

Follow us on /RailMinIndia

भारतीय रेल INDIAN RAILWAYS

69

15 AUG 2017
दक्षिण भारत राष्ट्रमत/बेंगलूर.
DAKSHIN BHARAT RASHTRA MATH/SBC

# बायप्पनहल्ली से व्हाइटफील्ड के बीच डीएमयू सेवा 18 से

» ट्रैफिक में नहीं पड़ेगा जूझना, मात्र 15 मिनट में पूरा होगा सफर

**बेंगलूरु।** उपनगरीय रेलसेवा की ओर एक और कदम बढाते हुए 18 अगस्त से बायप्पनहल्ली से व्हाइटफील्ड के बीच ट्रेन सेवा की शुरुआत हो रही है। इस ट्रेन सेवा की शुरुआत इसलिए बेहद खास है कि क्योंकि बायप्पनहल्ली के आगे की यात्रा के लिए यात्री नम्मा मेट्रो का इस्तेमाल कर सकेंगे जबकि व्हाइटफील्ड क्षेत्र में काम करने वाले हजारों आईटी एवं कॉरपोरेट पेशवरों को घंटों को ट्रैफिक में सड़क पर जूझना नहीं पड़ेगा।

बेंगलूरु मध्य संसदीय क्षेत्र के भाजपा सांसद पी.सी. मोहन ने ट्रेन सेवा की पुष्टि करते हुए कहा कि बेंगलूरु के सबसे व्यस्ततम ट्रैफिक वाले रुट में केआर पुरम से व्हाइटफील्ड का सड़क मार्ग है। इस रुट पर अब मेट्रो निर्माण का काम शुरु हो चुका है इसलिए अगले कुछ वर्षों तक ट्रैफिक की परेशानी और ज्यादा बढने की संभावना है। ऐसे में बायप्पनहल्ली से व्हाइटफील्ड के बीच उपनगरीय रेल सेवा की शुरुआत होने से रोजाना सफर करने वाले हजारों मुसाफिरों को इसका फायदा होगा और वे रेल एवं मेट्रो सेवाओं को लाभ एक साथ ले सकेंगे।

18 अगस्त को केन्द्रीय रेल मंत्री सुरेश प्रभु गोवा से वीडियो कॉन्फ्रेंसिंग के माध्यम से बायप्पनहल्ली से व्हाइटफील्ड ट्रेन सेवा की आधिकारिक शुरुआत करेंगे। मोहन ने कहा कि ट्रेन की समयसारणी एवं फेरों की सूचना बाद में घोषित की जाएगी। उन्होंने कहा कि आईटीपीएल, व्हाइटफील्ड और आसपास के क्षेत्रों के लोगों की मांग थी कि मेट्रो निर्माण शुरु होने के कारण संभावित ट्रैफिक जाम की समस्या के बढने के मद्देनजर उपनगरीय रेल सेवा की शुरुआत की जाए। उन्होंने कहा कि बायप्पनहल्ली से व्हाइटफील्ड के बीच ट्रेन सेवा शुरु होने से मात्र 15 मिनट में पूरा सफर हो जाएगा जिसके लिए अभी यात्रियों को सड़क मार्ग से घंटों तक ट्रैफिक से जूझना पड़ता है। इस रुट पर चार स्टेशन बायप्पनहल्ली, केआरपुरम, हूडी और व्हाइटफील्ड आएंगे। प्राप्त जानकारी के अनुसार 18 अगस्त से बायप्पनहल्ली से व्हाइटफील्ड के बीच एक डीएमयू ट्रेन चलेगी जिसका उद्घाटन वीडियो कॉन्फ्रेंसिंग के जरिए सुरेश प्रभु करेंगे। गौरतलब है कि व्हाइटफील्ड सिटीजन ग्रुप की ओर से मांग की जा रही थी कि मेट्रो निर्माण के लिए सड़कों पर खुदाई कार्य शुरु करने के पूर्व आम लोगों की सुविधा के लिए वैकल्पिक परिवहन व्यवस्था की जाए जिसमें उपनगरीय रेल सेवा की मांग भी शामिल थी।

टाइम्स आफ इंडिया/बेंगलूर
THE TIMES OF INDIA/BANGALORE
12 AUG 2017

# Minister Suresh Prabhu to inaugurate rail bogie factory on Aug 18

TIMES NEWS NETWORK

**Kalaburagi:** More than three years after then Union railway minister M Mallikarjun Kharge laid the foundation stone for the train bogie factory at Kadechur and Badiyal villages in Yadgir, the unit is all set to be inaugurated on August 18.

Union railway minister Suresh Prabhu will inaugurate the Fiat Rail Bogie factory, the opening of which has been much anticipated by the people of Hyderabad Karnataka, on August 18, stated a press release from the South Central Railway.

Kharge had laid the foundation stone for the factory in February 2014. The factory, completed at the cost of Rs 80.92 crore, was set up by Tata Projects Ltd, with the executing agency being the Railway Vikas Nigam Ltd (RVNL). The factory has come up on 150 acres provided by the Karnataka government to the Indian railways free of cost.

The Indian Railways has taken up the project to modernize the coaches by replacing the old conventional Linke Hofmann Busch (LHB) coaches with Fiat ones that ensure safe travel. The coaches are designed for higher passenger capacity with an operating speed of 160km.

Currently, the production capacity of LHB coaches is 2,800 per year at different railway coach manufacturing units at Kapurthala, an integral coach factory at Perambur, modern coach factory at Raebareli. One LHB coach requires two Fiat bogies and the bogie manufacturing capacity, however, in the above manufacturing units is just 1,600 coach seats per year.

In a bid to fill the supply-demand gap, two new bogie production units were sanctioned at Budge-Budge in Bengal, and Yadgir in Karnataka (South Central Railways) to manufacture Fiat bogie frames.

The factory will have 470 personnel, including Indian Railway employees, outsourced employees and other local people employed indirectly. The factory has been set ip with pre-engineered building (PEB) technology.

TOI



**MEETING THE DEMAND:** The factory has come up on 150 acres of land provided by the Karnataka government to the Indian railways free of cost

दक्षिण भारत राष्ट्रमत/बेंगलूर.
DAKSHIN BHARAT RASHTRA MATH/SBC
13 AUG 2017



# प्रभु ने संबलपुर से ट्रेन को रवाना किया

**भुवनेश्वर।** रेल मंत्री सुरेश प्रभु ने नई दिल्ली से वीडियो कॉन्फ्रेंसिंग के माध्यम से संबलपुर तक राउरकेला-जम्मू तवी-राउरकेला एक्सप्रेस के विस्तार को शनिवार को हरी झंडी दिखाई।

प्रभु ने पलासा और श्रीकाकुलम स्टेशन पर निशुल्क वाई फाई योजना की भी शुरुआत की और ईस्ट कोस्ट रेलवे के तहत आने वाले पार्वतीपुरम स्टेशन पर यात्रियों के प्रतीक्षा कक्ष और डोरमिट्रीज का उद्घाटन किया। शुरुआती फेरे के तहत विशेष ट्रेन सुबह करीब साढे ग्यारह बजे संबलपुर से जम्मू तवी के लिए रवाना हुई। बहरहाल विस्तारित हिस्से पर नियमित सेवा 13 अगस्त से शुरू नियमित कार्यक्रम के अनुसार रवाना होगी।